-೭-

## ನವಕಾರ ಜಪಿಸುತ್ತಾ-ಜಪಿಸುತ್ತಾ ನನ್ನ ಪ್ರಾಣವು ಶರೀರದಿಂದ ಹೊರಟು ಹೋಗಲಿ

ಮಹಾನುಭಾವರೇ! ಜೈನ ಶಾಸ್ತ್ರಗಳಲ್ಲಿ ಮರಣವನ್ನು ಮಂಗಳವೆಂದೂ, ಅಮಂಗಳವೆಂದೂ ಮನ್ನಿಸಲಾಗಿದೆ. ಕಷಾಯವಶದಿಂದ ಆತ್ಮಹತ್ಯೆ ಮಾಡಿಕೊಳ್ಳುವುದು ಅಮಂಗಳ ಮರಣವೇ ಆಗಿದೆ. ಶಾಂತಿಯಿಂದ ಧರ್ಮಧ್ಯಾನ ಪೂರ್ವಕ ಸ್ವೇಚ್ಛೆಯಿಂದ ಶರೀರವನ್ನು ಬಿಡುವುದು ಮಂಗಲಮಯ ಮರಣವಾಗಿರುತ್ತದೆ. ಆಚಾರ್ಯ ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿಗಳು ಮರಣದ ವಿಚಾರದಲ್ಲಿ ''ಗೊಮ್ಮಟಸಾರ ಕರ್ಮಕಾಂಡ''ದಲ್ಲಿ ಹೀಗೆ ಹೇಳಿದ್ದಾರೆ.-

ಭತ್ತಪಣ್ಣಾವಿಹೀ ಜಹಣ್ಣಮಾತೋಮುಹುತ್ತಯಂ ಹೋದಿ ।
ಬಾರಸವರಿಸಾ ಜೆಟ್ಠಾ ತಮ್ಮಜ್ಝೋ ಹೋದಿ ಮ ಜ್ಝಿಮಯಾ ॥

ಪ್ರಾಯಶಃ ಎಲ್ಲ ಪ್ರಾಣಿಗಳಿಗೂ ತಮ್ಮ ಮೃತ್ಯುವಿನ ಬಗ್ಗೆ ಪೂರ್ವಾಭಾಸ ಉಂಟಾಗುತ್ತದೆ. ಪಶು-ಪಕ್ಷಿಗಳಿಗೂ ಕೂಡಾ ತಮ್ಮ ಮರಣದ ಪೂರ್ವಾಭಾಸ ಉಂಟಾಗುತ್ತದೆ. ಮನುಷ್ಯನಾದರೋ ವಿವೇಕಶೀಲನು ಮತ್ತು ಶಿಕ್ಷಿತನಾದ ಕಾರಣ ಮರಣದ ಆಭಾಸವನ್ನು ತಿಳಿದಿರುತ್ತಾನೆ. ಬಾಲ್ಯಾವಸ್ಥೆಯಲ್ಲಿ ವಿದ್ಯಾಧ್ಯಯನ, ಯೌವನಾವಸ್ಥೆಯಲ್ಲಿ ಮಾತಾ-ಪಿತರ ಸೇವೆ ಮತ್ತು ಗೃಹಸ್ಥಿಯಲ್ಲಿ ಪಾಲನೆ, ವೃದ್ಧಾಪ್ಯದಲ್ಲಿ ಅದನ್ನು ಜನರು ''ನಿವೃತ್ತಿ'' ಎಂದು ಹೇಳುತ್ತಾರೆ. ಹಾಗೆಯೇ ಧರ್ಮಧ್ಯಾನ, ತೀರ್ಥಯಾತ್ರಾ, ಸತ್ಸಂಗ, ಮಾಲೆಯನ್ನು ಕೈಯಲ್ಲಿ ಧರಿಸಿಕೊಂಡು ಭಗವಂತನ ನಾಮಸ್ಮರಣೆ ಮಾಡುತ್ತಾ ಜೀವನ ಸಾಗಿಸುವುದು ಪ್ರಾಯಶಃ ಧಾರ್ಮಿಕ ಪರಿವಾರಗಳ ಜೀವನ ಕ್ರಮವೇ ಆಗಿರುತ್ತದೆ.

ಆಚಾರ್ಯರು ''ಮನುಷ್ಯನಿಗೆ ತನ್ನ ಮರಣದ ಬಗ್ಗೆ ಮರಣ ಸಂಭವಿಸುವುದಕ್ಕಿಂತ ಹನ್ನೆರಡು ವರ್ಷ ಪೂರ್ವದಲ್ಲೇ ತಿಳಿದಿರಬೇಕು'' ಎಂದು ಬರೆದಿರುತ್ತಾರೆ. ಹನ್ನೆರಡು ವರ್ಷಗಳಿಗಿಂತ ಮೊದಲೇ ಅದರ ಆಭಾಸವಾಗದಿದ್ದರೆ ಆರು ವರ್ಷಗಳ ಪೂರ್ವದಲ್ಲಿ, ಆಗಲೂ ತಿಳಿಯದಿದ್ದರೆ ಮೂರು ವರ್ಷಗಳಿಗಿಂತ ಮೊದಲು, ಒಂದು ವರ್ಷಕ್ಕಿಂತ ಮೊದಲು ಅಥವಾ ಆರು ತಿಂಗಳು, ಮೂರು ತಿಂಗಳು, ಒಂದು ತಿಂಗಳು, ಹದಿನೈದು ದಿನ, ಎಂಟು ದಿನಗಳ ಮೊದಲಾದರೂ ಅದರ ಆಭಾಸವಾಗಲೇ ಬೇಕೆಂದು ಹೇಳಿದ್ದಾರೆ. ಇಷ್ಟು ಸಮಯದೊಳಗೆ ಒಂದು ವೇಳೆ ಮರಣದ ಪೂರ್ವ ಸೂಚನೆ ಆಗಲೇ ಇಲ್ಲವೆಂದಾದಲ್ಲಿ ಒಂದು ದಿನ ಮುಂಚಿತವಾದರೂ, ಅಂತರ್ಮುಹೂರ್ತಕ್ಕಿಂತ ಮೊದಲಾದರೂ ಆಭಾಸ ಹೊಂದಿ ಧರ್ಮಧ್ಯಾನದಲ್ಲಿ ಪ್ರವೃತ್ತನಾಗಬೇಕು.



ಆಚಾರ್ಯ ಸಮಂತಭದ್ರರು ''ರತ್ನಕರಂಡ ಶ್ರಾವಕಾಚಾರ''ದಲ್ಲಿ ಮರಣಕ್ಕಾಗಿ 'ನಿಷ್ಪ್ರತಿಕಾರೇ' ಎಂಬ ಶಬ್ದ ಪ್ರಯೋಗ ಮಾಡುತ್ತಾ ಹೀಗೆ ಹೇಳಿದ್ದಾರೆ;-

ಉಪಸರ್ಗೇ ದುರ್ಭಿಕ್ಷೇ ಜರಸಿ ರುಜಾಯಾಂ ಚ ನಿಷ್ಪ್ರತಿಕಾರೇ ।
ಧರ್ಮಾಯ ತನುವಿಮೋಚನಮಾಹುಃ ಸಲ್ಲೇಖನಾಮಾರ್ಯಾಃ ॥

ನೀವು ಅಂತಿಮ ಕ್ಷಣದ ವರೆಗೂ ಬದುಕಲು ಪ್ರಯತ್ನಿಸಿರಿ, ಔಷಧಿ ತೆಗೆದುಕೊಳ್ಳಿರಿ, ಉಪಚಾರ ಮಾಡಿಕೊಳ್ಳಿರಿ ಜೀವವನ್ನು ಉಳಿಸಿಕೊಳ್ಳಲು ಏನೇನು ಪ್ರಯಾಸ ತೆಗೆದುಕೊಳ್ಳಬೇಕೋ ಅದನ್ನು ಮಾಡಿರಿ. ಆದರೆ ಯಾವಾಗ ಡಾಕ್ಟರ್ ಕೂಡಾ 'ಇನ್ನು ಬದುಕುವ ಆಸೆ ಏನೂ ಉಳಿದಿಲ್ಲ'' ಎಂದು ಹೇಳುತ್ತಾರೋ ಆಗ ಶಾಂತಿಯಿಂದ ಧರ್ಮಧ್ಯಾನ ಪೂರ್ವಕ ಮರಣಕ್ಕೆ ಸಿದ್ಧರಾಗಿರಿ. ಆ ಹೊತ್ತಿನಲ್ಲಿ ಹಾಯ್ ಹಾಯ್ ಎಂದು ಕೂಗಾಡುತ್ತಾ 'ನನ್ನನ್ನು ಇಂಜೆಕ್ಷನ್ ಕೊಟ್ಟಾದರೂ ಬದುಕಿಸಿರಿ' ಎಂದು ಗೋಗರೆಯುತ್ತಾ ಸಾಯುವುದು ಇದೆಯಲ್ಲಾ ಅದು ಧರ್ಮಾತ್ಮರಿಗೆ ಹೇಳಿದ ಲಕ್ಷಣವಲ್ಲ.

ಅಪರಾಧಿಗಳಿಗೆ ಗಲ್ಲು ಶಿಕ್ಷೆ (ಫಾಸಿ) ವಿಧಿಸುವುದಿದೆ. ಆ ಶಿಕ್ಷೆಗೊಳಗಾದವನಿಗೆ ಒಂದು ದಿನ ಮೊದಲೇ ಗಲ್ಲು ಶಿಕ್ಷೆಯ ನಿರ್ದಿಷ್ಟ ಸಮಯವನ್ನು ತಿಳಿಸಲಾಗುತ್ತದೆ. ಅನಂತರ 'ನಿನಗೇನಾದರೂ ಅಂತಿಮ ಸದಿಚ್ಛೆ ಇದ್ದರೆ ತಿಳಿಸು' ಎಂದು ಹೇಳುವುದೂ ಇದೆ. ಆ ಹೊತ್ತಿನಲ್ಲಾದರೂ ಧರ್ಮಧ್ಯಾನ ಮಾಡಿರಿ. ಈ ಪರಂಪರೆಯು ಸಾಮ್ರಾಟ ಅಶೋಕನ ಕಾಲದಿಂದಲೂ ನಡೆದು ಬರುತ್ತಿದೆ. ಅವನ ಶಿಲಾಲೇಖದಲ್ಲಿ ಕೂಡಾ ಈ ಭಾವವು ಉತ್ಕೀರ್ಣಗೊಂಡಿದೆ.

ಮರಣದ ಆಭಾಸವು ಒಂದು ವೇಳೆ ನಲವತ್ತೆಂಟು ನಿಮಿಷಗಳ ಮೊದಲಷ್ಟೇ ದೊರಕಿತೆಂದಾದರೂ ಸಾಕು, ಆ ಕ್ಷಣವೇ ಮೋಹವನ್ನು ತೊರೆದು ಧರ್ಮಧ್ಯಾನ ಪೂರ್ವಕ ಶಾಂತಿಯಿಂದ ಮರಣ ಹೊಂದಬೇಕು. ಅಂಥವನ ಭವಿಷ್ಯವೂ ಉಜ್ವಲವಾಗಬಹುದು. ನಾವು ಮರಣವನ್ನು ಮಂಗಲಮಯವನ್ನಾಗಿ ಮಾಡಬೇಕು. ಧರ್ಮಧ್ಯಾನಪೂರ್ವಕ ಶಾಂತಿಯಿಂದ ಮೋಹರಹಿತರಾಗಿ ಮರಣಹೊಂದುವುದೇ ಮೃತ್ಯು ಮಹೋತ್ಸವ, ಮರಣ ಮಹೋತ್ಸವ. ನಮ್ಮಲ್ಲಿ ಮರಣವನ್ನು ಅಮಂಗಲವೆಂದು ಮನ್ನಿಸಲಾಗಿಲ್ಲ, ಧರ್ಮಧ್ಯಾನ ಪೂರ್ವಕ ಸಂಭವಿಸಿದ ಮರಣವನ್ನು ಮಂಗಲಮಯವೆಂದು ಮನ್ನಿಸಲಾಗಿದೆ.

ಮೃತ್ಯುವಂತೂ ಎಲ್ಲರಿಗೂ ನಿಶ್ಚಿತ. ಮೃತ್ಯು ಸ್ವಾಭಾವಿಕವೂ ಆಗಿರುತ್ತದೆ. ಅದು ಅಕಾಲ ಮೃತ್ಯುವೂ ಆಗಬಹುದು. 'ಭಗವತೀ ಆರಾಧಾನಾ' ಮತ್ತು 'ಧವಲಾ' ಗ್ರಂಥಗಳಲ್ಲಿ ಅವೆರಡನ್ನೂ ಹೇಳಿದೆ. ದೇವಗತಿ ಮತ್ತು ನರಕಗತಿಯಲ್ಲಿ ಅಕಾಲ ಮೃತ್ಯುವಾಗುವುದಿಲ್ಲ. ಚರಮದೇಹಧಾರಿಗೆ (ಅಂತಿಮ ದೇಹ ಯಾವ ದೇಹದಿಂದ ಮೋಕ್ಷ ಪ್ರಾಪ್ತಿಯಾಗುತ್ತದೋ ಅದು) ಕೂಡಾ ಅಕಾಲ ಮೃತ್ಯುವಾಗುವುದಿಲ್ಲ. ಸಾಮಾನ್ಯ ಮನುಷ್ಯ, ಪಶು-ಪಕ್ಷಿ ಇವರಿಗೆಲ್ಲ ಸ್ವಾಭಾವಿಕ ಮೃತ್ಯುವೂ ಆಗುತ್ತದೆ, ಅಕಾಲಮೃತ್ಯುವೂ ಆಗುತ್ತದೆ. ಒಂದು ಗಡಿ

ಯಾರವು ಎಂಟು ದಿನಗಳ ವರೆಗೆ ನಡೆಯುವಂತೆ ಕೀ ಕೊಟ್ಟಿದೆ ಎಂದು ತಿಳಿಯೋಣ. ಮಧ್ಯದಲ್ಲಿ ಆದರ ಸ್ಪ್ರಿಂಗ್ ತುಂಡಾಗಿಹೋದರೆ ಅದು ನಿಂತುಬಿಡುತ್ತದೆ. ಇದೇ ರೀತಿ ಕರ್ಮಗಳ ಉದೀರಣದಿಂದ ಆಯುಷ್ಯವನ್ನು ಬೇಗನೆ ಭೋಗಿಸುವ ಸಂದರ್ಭ ದಲ್ಲಿ ಮಧ್ಯದಲ್ಲಿಯೇ ಮೃತ್ಯು ಸಂಭವಿಸುತ್ತದೆ. ಕಾಲವು (ಸ್ವಾಭಾವಿಕ) ಮೃತ್ಯುವಿನೊಂದಿಗೆ ಅಕಾಲ ಮೃತ್ಯುವನ್ನೂ ಮನ್ನಿಸಿದೆ. ಕೆಲವರು ಅಕಾಲ ಮೃತ್ಯುವನ್ನು ಸ್ವೀಕರಿಸುವುದಿಲ್ಲ, ಎಲ್ಲವೂ ನಿಶ್ಚಿತ, ಆದ ಕಾರಣ ಅಕಾಲ ಮೃತ್ಯು ಎಂಬುದಿಲ್ಲ ಎಂದು ತಿಳಿಯುತ್ತಾರೆ.

ಯಾವನೇ ವ್ಯಕ್ತಿಯಾಗಲಿ ಅಳುತ್ತಾ, ದುಃಖಿಸುತ್ತಾ, ಕೈಕಾಲುಗಳೆಲ್ಲ ಶಕ್ತಿಯಿಲ್ಲದಂತಾಗಿ ಸಾಯುವುದನ್ನು ಬಯಸುವುದಿಲ್ಲ, ಪ್ರತಿಯೊಬ್ಬ ಮನುಷ್ಯನೂ ಶಾಂತಿಯಿಂದಲೇ ಮರಣ ಹೊಂದಲು ಬಯಸುತ್ತಾನೆ. ಪೊರಕೆ ಹಿಡಿದುಕೊಂಡು ಕಸ ಗುಡಿಸುವ ಅವಿದ್ಯಾವಂತೆ ಹರಿಜನ ಮಹಿಳೆ ಕೂಡಾ ಸಾಧ್ವೀಜೀ (ಚಂದ್ರಮತಿ ಮಾತಾಜೀ)ಯೊಂದಿಗೆ ಶಾಂತಿ ಪೂರ್ವಕ ಮರಣ ಹೊಂದುವ ಆಶೀರ್ವಾದವನ್ನು ಬಯಸುತ್ತಾಳೆ. ಭಗವಂತನ ಹೆಸರನ್ನು ಉಚ್ಚರಿಸುತ್ತಾ ಸಾಯಲು ಬಯಸುತ್ತಾಳೆ. ನೀವಾದರೋ ಪ್ರತಿದಿನ ಪೂಜೆ ಮಾಡುತ್ತೀರಿ, ಅಕ್ಕಿಯನ್ನು ಏರಿಸುತ್ತೀರಿ, ಧಾರ್ಮಿಕ ಜೀವನವನ್ನು ನಡೆಸುತ್ತೀರಿ, ನೀವು ಎಂತಹ ಮರಣವನ್ನು ಬಯಸುತ್ತೀರಿ ? ಪ್ರಪಂಚದ ಪ್ರತಿಯೊಬ್ಬ ಮನುಷ್ಯ ಶಾಂತಿಯಿಂದಲೇ ಮರಣ ಹೊಂದಲು ಬಯಸುತ್ತಾನೆ. ಆದ ಕಾರಣ "ದುಃಖ ಕ್ಷಾಓ-ಕಮ್ಮ ಕ್ಷಾಓ" ಎಂದು ಭಾವನೆ ಮಾಡುತ್ತಾರೆ ಮತ್ತು ನನ್ನದು ಸಮಾಧಿ ಮರಣವಾಗಲಿ ಎಂದು ಬಯಸುತ್ತಾರೆ. ನಮ್ಮ ಶಾಸ್ತ್ರಗಳಲ್ಲಿ ಮರಣದ ಬಗ್ಗೆ ಬಹಳ ವಿಚಾರ ಮಾಡಲಾಗಿದೆ.

**ಪ್ರಾಣ ಪ್ರಯಾಣ ವೇಲಾಯಾಮ್ ನಹೀಂ ಲೋಕೇ ಪ್ರತಿಕ್ರಿಯಾ ।**

ಶರೀರದಿಂದ ಆತ್ಮನು ಬೇರೆಯಾಗುವುದೇ ಮರಣ. ಆತ್ಮನಾದರೋ ಅಜರ- ಅಮರ. ಅವನಿಗೆ ಮರಣವಿಲ್ಲ, ಆದರೆ ಇದರಲ್ಲಿ ವಿಶ್ವಾಸವಿಲ್ಲದ ಕಾರಣ ಮೋಹಕ್ಕೊಳಗಾದ ಮನುಷ್ಯನು ಮಾತ್ರ ಸಂಸಾರದಲ್ಲಿ ಆಸಕ್ತನಾದ ಕಾರಣ ಮರಣದ ಹೊತ್ತು ಬಂದಾಗ ಹೆದರುತ್ತಾನೆ. "ಇನ್ನು ಏನಾಗಬಹುದು ?" ಎಂದು ಗಾಬರಿಯಾಗುತ್ತಾನೆ. ಪರಿವಾರದ ಜನರು ಕೂಡಾ ಅಂತಹ ವ್ಯಕ್ತಿಯನ್ನು ಶಾಂತಿಯಿಂದ ಸಾಯಲು ಬಿಡುವುದಿಲ್ಲ, ಅವನಿಗೆ ಣಮೋಕಾರ ಮಂತ್ರವನ್ನೂ ಹೇಳಿಕೊಡುವುದಿಲ್ಲ, ಅವರು ಮೊದಲು ಅವನನ್ನು ಕೇಳುವುದು- 'ನೀನು ನಿನ್ನ ಹಣವನ್ನು ಎಲ್ಲಿ ಇಟ್ಟಿರುವೆ? ಎಲ್ಲಿ ಏನೇನು ವಸ್ತುಗಳನ್ನು ಇಟ್ಟಿರುವೆ' ಎಂದು. ಆದರೆ ಇನ್ನೊಂದು ಸುಸಂಸ್ಕೃತ ಜನ ಸಮುದಾಯವು ಹೀಗೆ ಹೇಳುವುದಿದೆ- "ಅಳುವುದನ್ನು ನಿಲ್ಲಿಸು, ಕೇವಲ ಣಮೋಕಾರ ಮಂತ್ರವನ್ನು ಉಚ್ಚರಿಸು ಇಲ್ಲವೇ ಕೇಳು" ಇನ್ನು ಕೆಲವು ಪರಿವಾರದ ಜನರು ಹೀಗೆ ಹೇಳುವುದುಂಟು- "ಈಗ ನಮ್ಮ ಚಿಂತೆ ಮಾಡಬೇಡಿ, ನೀವು ಜೀವನದಲ್ಲಿ ಏನೇನು ಮಾಡಬೇಕೆಂದು ಬಯಸಿದ್ದೀರೋ ಅವೆಲ್ಲವನ್ನೂ ಮಾಡಿದ್ದೀರಿ. ಈಗ ಯಾರಿಗಾಗಿ ದುಃಖಿಸುವುದು ? ನಿಮಗೆ ಯಾರ ಹೆದರಿಕೆಯಿದೆ ?"



ಹೀಗೆ ಅವರು ಶಾಂತಿಯಿಂದ ಧರ್ಮಧ್ಯಾನ ಪೂರ್ವಕ ದೇಹತ್ಯಾಗ ಮಾಡುತ್ತಾರೆ. ಆ ಹೊತ್ತಿನಲ್ಲಿ ನಾವು ಮಾಡಬೇಕಾದುದು ಏನೆಂದರೆ ಮೃತ್ಯು ಶಯ್ಯೆಯಲ್ಲಿರುವವರಿಗೆ ವೈರಾಗ್ಯ ಭಾವನೆಯನ್ನು ಕೇಳಿಸುವುದು, ಆ ಹೊತ್ತಿನಲ್ಲಿ ನಾವು ದ್ವಾದಶ ಭಾವನೆಯನ್ನು ತಿಳಿಯಪಡಿಸುವುದು. ನಾವು ಜೀವನವಿಡೀ ಶಾಸ್ತ್ರ-ಸ್ವಾಧ್ಯಾಯ ಮಾಡುತ್ತೇವೆ, ತೀರ್ಥಯಾತ್ರೆ ಮಾಡುತ್ತೇವೆ. ಅಂತ್ಯದಲ್ಲಿ ಮಾತ್ರ ಧರ್ಮವನ್ನು ಕೈ ಬಿಟ್ಟರೆ ಏನು ಸಾಧಿಸಿದಂತಾಯಿತು ? ಜೀವನದಲ್ಲಿ ಹಿಂದೆ ಮಾಡಿದ ಧಾರ್ಮಿಕ ಕಾರ್ಯದಿಂದ ಏನು ಲಾಭ ಸಿಕ್ಕಿದಂತಾಯಿತು? ಒಬ್ಬ ವಿದ್ಯಾರ್ಥಿ ಬಹಳ ಶ್ರಮಪಟ್ಟು ಹನ್ನೆರಡು ತಿಂಗಳು ಕಲಿಯುತ್ತಾನೆ. ಆದರೆ ಪರೀಕ್ಷೆಯಲ್ಲಿ ಅನುತ್ತೀರ್ಣ(ಫೇಲ್) ಆದನೆಂದರೆ ಆ ಓದಿನಿಂದ ಏನು ಲಾಭ ? ಇದು ನಾವು ತಿಳಿದುಕೊಳ್ಳಬೇಕಾದ ವಿಚಾರ. ಜನ್ಮವುಂಟೆಂದಾದರೆ ಅದರ ಜೊತೆಗೇ ಮೃತ್ಯು ಕೂಡಾ ಇದೆ ಎಂಬುದನ್ನು ನಾವು ತಿಳಿಯುವುದಷ್ಟೇ ಅಲ್ಲ, ಅನುಭವಕ್ಕೆ ತಂದುಕೊಳ್ಳಬೇಕು. ಅದರಲ್ಲಿ ಯಾವುದೇ ಪರಿವರ್ತನೆಯೂ ಆಗಲಾರದು.

ಸಿಕಂದರ್ ಬಾದಶಹನು ಅನಾರೋಗ್ಯ ಪೀಡಿತನಾಗಿದ್ದ, ಅವನಿಗೆ ಬಹಳ ಔಷಧಿ ಉಪಚಾರಗಳಾದವು. ಕೊನೆಗೆ ವೈದ್ಯರು "ಈಗ ಉಪಚಾರವೆಲ್ಲ ಮುಗಿಯಿತು, ಇನ್ನು ನೀವು ಉಳಿಯುವಹಾಗಿಲ್ಲ" ಎಂದು ಹೇಳಿದರು. ಅದಕ್ಕೆ ಸಿಕಂದರನು "ಸರಿ, ನನ್ನ ಸಂಪೂರ್ಣ ವೈಭವವನ್ನು ರಥಗಳ ಮೇಲೆ ಹೇರಿಕೊಂಡು ಶವಯಾತ್ರೆಯಲ್ಲಿ ಸಾಗಿರಿ. ನನ್ನ ಶವವನ್ನು ವೈದ್ಯರು, ಚಿಕಿತ್ಸಕರು ಎಲ್ಲರೂ ಸೇರಿ ತಮ್ಮ ಹೆಗಲಮೇಲೆಯೇ ಹೊತ್ತುಕೊಂಡು ಹೋಗಬೇಕು ಮತ್ತು ಸಂಸ್ಕಾರದಲ್ಲಿ ನನ್ನ ಎರಡೂ ಕೈಗಳನ್ನು ಹೊರಗಿರಿಸಬೇಕು. ಇದರಿಂದ ಜಗತ್ತು ಅರಿಯಲಿ ವೈದ್ಯರು ರೋಗದ ಉಪಚಾರವನ್ನು ಮಾತ್ರ ಮಾಡಬಲ್ಲರು, ಆದರೆ ಮರಣವನ್ನು ತಪ್ಪಿಸಲು ಅವರಿಂದಾಗದು. ಈ ಸಮಗ್ರ ದೌಲತ್-ವೈಭವವೆಲ್ಲವೂ ಇಲ್ಲಿಯೇ ಉಳಿಯುತ್ತದೇ ಹೊರತು ಮರಣ ಹೊಂದುವವನ ಜೊತೆಯಲ್ಲಿ ಎಂದಿಗೂ ಹೋಗಲಾರದು. ಎಂಬುದನ್ನು ತಿಳಿಯಬೇಕು. ಅದನ್ನೇ ಇಲ್ಲಿ ಹೀಗೆ ಹೇಳಲಾಗಿದೆ.

**ಸಿಕಂದರ್ ಶಾಹ್ ಜಾತಾರಹಾ, ಸಭೀ ಹಾಲೀ ಹವಾಲೀ ಥೇ ।**
**ಸಭೀ ಥೀ ಸಂಗ್ ಮೇ ದೌಲತ್, ಮಗರ್ ದೋ ಹಾಥ್ ಖಾಲೀ ಥೇ ॥**

ನಮ್ಮ ಜಯಧವಲಾ, ಗೊಮ್ಮಟಸಾರ, ಭಗವತೀ ಆರಾಧನಾ ಹೀಗೆ ಎಲ್ಲ ಗ್ರಂಥಗಳಲ್ಲೂ "ಮರಣದ ಹೊತ್ತಿನಲ್ಲಿ ಆಹಾರವನ್ನು ತ್ಯಾಗ ಮಾಡು. ಒಂದು ವೇಳೆ ಆಕುಲತೆ ಅಧಿಕವಾದರೆ ನೀರು ಕುಡಿಯುವುದನ್ನು ಮಾಡಬಹುದು" ಎಂದು ಹೇಳಲಾಗಿದೆ. ಆಚಾರ್ಯರು ಕೂಡಾ ಹೀಗೆ ಹೇಳಿದ್ದಾರೆ- "ನಿರಾಕುಲತೆಯಿಂದ ಮರಣ ಹೊಂದಬೇಕು, ಆಕುಲತೆಯಿಂದಲ್ಲ" ಅವರು ಅದರ ವಿಧಿಯನ್ನೂ ನಿರ್ದೇಶಿಸಿದ್ದಾರೆ.

ಜಗತ್ತಿನ ಯಾವುದೇ ಪ್ರಾಣಿಯೂ ಸಾಯಲು ಬಯಸುವುದಿಲ್ಲ, ರಾಜ ಯುಧಿಷ್ಠಿರನೊಂದಿಗೆ ಒಬ್ಬ ವ್ಯಕ್ತಿ ಕೇಳಿದ- 'ರಾಜನ್, ಜಗತ್ತಿನಲ್ಲಿ ಪ್ರತಿದಿನವೂ ಒಂದಲ್ಲ ಒಂದು

ಹೊಸ ಆಶ್ಚರ್ಯ ಉತ್ಪನ್ನವಾಗುತ್ತದೆ. ನನಗೆ ತಾವು ಅಂತಹ ಒಂದು ಆಶ್ಚರ್ಯವನ್ನು ಹೇಳಿರಿ ! ಅನಂತರ ಆ ರೀತಿಯ ಹೊಸ ಆಶ್ಚರ್ಯ ಬೇರೆ ಇಲ್ಲದಿರುವಂಥಾದ್ದೂ ಆಗಿರಬೇಕು ಹಾಗೂ ಅತ್ಯಂತ ದೊಡ್ಡ ಆಶ್ಚರ್ಯ ಯಾವುದಿದೆಯೋ ಅದನ್ನು ಹೇಳಿರಿ'' ಎಂದನು. ಅದಕ್ಕೆ ರಾಜಾ ಯುಧಿಷ್ಠಿರನು ಹೀಗೆ ಉತ್ತರಿಸಿದ;-

**ಅಹೂನ್ಯ ಅಹನ್ಯಾಹ್ನಿ ಭೂತಾನಿ ಗಚ್ಛಂತಿ ಯಮ ಮಂದಿರಮ್ ।**
**ಶೇಷಾಜ್ಜೀವಿತೋಮಿಚ್ಛಂತಿ ಕಿಮಾಶ್ಚರ್ಯ ಅತಃ ಪರಮ್ ॥**

'ಇಂತಹ ವ್ಯಕ್ತಿ ಸತ್ತ'' ಎಂಬ ಮಾತುಗಳನ್ನು ನಾವು ಪ್ರತಿದಿನ ಕೇಳುತ್ತಿರುತ್ತೇವೆ. ಜನರು ಸಾಯುವುದನ್ನು ನಮ್ಮ ಕಣ್ಣುಗಳಿಂದ ನೋಡುತ್ತಲೂ ಇರುತ್ತೇವೆ. ಕೆಲವು ಜನರು ತಮ್ಮ ಸ್ವಂತ' ಹೆಗಲ ಮೇಲೆ ಶವವನ್ನೆತ್ತಿಕೊಂಡು ಶ್ಮಶಾನಕ್ಕೆ ಹೋಗುತ್ತಾರೆ. ಅಲ್ಲಿ ಶವಕ್ಕೆ ಬೆಂಕಿ ಕೊಟ್ಟು ಭಸ್ಮ ಮಾಡುವುದನ್ನು ಕಣ್ಣಾರೆ ಕಾಣುತ್ತೇವೆ. ಅದೇ ರೀತಿ ನಮ್ಮ ಸರದಿಯೂ ಒಂದು ದಿನ ಬಂದೇ ಬರುತ್ತದೆಂದು ತಿಳಿದಿರುತ್ತೇವೆ. ಇಷ್ಟೆಲ್ಲಾ ತಿಳಿದರೂ, ನೋಡಿದರೂ ನಾವು ಮಾತ್ರ ಸಾಯಲು ಸಿದ್ಧರಿಲ್ಲ''

ಸಾಯುವವರು ಸಾಲುಗಟ್ಟಿ ನಿಂತಿದ್ದಾರೆ. ಎಲ್ಲರೂ ತಮ್ಮ ತಮ್ಮ ಸರದಿ ಬಂದಾಗ ಹೋಗುವವರೇ. ಆದರೆ ಈ ಸಾಲಿನಲ್ಲಿ ಮುಂದೆ ಬಂದು ನಿಲ್ಲಲು ಯಾರೊಬ್ಬರೂ ತಯಾರಿಲ್ಲ. ಜಗತ್ತಿನಲ್ಲಿ ಎಲ್ಲ ವಸ್ತುಗಳಿಗಾಗಿಯೂ ಅವುಗಳನ್ನು ಪಡೆಯಲು ಸಾಲುಗಟ್ಟಿ ನಿಲ್ಲಬೇಕಾಗುತ್ತದೆ. ಅಲ್ಲಿ ಮಾತ್ರ ಸಾಲಿನಲ್ಲಿ ಮುಂದೆ ನಿಲ್ಲಲು ಎಲ್ಲರೂ ಬಯಸುತ್ತಾರೆ. ಆ ಮೇಲೆ ಹೀಗೆ ಹೇಳುವುದೂ ಉಂಟು-''ನಾನು ಸ್ವಲ್ಪ ಅವಸರದಲ್ಲಿದ್ದೇನೆ, ಯಾರಾದರೂ ನನ್ನನ್ನು ಮುಂದೆ ನಿಲ್ಲಲು ಬಿಡುವಿರಾ ? ನಿಮ್ಮ ಸ್ಥಾನದಲ್ಲಿ ನಾನು ನಿಲ್ಲಲೇ ?'' ಆದರೆ ಮೃತ್ಯುವಿನ ಸಾಲಿನಲ್ಲಿ ಬಂದಾಗ ಮಾತ್ರ ಅವನು ಮುಂದೆ ನಿಲ್ಲಲು ಸಿದ್ಧನಿಲ್ಲ. ಮರಣವು ನಿಶ್ಚಿತವೆಂದು ಗೊತ್ತಿದ್ದರೂ ಯಾವನೊಬ್ಬನೂ ಸಾಯಲು ಸಿದ್ಧನಿಲ್ಲದಿರುವುದು ಮೂರು ಲೋಕದಲ್ಲೂ ಅತಿ ದೊಡ್ಡ ಆಶ್ಚರ್ಯವಲ್ಲದೇ ಮತ್ತೇನು? ಅಸಂಖ್ಯಾತ ಪ್ರಾಣಿಗಳು ಪ್ರತಿದಿನ ಸಾಯುತ್ತವೆ, ಪ್ರತಿದಿನ ಹುಟ್ಟುತ್ತವೆ. ಜನನ-ಮರಣಕ್ಕೆ ಯಾವುದೇ ಮುಹೂರ್ತ ಎಂಬುದಿಲ್ಲ.

ಆಚಾರ್ಯ ಶಾಂತಿಸಾಗರ್‌ಜೀ ಮಹಾರಾಜರು ಅಮಾವಾಸ್ಯೆಯ ದಿನ ಸಲ್ಲೇಖನ ಧಾರಣೆ ಮಾಡಿದಾಗ ಜನರು ''ಮಹಾರಾಜ್‌ಜೀ ಇಂದು ಅಮಾವಾಸ್ಯೆಯಲ್ಲವೇ ?'' ಎಂದು ಆತಂಕ ವ್ಯಕ್ತಪಡಿಸಿದರು. ಕೂಡಲೇ ಆಚಾರ್ಯರು ''ಏನು ಜನನ ಮರಣಕ್ಕೆ ಮುಹೂರ್ತವೆಂಬುದಿದೆಯೇ ? ಮುಹೂರ್ತ ನೋಡಿಕೊಂಡು ಯಾರಾದರೂ ಹುಟ್ಟುತ್ತಾರೆಯೇ ಅಥವಾ ಸಾಯುತ್ತಾರೆಯೇ ? ಯಾರಾದರೂ ಬಾವಿಯಲ್ಲಿ ಬಿದ್ದರೆಂದಾದರೆ ಅವರನ್ನು ಮೇಲೆತ್ತಲು ಮುಹೂರ್ತ ನೋಡಬೇಕೆಂದಿದೆಯೇ ? ಆಕಸ್ಮಿಕ ಘಟನೆಗೆ ಮುಹೂರ್ತ ನೋಡಬೇಕಾದ ಆವಶ್ಯಕತೆಯೇ ಇಲ್ಲ'' ಎಂದರಂತೆ. ಯಾವನೇ ವ್ಯಕ್ತಿಯಾ



ಗಲಿ ಅವನು ವ್ರತ ಮಾಡುತ್ತಾನೆಂದಾದರೆ, ಅಷ್ಟಮಿ-ಚತುರ್ದಶಿಗೆ ಏಕಾಶನ (ಒಂದೇ ಊಟ) ಉಪವಾಸ ಇತ್ಯಾದಿಗಳನ್ನು ಮಾಡುತ್ತಾನೆಂದಾದರೆ, ಉಪಸರ್ಗ ಬಂದೊಡನೆ ಯಾವುದಕ್ಕೂ ಹೆದರಲಾರ, ಧರ್ಮ ಕಾರ್ಯಕ್ಕೆ ಹಿಂಜರಿಯಲಾರ.

**ಯಃ ಜೀವಸ್ಯೋಪಕಾರಾಯ ತದ್ ದೇಹಸ್ಯಪಕಾರಾಯ ।**

ಜಪತಪ, ಆಸನ, ಉಪವಾಸಾದಿಗಳಿಂದ ಸ್ವಲ್ಪ ಕಷ್ಟವೇನೋ ಆಗುತ್ತದೆ. ಇವುಗಳಿಂದ ಅಪಕಾರವೂ ಆಗುತ್ತದೆ. ಆದರೆ ಜೀವಕ್ಕೆ ಅದರಿಂದ ಉಪಕಾರವಿದೆ. ಕೇವಲ ಶರೀರದ ಬಗ್ಗೆಯೇ ಧ್ಯಾನವಿರಿಸಿಕೊಂಡು, ಅದಕ್ಕೆ ಮಾತ್ರ ಉಪಕಾರ ಮಾಡುವುದಾದರೆ ಧರ್ಮ ಉಳಿಯುವುದಿಲ್ಲ. ಅನ್ನ-ಪಾನಗಳಲ್ಲಿ ನಿರ್ಬಂಧವಿಲ್ಲ, ಯಾವುದೇ ನಿಯಮ ಪಾಲಿಸಬೇಕಾಗಿಲ್ಲ, ಹೀಗಿದ್ದರೂ ಧರ್ಮ ನಡೆಯುತ್ತದೆ ಎಂದಾದರೆ ಜನರೆಲ್ಲಾ ಇಲ್ಲಿಗೇ ಬರಬಹುದು. ಏಕೆಂದರೆ ಸಹಜ ಪ್ರಿಯವಾಗಿರುತ್ತದೆ. ಆದರೆ ಅದರಿಂದ ಧರ್ಮ ಪಾಲನೆಯಾಗುವುದಿಲ್ಲ, ಅದು ಧರ್ಮವೂ ಅಲ್ಲ. ಸಂಯಮದಿಂದ, ತಪಸ್ಸಿನಿಂದ ಶರೀರಕ್ಕೆ ಕಷ್ಟವೇನೋ ಆಗುತ್ತದೆ. ಕಬ್ಬನ್ನು ಯಂತ್ರಕ್ಕೆ ಹಾಕುವುದರಿಂದ ಅದರಲ್ಲಿ ರಸ ಹೊರಡುತ್ತದೆ. ಹಾಗೆಯೇ ಜಪ-ತಪ, ಸ್ವಾಧ್ಯಾಯ, ಧ್ಯಾನ, ಯಾತ್ರೆ ಇತ್ಯಾದಿಗಳಿಂದ ಶರೀರಕ್ಕೆ ಕಷ್ಟ ಸಂಭವಿಸುತ್ತದೆ. ಆದರೆ ಆನಂದವೂ ಸಿಗುತ್ತದೆ.

ಡೆಹರಾಡೂನ್ ಸಮೀಪದಲ್ಲಿ ಒಂದು ಸ್ಥಾನವಿದೆ. ಅದನ್ನು ''ಡಾಕ್‌ಪತ್ಥರ್'' ಎನ್ನುತ್ತಾರೆ. ಅದೊಂದು ಪರ್ವತಸ್ಥಾನ. ಅಲ್ಲೊಂದು ಕಟ್ಟೆಯನ್ನು ಕಟ್ಟಿಸಲಾಗುತ್ತಿತ್ತು. ಅದಕ್ಕೆ ಮೂವತ್ತೆರಡು ಜೈನ ಇಂಜಿನಿಯರರು ನಿಯುಕ್ತರಾಗಿದ್ದರು. ಆ ಜಾಗದಲ್ಲಿ ಕಟ್ಟೆ ಕಟ್ಟಲು ನಮಗೆ ಬಹಳ ಕಷ್ಟಪಡಬೇಕಾಯಿತೆಂದು ಅವರು ಹೇಳಿದರು. ಯಾವ ರೀತಿಯ ಕಷ್ಟವೆಂದರೆ ಕಾಡಿನಲ್ಲಿ ಟೆಂಟ್ ಹಾಕಬೇಕಾಗುತ್ತಿತ್ತು, ಕಾಡು ಪ್ರಾಣಿಗಳ ಬಾಧೆಯಿಂದಾಗಿ ರಾತ್ರಿಯಿಡೀ ನಿದ್ರೆ ಮಾಡಲು ಸಾಧ್ಯವಾಗುತ್ತಿರಲಿಲ್ಲ. ಮನೆ ದೂರವಿದ್ದುದರಿಂದ ಅನ್ನ-ಪಾನಾದಿಗಳನ್ನು ತರಿಸಿ ಸೇವಿಸುವುದು ತುಂಬಾ ಕಷ್ಟವಾಗುತ್ತಿತ್ತು. ಕಷ್ಟದಿಂದಾದರೂ ಯಾವಾಗ ಆ ಕಟ್ಟೆಯ ನಿರ್ಮಾಣ ಕಾರ್ಯವು ಮುಗಿಯಿತೋ, ಆಗ ಅಲ್ಲಿಗೆ ವಿದ್ಯುಚ್ಛಕ್ತಿಯೂ ಬಂತು, ಎಲ್ಲವೂ ಸುಖಮಯವಾಗಿ ಪರಿಣಮಿಸಿತು. ಆದರೆ ಇಲ್ಲೊಂದು ವಿಚಾರವಿದೆ. ಅದೇನೆಂದರೆ- ಅವರು ನೌಕರಿಯ ಕಾರಣದಿಂದ ಇಷ್ಟೆಲ್ಲಾ ಕಷ್ಟ ಸಹಿಸಿಕೊಳ್ಳಲು ಸಿದ್ಧರಾಗುತ್ತಾರೆ. ಒಂದು ಹೊತ್ತು ಭೋಜನ ಮಾಡಿ ತೃಪ್ತಿ ಹೊಂದುತ್ತಾರೆ, ಹಾಗೆಯೇ ಧರ್ಮ-ಧ್ಯಾನದಲ್ಲೂ ಕಷ್ಟವಿದೆ, ಏಕಾಶನದಿಂದಲೂ ಕಷ್ಟವಿದೆ. ಹಣ ಮಾಡುವುದಕ್ಕಾಗಿ ಅನೇಕ ಕಷ್ಟ ಪಡಲು ಸಿದ್ಧರಾಗುತ್ತಾರೆ. ಆದರೆ ಧರ್ಮಕಾರ್ಯದಲ್ಲಿ ಕಷ್ಟಪಡಲು ಮನಸ್ಸಿರುವುದಿಲ್ಲ. ಧನ-ಸಂಪತ್ತು ವ್ಯಾಪಾರವಾದರೋ ಸಾಧನವಾದರೆ ಆತ್ಮಕಲ್ಯಾಣವು ಸಾಧ್ಯವೆನಿಸುತ್ತದೆ. ಸಾಧ್ಯವನ್ನು ಮರೆತು ನಡೆಯುವುದಾದರೂ ಹೇಗೆ ? ಈ ಸಾಧನವು ಮನುಷ್ಯನನ್ನು ಉನ್ನತಿಗೇರಿಸಲು ಸಾಧ್ಯವಾಗಲಾರದು. ಸಾಧ್ಯವು ವೀತರಾಗ ಪರಿಣಾಮವಾಗಿದೆ, ಧರ್ಮಧ್ಯಾನವಾಗಿದೆ. ಅದನ್ನು ಮಾತ್ರ ಮರೆಯಬಾರದು.

ಮಹಾನುಭಾವರೇ ! ಜನನ-ಮರಣವು ಅನಾದಿಯಿಂದಲೇ ಇರುವುದಾಗಿದೆ. ಎಲ್ಲ ದಾರ್ಶನಿಕರೂ, ಸಂತರೂ ಮರಣವನ್ನು ಮಹತ್ವಪೂರ್ಣವೆಂದು ಮನ್ನಿಸಿದ್ದಾರೆ. ಕಬೀರರು ಹೀಗೆ ಹೇಳಿದ್ದಾರೆ:-

**ಮರ್‌ನೋ ಭಲೋ ವಿದೇಶ್‌ಕೋ, ಜಹಾಂ ನ ಅಪ್ನೋ ಕೋಯ್ ।**

ಪರಿವಾರದ ವ್ಯಕ್ತಿಯಾಗದೆ, ಪರಿವಾರದ ಯಾವನೇ ಒಬ್ಬ ಸದಸ್ಯನಾಗದೇ ಇರುವ ಕಡೆ ಮರಣ ಸಂಭವಿಸಲಿ. ಇಲ್ಲವಾದರೆ ಅವರು ಮೋಹವಶದಿಂದಾಗಿ ಶಾಂತಿಯಿಂದ ಮರಣ ಹೊಂದಲು ಬಿಡಲಾರರು. ಆಮೇಲೆ ಹೇಳುತ್ತಾರೆ:- ''ಡಾಕ್ಟರ್ ಸಾಹೇಬರೇ, ಈ ಮನುಷ್ಯ ಇನ್ನು ಸ್ವಲ್ಪ ಹೊತ್ತು ಮಾತನಾಡುವಂತೆ ಇನ್ನೊಂದು ಇಂಜಕ್ಷನ್ ಕೊಡಿ, ವ್ಯಾಪಾರದ ಬಗ್ಗೆ ಆತನಲ್ಲಿ ಕೇಳುವುದಕ್ಕಿದೆ. ಮುಖ್ಯವಾದ ಫೈಲ್(ಕಾಗದ-ಪತ್ರ) ಎಲ್ಲಿಟ್ಟಿದ್ದಾರೆಂದು ತಿಳಿಯಲಿಕ್ಕಿದೆ.'' ಜೀವನವಿಡೀ ಅಂಥಾದ್ದೇನನ್ನೂ ಕೇಳಲಿಲ್ಲ, ಈಗ ಅಂತ್ಯ ಕಾಲ ಬಂದಾಗ ಣಮೋಕಾರ ಮಂತ್ರ ಕೇಳಿಸುವುದನ್ನು ಬಿಟ್ಟು ಈ ರೀತಿ ಬೇಡುವುದನ್ನೆಲ್ಲಾ ಕೇಳಿ ಅವರನ್ನು ಸಾಯಲೂ ಬಿಡುವುದಿಲ್ಲ. ಪರಿವಾರದ ಸದಸ್ಯರ ಕರ್ತವ್ಯವಾದರೂ ಇಲ್ಲಿ ಏನಾಗಿರುತ್ತದೆ?'' ತಾವು ಈ ಪ್ರಾಪಂಚಿಕವಾದ ಎಲ್ಲವನ್ನೂ ಬಿಟ್ಟುಬಿಡಿ, ಕೇವಲ ಧರ್ಮಧ್ಯಾನದಲ್ಲಿ ನಿರತರಾಗಿ'' ಎಂದು ಹೇಳಬೇಕು.

ಒಬ್ಬ ವ್ಯಕ್ತಿ ಮರಣಶಯ್ಯೆಯಲ್ಲಿದ್ದ. ಇಡೀ ಪರಿವಾರವು ಅವನ ಬಳಿ ಸೇರಿತು. ಎಲ್ಲರೂ ಅವನಿಗೆ ಣಮೋಕಾರ ಮಂತ್ರವನ್ನು ಕೇಳಿಸುತ್ತಿದ್ದರು. ಮುಂದುಗಡೆಯ ಹಿತ್ತಿಲಲ್ಲಿದ್ದ ಹಸು ಪೊರಕೆಯೊಂದನ್ನು ಬಾಯಿಯಲ್ಲಿ ಕಚ್ಚಿ ಮೇಲುತ್ತಿತ್ತು. ಆಗ ಆ ಮರಣೋನ್ಮುಖನಾಗಿದ್ದ ವ್ಯಕ್ತಿ ಅದನ್ನು ನೋಡಿ 'ಪೊರಕೆ ಪೊರಕೆ' ಎಂದು ಕೂಗಾಡಿದ. ಪರಿವಾರದ ಜನ ಈತನಿಗೇನಾಯಿತು ಎಂದು ಅತ್ತಿತ್ತ ನೋಡಿದರು. 'ಓಹೋ, ಈ ಹಸು ಆ ಪೊರಕೆಯನ್ನು ತಿನ್ನುತ್ತಿದೆ. ನಾನಾದರೋ ಸಾಯುವ ಸ್ಥಿತಿಯಲ್ಲಿದ್ದೇನೆ. ಈ ಹಸು ಪೊರಕೆಯನ್ನು ಈಗ ಸಂಪೂರ್ಣ ತಿಂದುಬಿಟ್ಟರೆ ಮತ್ತೆ ಹೊಸದೊಂದನ್ನು ತರುವವರಾರು?'' ಹೀಗೆ ಯೋಚಿಸುತ್ತ ಚಿಂತೆಯಲ್ಲಿದ್ದ ಅವನು ಣಮೋಕಾರವನ್ನು ಕೇಳಿಸಿಕೊಳ್ಳಲಿಲ್ಲ. ಇದರ ಅರ್ಥವೇನೆಂದರೆ ಮಿಥ್ಯಾದೃಷ್ಟಿ ಜೀವನು ಸಾಯುವ ಹೊತ್ತಿನಲ್ಲೂ ಣಮೋಕಾರವನ್ನು ಕೇಳಿಸಿಕೊಳ್ಳುವುದಿಲ್ಲ ಮತ್ತು ಸಮ್ಯಕ್‌ದೃಷ್ಟಿ ಜೀವನು ಧರ್ಮಾತ್ಮನೂ ಮೋಹರಹಿತನೂ ಆಗಿದ್ದು ಣಮೋಕಾರ ಮಂತ್ರ, ಭಕ್ತಾಮರ ಸ್ತೋತ್ರ ಇತ್ಯಾದಿಗಳನ್ನು ಕೇಳುತ್ತಾ ಶಾಂತಿಯಿಂದ ಪ್ರಾಣ ಬಿಡುತ್ತಾನೆ.

ಧರ್ಮಸ್ಥಳದ ಧರ್ಮಾಧಿಕಾರಿ ಮಂಜಯ್ಯ ಹೆಗ್ಗಡೆಯವರು ದೊಡ್ಡ ಧರ್ಮಾತ್ಮರಾಗಿದ್ದರು, ಜ್ಞಾನಿಗಳಾಗಿದ್ದರು. ಯಾವಾಗ ಅವರಿಗೆ ಮರಣ ಸಮೀಪಿಸಿತೆಂಬ ವಿಚಾರ ತಿಳಿಯಿತೋ ಆಗ ಅವರು ತಮ್ಮ ಸಹೋದರನನ್ನು ಕರೆದು ಅವರಿಗೆ ಬೀಗದ ಕೈಯನ್ನು ಕೊಟ್ಟು ''ಈಗ ಮನೆತನದ ಪರಂಪರೆಯನ್ನು ನೀನು ನಡೆಸಿಕೊಂಡು ಹೋಗು. ನನಗೆ ಎಲ್ಲ ಧರ್ಮಪಾಠಗಳನ್ನು ಕೇಳಿಸುವಂತೆ ಮಾಡು'' ಎಂದು ಹೇಳಿದರು. ಆಗ ಎಲ್ಲರೂ



ಧರ್ಮಸ್ತುತಿ ಪಾಠಗಳನ್ನು ಹೇಳಲು ತೊಡಗಿದರು. ಪರಿವಾರದ ಜನರೆಲ್ಲರೂ ಒಟ್ಟುಗೂಡಿದರು. ಅವರಿಗೊಬ್ಬಳು ಮಗಳಿದ್ದಳು. ಅವಳು ಅಲ್ಲಿಗೆ ಬಂದು ಅಳತೊಡಗಿದಳು. ಕೂಡಲೇ ತಂದೆ ಹೇಳಿದರು- ''ಇಲ್ಲಿ ಅಳುವ ಅವಶ್ಯಕತೆಯೇನೂ ಇಲ್ಲ. ಈಗ ನನ್ನ ಕುರಿತಾಗಿ ಸ್ವಲ್ಪ ಚಿಂತನೆ ಮಾಡು. ಧರ್ಮದ ವಿಚಾರ ಹೇಳಿ ನಾನು ಅದನ್ನು ಕೇಳುವಂತೆ ಮಾಡುವುದಾದರೆ ಮಾತ್ರ ಇಲ್ಲಿ ಕುಳಿತುಕೋ. ಅನ್ಯಥಾ ಹೊರಗಡೆ ಹೋಗು.'' ಇಷ್ಟು ಹೇಳಿದ ಅವರು ಕಣ್ಣುಗಳನ್ನು ಮುಚ್ಚಿ ಧರ್ಮ ಪಾಠವನ್ನು ಕೇಳುತ್ತಲೇ ಇದ್ದರು. ಅಂತರಂಗದಲ್ಲಿ ಜಾಗೃತರಾಗಿದ್ದರು. ಮಗಳನ್ನು ನೋಡಿ ಅವರು ಅಳಲಿಲ್ಲ, ಆಕೆಯೊಂದಿಗೆ ತನ್ನ ಮೋಹವನ್ನೇನೂ ಪ್ರಕಟಿಸಲಿಲ್ಲ. ಅವರು ನೇಮಿಸಾಗರ್‌ಜೀ ವರ್ಣೀಜಿಯವರೊಡನೆ ಏನೋ ಮಾತನಾಡುವುದಕ್ಕಾಗಿ ಕರೆಸಿದರು. ಹೆಗಡೇಜಿಯವರು ಮೂವತ್ತೆರಡು ವರ್ಷಗಳ ಕಾಲ ವರ್ಣೀಜೀಗೆ ಆಹಾರ ನೀಡಿದ ಮೇಲೆಯೇ ತಾವು ಭೋಜನ ಸ್ವೀಕಾರ ಮಾಡಿದವರಾಗಿದ್ದರು. ಹೆಗಡೆಯವರ ಅಪೇಕ್ಷೆಯಂತೆ ಅಲ್ಲಿಗೆ ಬಂದ ವರ್ಣೀಜಿಯವರ ಕಣ್ಣುಗಳು ಒದ್ದೆಯಾಗಿದ್ದವು. ಹೆಗಡೇಜೀ ಹೇಳಿದರು- ''ವರ್ಣೀಜೀ, ಅಳುವವರು ಬಹಳ ಮಂದಿ ಇದ್ದಾರೆ. ಈಗ ನನ್ನ ಅಂತಿಮ ಸಮಯ; ಸ್ವಲ್ಪ ಧರ್ಮದ ವಿಚಾರವಾಗಿ ಹೇಳಿರಿ, ಧರ್ಮ ಸಂಗತಿಯನ್ನು ನಾನು ಕೇಳುವಂತೆ ಮಾಡಿರಿ. ಸಮವಸರಣದ ವರ್ಣನೆಯನ್ನು ಹೇಳಿರಿ.'' ಅವರ ಇಚ್ಛೆಯಂತೆ ಧರ್ಮ ಪಾಠ ಪ್ರವಚನ ನಡೆಯಿತು. ಹಾಗೆ ನಡೆಯುತ್ತಿದ್ದಂತೆ ಹೆಗಡೆಯವರು ಶಾಂತಿಯಿಂದ ದೇಹತ್ಯಾಗ ಮಾಡಿದರು.

ಆಚಾರ್ಯ ಶಾಂತಿಸಾಗರ್‌ಜೀ ಮಹಾರಾಜರು ಮೂವತ್ತೊಂದು ದಿನಗಳ ಕಾಲ ಸಲ್ಲೇಖನ ಧಾರಣೆ ಮಾಡಿದರು. ಪ್ರಾರಂಭದ ಹದಿನೇಳು ದಿನಗಳ ಕಾಲ ಅವರು ನೀರನ್ನು ಮಾತ್ರ ಸೇವಿಸಿದರು. ಅನಂತರ ಹದಿನೇಳು ದಿನ ನೀರನ್ನೂ ತ್ಯಾಗ ಮಾಡಿದರು. ಒಬ್ಬರು ಅವರನ್ನು ಕೇಳಿದರು. ''ಮಹಾರಾಜ್‌ಜೀ,ನಿಮ್ಮ ಮರಣಾ ನಂತರ ಆ ಶರೀರವನ್ನು ಏನು ಮಾಡಬೇಕು?'' ಶಾಂತಿಸಾಗರರು ಹೇಳಿದರು- ''ಈ ಎಲುಬು-ಚರ್ಮವನ್ನೇನು ಮಾಡಲು ಸಾಧ್ಯ ? ಅದನ್ನೇಕೆ ನನ್ನೊಡನೆ ಕೇಳುತ್ತೀರಿ ? ನಿಮಗಿಷ್ಟ ಬಂದಂತೆ ಮಾಡಿರಿ.''

ಯಾರಿಗೆ ಧರ್ಮಧ್ಯಾನದಲ್ಲಿ ಆತ್ಮಧ್ಯಾನದಲ್ಲಿ ಸ್ವಲ್ಪವಾದರೂ ಅಭಿರುಚಿಯಿದೆಯೋ, ಅಂತಃಕರಣದ ಕ್ರಿಯೆಯಿದೆಯೋ, ಜ್ಞಾನವಿದೆಯೋ ? ಅವರ ಸಂಪೂರ್ಣ ಜೀವನದ ಸಾಧನೆ ಮತ್ತು ಜಪ-ತಪಗಳ ಫಲವೇ ಸಲ್ಲೇಖನ ಹಾಗೂ ಮಾಂಗಲಿಕ ಮರಣ. 12ತಿಂಗಳು ಓದಿದಮೇಲೂ ಒಬ್ಬ ವ್ಯಕ್ತಿ ಅಸಫಲನಾದರೆ ಆ ಓದಿನಿಂದ ದೊರಕಿದ ಲಾಭವೇನು ?

ಜೀವನ ಸಾಗಿಸುವುದಕ್ಕಾಗಿ ಅನೇಕ ಕಲೆಗಳ ಆಶ್ರಯ ಪಡೆಯಬೇಕಾಗುತ್ತದೆ. ಆದರೆ ಆ ಕಲೆಗಳು ನಮ್ಮ ಜೊತೆ ಬರುವವುಗಳಲ್ಲ. ಜೊತೆಯಲ್ಲಿ ಬರುವ ಕಲೆ ಯಾವುದೆಂದರೆ ಕೇವಲ ಧರ್ಮಕಲೆ. ಆದ ಕಾರಣ ಧರ್ಮವನ್ನು ಎಂದಿಗೂ ಮರೆಯಬೇಡ. ಯಾರಲ್ಲಿ ಧರ್ಮದ ಚಿಂತನೆಯಿದೆಯೋ, ಯಾವನು ಧರ್ಮಧ್ಯಾನಿಯಾಗಿರುತ್ತಾನೋ, ಅವನ

ಮರಣವು ಮಾತ್ರವೇ ಶಾಂತಿಯಿಂದ ಕೂಡಿರಬಹುದು.

ಮರಣವನ್ನು ಮಾಂಗಲಿಕವನ್ನಾಗಿ ಮಾಡಲು ಒಂದು ವಿಧಿಯಿದೆ. ಅದು 'ನಿಷ್ಪತ್ತಿ ಕಾರ್' ಅಂತಿಮ ಕ್ಷಣದವರೆಗೂ ಬದುಕುವ ಪ್ರಯತ್ನ ಮಾಡು. ಆದರೆ ಯಾವಾಗ ಮರಣ ನಿಶ್ಚಿತವಾಗುತ್ತದೋ ಆಗ ಸೆಲ್ಲೇಖನ ಧಾರಣೆ ಮಾಡು. ಸಲ್ಲೇಖನ ಎಂದರೆ ಆತ್ಮಹತ್ಯೆ ಯಲ್ಲ. ಯಾವಾಗ ಜೀವನದ ಆಸೆ ಸ್ವಲ್ಪವೂ ಉಳಿದಿರುವುದಿಲ್ಲವೋ, ಆಯಸ್ಸು ಕೂಡಾ ಮುಗಿದಿದೆಯೋ, ಆಗಲಾದರೂ ಮೃತ್ಯುವನ್ನು ಸ್ವಾಗತಿಸು. ಆ ಸಮಯದಲ್ಲೂ ಮೃತ್ಯು ಅತಿ ಹತ್ತಿರ ಬಂದು ನಿಂತಾಗ 'ಭಗವಂತಾ, ನನ್ನನ್ನು ಉಳಿಸು, ಡಾಕ್ಟರ್ ನನ್ನನ್ನು ಬದುಕಿಸಿ' ಎಂದು ಬೇಡಿಕೊಂಡರೆ ಯಾರೊಬ್ಬರೂ ನಿನ್ನನ್ನು ಉಳಿಸಲಾರರು.

**ಮಣಿಮಂತ್ರ ತಂತ್ರ ಬಹು ಹೋಈ, ಮರ್‌ತೇನ ಬಚಾವೇ ಕೋಈ ।**

''ಮಹಾರಾಜ್‌ಜೀ, ಮರಣ ಬಾರದಿರುವಂತಹ ಯಾವುದಾದರೂ ಮಂತ್ರ ಹೇಳಿ ಕೊಡುವಿರಾ ?'' ಅಂತಹ ಮಂತ್ರವನ್ನು ಕೊಡುವುದಾದರೂ ಎಲ್ಲಿಂದ ? ಮಣಿ, ಮಂತ್ರ, ತಂತ್ರ, ಔಷಧ ಎಲ್ಲವೂ ಆ ಹೊತ್ತಿನಲ್ಲಿ ವ್ಯರ್ಥ. ಆದ ಕಾರಣ ಯಾವಾಗ ನಿಮಗೆ ಇನ್ನು ಬದುಕಲು ಸಾಧ್ಯವಿಲ್ಲವೆಂಬ ನಿಶ್ಚಿತ ಭಾವವುಂಟಾಗುತ್ತದೋ ಮತ್ತು ತನ್ನ ಆಯಸ್ಸು ಮುಗಿಯಿ ತೆಂಬ ತೀರ್ಮಾನಕ್ಕೆ ಬರುತ್ತೀರೋ, ಆಗ ಮೋಹವನ್ನು ಬಿಟ್ಟುಬಿಡಿ. ತ್ಯಾಗ ಮಾಡುತ್ತಾ ಪಂಚಾಣುವ್ರತವನ್ನು ಸ್ವೀಕರಿಸುತ್ತಾ ಶರೀರವನ್ನು ಬಿಟ್ಟುಬಿಡಿ.

ಡಿಲ್ಲಿಯಲ್ಲಿ ಕುಂದಕುಂದ ಭಾರತೀಯ ಅಧ್ಯಕ್ಷ ಕಶ್ಮೀರ್‌ಚಂದ್ ಎಂಬುವವರಿದ್ದರು. ಇದು ನಾಲ್ಕು ವರ್ಷಗಳ ಹಿಂದಿನ ಮಾತು. ಒಂದು ದಿನ ಅಪರಾಹ್ನ ಎರಡು ಗಂಟೆಗೆ ಅವರು ''ಈಗಲೇ ಇದೇ ಹೊತ್ತಿನಲ್ಲಿ ದೇವರ ಅಭಿಷೇಕ ಮತ್ತು ಪೂಜೆಯನ್ನು ನೋಡ ಬೇಕು. ಅದಕ್ಕೆ ವ್ಯವಸ್ಥೆ ಮಾಡಿರಿ'' ಎಂದು ಸಂಬಂಧಪಟ್ಟವರಿಗೆ ತಿಳಿಸಿದರು. ಕೂಡಲೇ ಅದರ ವ್ಯವಸ್ಥೆಯಾಯಿತು. ಕಶ್ಮೀರ್‌ಚಂದ್ ಗಂಧೋದಕ ಸ್ವೀಕರಿಸಿದರು. ಅನಂತರ ತಾವು ಧರಿಸಿದ ಬಟ್ಟೆಗಳನ್ನೆಲ್ಲಾ ಕಳಚಿ ನೆಲದ ಮೇಲೆ ಹಾಕಿದರು. ಕುಳಿತುಕೊಂಡು ಣಮೋಕಾರ ಮಂತ್ರ ಹೇಳುತ್ತಾ ಹೇಳುತ್ತಾ ಸ್ವಲ್ಪ ಹೊತ್ತಿನಲ್ಲೇ ಸಹಜವಾಗಿಯೇ ದೇಹತ್ಯಾಗ ಮಾಡಿ ದರು. ಅವರ ಇಡೀ ಪರಿವಾರ ಕುಳಿತ ಹಾಗೆಯೇ ಇತ್ತು. ಅಲ್ಲಿ ಯಾರೊಡನೆಯೂ ಅವರು ಏನೂ ಮಾತಾಡಿರಲಿಲ್ಲ.

ಸಲ್ಲೇಖನ ಸಮಾಧಿ ಮರಣವೆಂದರೆ ಆತ್ಮಹತ್ಯೆಯಲ್ಲ. ಅದು ಸ್ವಾಭಾವಿಕ, ಪ್ರಕ್ರಿಯೆ, ಸಾಧನೆಯಾಗಿದೆ.

**ಮೃತ್ಯೋರ್ವಿಭೇಷಿ ಕಿಂ ಮೂಢ ಭೀತಂ ಮುಂಚತಿನೋ ಯಮಃ ।**
**ಅಜಾತಂ ನೈವ ಗೃಹ್ಣಾತಿ ಕುರು ಯತ್ನಮಜನ್ಮನಿ ॥**

ಕೈಕಾಲು ಹಿಡಿದು ಬೇಡುವುದರಿಂದ ಮೃತ್ಯು ನಿಮ್ಮನ್ನು ಬಿಟ್ಟುಬಿಡುತ್ತದೆಯೆಂದಾದರೆ



ಅಗತ್ಯವಾಗಿ ಕೈಕಾಲು ಜೋಡಿಸಿ ಹಿಡಿಯಿರಿ. ಅಳುವುದೋ ಕೂಗಾಡುವುದೋ ಏನಾದರೂ ಮಾಡುವುದರಿಂದಲೂ ಮೃತ್ಯು ಬಿಟ್ಟುಬಿಡುವುದಾದರೆ ಅದನ್ನೂ ಮಾಡಿರಿ. ಆದರೆ ಅಳುವು ದರಿಂದಲೋ ಬೊಬ್ಬೆ ಹೊಡೆಯುವುದರಿಂದಲೋ ಮರಣವನ್ನು ತಪ್ಪಿಸಲಿಕ್ಕಾಗದ ಮೇಲೆ ನಗುವುದರಲ್ಲಿ ಅಥವಾ ಸಂತೋಷದಿಂದ ಇರುವುದರಲ್ಲಿ ಏನು ತೊಂದರೆ?

ಮಗು ಹುಟ್ಟಿದೊಡನೆಯೇ ಅಳುತ್ತದೆ. ''ಅರೆ ! ನಾನು ಯಾವ ಲೋಕಕ್ಕೆ ಬಂದೆ ನಪ್ಪಾ'' ಎಂದು ಅದು ಅಳುವುದು. ಆ ಹೊತ್ತಿನಲ್ಲಿ ಜನರೆಲ್ಲ ನಗುತ್ತಿರುತ್ತಾರೆ, ಸಂತೋಷ ವನ್ನು ಹಂಚಿಕೊಳ್ಳುತ್ತಾರೆ. ಆದರೆ ಮಗು ಮಾತ್ರ ಅಳುತ್ತಲೇ ಇರುತ್ತದೆ. ನಾವು ಮರಣದ ಹೊತ್ತಿನಲ್ಲಿ ನಗುತ್ತಾ ಪ್ರಾಣ ಬಿಡುವಂತಾಗಲಿ ಎಂದು ಬಯಸುತ್ತೇವೆ. ಹಾಗೆಯೇ ಪರಿ ವಾರದ ಜನರು ಹಾಗೂ ಸಮಾಜ ''ಈತ ಎಂತಹ ಧರ್ಮಾತ್ಮ ವ್ಯಕ್ತಿಯಾಗಿದ್ದ ! ನಾವು ಕೂಡಾ ಅವನ ಹಾಗೆಯೇ ಆಗೋಣ'' ಎಂದು ಅಳುತ್ತಾ ಸ್ಮರಣೆ ಮಾಡುತ್ತಾ ಕಣ್ಣು ಗಳಿಂದ ನೀರು ಸುರಿಸಲಿ ಎಂದು ಆಶಿಸುತ್ತೇವೆ.

ಜಪಾನಿನಲ್ಲಿ ಹಿರೋಶಿಮಾ-ನಾಗಸಾಕಿಯ ಮೇಲೆ ಬಾಂಬ್ ಹಾಕಿದ ವ್ಯಕ್ತಿ ಬಾಂಬ್ ಹಾಕಿದ ಮೇಲೆ ಜಪಾನಿನ ಸ್ಥಿತಿಯನ್ನು ನೋಡಿದಾಗ ಅವನ ಹೃದಯ ಕರಗಿ ಹೋಯಿತು. ''ನಾನು ಹುಟ್ಟದೇ ಇದ್ದಿದ್ದರೆ ಚೆನ್ನಾಗಿತ್ತು. ನಾನು ಬಹು ದೊಡ್ಡ ಪಾಪ ಮಾಡಿದೆ. ಈಗ ನನ್ನ ಆಯುಷ್ಯ ಮುಗಿಯುತ್ತಾ ಬಂತು. ಇನ್ನು ಸ್ವಲ್ಪ ಹೆಚ್ಚು ಕಾಲ ನನ್ನ ಆಯುಷ್ಯ ಇರು ತ್ತಿದ್ದರೆ ಪ್ರಾಯಶ್ಚಿತ್ತವನ್ನಾದರೂ ಮಾಡಿಕೊಳ್ಳುತ್ತಿದ್ದೆ. ಅದಕ್ಕೂ ಈಗ ಸಮಯವಿಲ್ಲ'' ಹೀಗೆ ಯೋಚನೆ ಮಾಡುತ್ತಾ ಅವನು ಪ್ರಾಣ ಬಿಟ್ಟನು. ಸರಕಾರದ ಆಜ್ಞೆಗೆ ಬದ್ಧನಾಗಿ ನಾನು ಹೀಗೆ ಮಾಡಬೇಕಾಯಿತಲ್ಲ ಎಂಬ ಅತ್ಯಂತ ವೇದನೆ ಅವನ ಮನಸ್ಸಿನಲ್ಲಿತ್ತು. ''ನನ್ನ ಕೈಗಳಿಂದಲೇ ಈ ಪಾಪ ಕೃತ್ಯ ನಡೆದು ಹೋಯಿತಲ್ಲಾ ! ನನ್ನ ಜೀವನ ವ್ಯರ್ಥವಾಯಿತು'' ಹೀಗೆಲ್ಲಾ ಅವನು ತನ್ನ ಆತ್ಮಕಥೆಯಲ್ಲಿ ವರ್ಣನೆ ಮಾಡಿದ್ದಾನೆ.

ಇತರರ ಜೀವನದೊಂದಿಗೆ ನಿಮ್ಮ ಜೀವನದ ಸಮತೆಯನ್ನು ಮಾಡಿಕೊಳ್ಳಿ. ನಾವು ಹೇಗೆ ಬದುಕಲು ಬಯಸುತ್ತೇವೋ ಹಾಗೆಯೇ ಇತರ ಪ್ರಾಣಿಗಳು ಕೂಡಾ ಬದುಕಲು ಬಯಸುತ್ತವೆ. ಇನ್ನೊಬ್ಬರನ್ನು ಕೊಂದು ನೀವು ಸುಖಿಗಳಾಗಲಾರಿರಿ. ಜಗತ್ತಿನಲ್ಲಿ ನಿತ್ಯವೂ ಹತ್ಯೆಗಳು ಆಗುತ್ತಿರುತ್ತವೆ. ಇಂತಹ ಹತ್ಯೆಗಳಿಂದ ಯಾರಾದರೂ ಸುಖಿಗಳಾಗಿರಲು ಸಾಧ್ಯವೇ ?

ಅಮೆರಿಕಾದಲ್ಲಿ ಒಬ್ಬ ವ್ಯಕ್ತಿ ಮಾಂಸದ ವ್ಯಾಪಾರ ಮಾಡುತ್ತಿದ್ದ. ಅವನು ಹಸುಗಳ ಮಾಂಸವನ್ನು ಹೋಟೆಲ್‌ಗಳಿಗೆ ಸರಬರಾಜು ಮಾಡುತ್ತಿದ್ದ. ಅದಕ್ಕಾಗಿಯೇ ಅವನು ಹಸು ಗಳನ್ನು ಸಾಕುತ್ತಿದ್ದ. ಒಂದು ದಿನ ಅವನು ಒಂದು ದನವನ್ನು ಕೊಲ್ಲಲು ಸಿದ್ಧತೆ ಮಾಡುತ್ತಿದ್ದ. ಯಾವಾಗ ಅವನು ಆ ಹಸುವಿನ ಹತ್ತಿರ ಹೋದನೋ ಆಗ ಅದು ಅವನನ್ನು ವಾತ್ಸಲ್ಯ ಭಾವದಿಂದ ನೋಡಿ ನೆಕ್ಕಲು ಪ್ರಾರಂಭಿಸಿತು. ಆಗ ಅವನು ಹೀಗೆ ಯೋಚಿಸತೊಡಗಿದ-

''ನಾನಾದರೋ ಈ ಹಸುವನ್ನು ಕೊಲ್ಲುವ ವಿಚಾರವಾಗಿ ಯೋಚಿಸುತ್ತಿದ್ದೆ, ಇದು ನೋಡಿದರೆ ಕೊಲ್ಲುವುದಕ್ಕೆ ಬಂದ ನನ್ನನ್ನು ಪ್ರೀತಿಸುತ್ತದೆ.'' ಕೊಲ್ಲಲು ತಂದಿದ್ದ ಆಯುಧವು ಅವನ ಕೈಯಿಂದ ಜಾರಿ ಹಾಗೆಯೇ ಕೆಳಗೆ ಬಿತ್ತು, ಅವನು ಹೋಟಲಿನ ಮಾಲೀಕನ ಹತ್ತಿರ ಹೋಗಿ ''ಸ್ವಾಮೀ ನಾನು ನನ್ನ ವ್ಯಾಪಾರವನ್ನು ನಿಲ್ಲಿಸಿಬಿಟ್ಟಿದ್ದೇನೆ. ಇನ್ನು ಮುಂದೆ ಮಾಂಸದ ವ್ಯಾಪಾರ ಮಾಡಲಾರೆ, ದನಗಳನ್ನು ಎಂದಿಗೂ ಕೊಲ್ಲಲಾರೆ'' ಎಂದನು.

ಪ್ರತಿಯೊಂದು ಜೀವಿಯೂ, ಪ್ರತಿಯೊಂದು ಪ್ರಾಣಿಯೂ ಬದುಕಲು ಬಯಸುತ್ತದೆ. ಸ್ವಲ್ಪ ಸಮಯದ ಹಿಂದೆ ಜಪಾನಿನಲ್ಲಿ ಒಂದು ಧರ್ಮ ಸಮ್ಮೇಳನ ನಡೆಯಿತು. ಧರ್ಮ ಮತ್ತು ದರ್ಶನದ ಮೇಲೆ ಚರ್ಚೆಗಳಾದವು. ಭಾರತ ಒಬ್ಬ ಸಂಸತ್ಸದಸ್ಯರಾದ ಶ್ರೀ ರಾಮಚಂದ್ರ ವಿಕಲರು ಹೀಗೆ ಹೇಳಿದರು. ''ಜಗತ್ತಿನ ಎಲ್ಲ ದಾರ್ಶನಿಕರೂ, ಸರ್ವ ಜನರೂ ಮನುಷ್ಯರ ಕುರಿತಾಗಿ ಮಾತ್ರವೇ ಚಿಂತಿಸುತ್ತಾರೆ. ಮನುಷ್ಯ ಹೇಗೆ ಸುಖಿಯಾಗಿರಬಲ್ಲ? ಹೇಗೆ ನಿರೋಗಿಯಾಗಿರಲು ಸಾಧ್ಯ? ಆದರೆ ಭ॥ ಮಹಾವೀರರು ಎರಡೂವರೆ ಸಾವಿರ ವರ್ಷಗಳ ಹಿಂದೆಯೇ ''ಕ್ರಿಮಿ-ಕೀಟಗಳು ಕೂಡಾ ಪ್ರಾಣಿಗಳಾಗಿವೆ. ಅವುಗಳು ಕೂಡಾ ಸುಖಿಗಳಾಗಿ ಬಾಳಲಿ, ದುಃಖಿಗಳಾಗದಿರಲಿ'' ಎಂದು ಹೇಳಿದ್ದಾರೆ. ಇದನ್ನು ಅವರು ಯೋಚಿಸಿದ್ದು ಎರಡೂವರೆ ಸಾವಿರ ವರ್ಷಗಳ ಹಿಂದೆಯೇ. ಎಲ್ಲಿದೆ ಇಂದಿನ ಅಜ್ಞಾನ ಯುಗ ಮತ್ತು ಎಲ್ಲಿದೆ ಮಹಾವೀರರ ಕಾಲದ ಜ್ಞಾನಯುಗ ? ನಮ್ಮ ಭಾವನೆ ಈಗ ಹೀಗಿರಬೇಕು-

ಸುಖೀ ರಹೇ ಸಬ್ ಜೀವ್ ಜಗತ್ ಕೇ ।
**ಕೋಈ ಕಭೀ ನ ಘಬರಾವೇ ॥**

ಇದರಲ್ಲಿ ಪ್ರಾಣಿಗಳಿಗೆ ಅಭಯ ದಾನ ನೀಡಲಾಗಿದೆ. ಇಂದು ಅಭಯಾರಣ್ಯ ಮಾಡುತ್ತಿದ್ದಾರೆ. ಇಡೀ ಕಾಡು ಕಡಿದು ನಾಶವಾಗಿದೆ. ವನ್ಯಜೀವಿಗಳು ಉಳಿದಿರುವ ಸ್ವಲ್ಪವೇ ಕಾಡಿನಲ್ಲಿ ಹೇಗೆ ಜೀವಿಸಬಲ್ಲವು ? ನಮ್ಮ ಶಾಸ್ತ್ರಗಳಲ್ಲಿ ಪ್ರಾರಂಭದಲ್ಲಿಯೇ ಬೇಟೆಯಾಡುವುದನ್ನು ನಿಷೇಧಿಸಿದ್ದಾರೆ. ಪ್ರಾಣಿಗಳಲ್ಲಿ ಎಷ್ಟೋ ಉತ್ತಮ ಪ್ರಜಾತಿಗಳ ಸಂತಾನವೇ ಇಲ್ಲವಾಗಿದೆ. ಆದುದರಿಂದ ಅವುಗಳ ಬೇಟೆ ಮಾಡಬೇಡಿ ಎಂದು ಇಂದು ವಿಜ್ಞಾನಿಗಳು ಹೇಳುತ್ತಿದ್ದಾರೆ.

ಜೀವ ರಕ್ಷೆಯೊಂದಿಗೆ ಸಲ್ಲೇಖನಾ ಕೂಡಾ ಮಹತ್ವಪೂರ್ಣವಾದುದು. ಅದಕ್ಕೊಂದು ವಿಧಿಯಿದೆ. ಸಲ್ಲೇಖನಾಕ್ಕಾಗಿ ಸಮಾಧಿ ಮರಣ, ಮೃತ್ಯುಮಹೋತ್ಸವ, ಪ್ರಾಯೋಪದೇಶನ ಇತ್ಯಾದಿ ಶಬ್ದ ಪ್ರಯೋಗಗಳನ್ನು ಮಾಡಲಾಗಿದೆ. ಹಿಂದೂ ಶಾಸ್ತ್ರಗಳಲ್ಲಿ ಕೂಡಾ ''ಪ್ರಾಯೋಪವೇಶವ'' ಶಬ್ದದ ಪ್ರಯೋಗ ಮಾಡಲಾಗಿದೆ.

ಇಂದು ಈ ವಿಜ್ಞಾನ ಯುಗದಲ್ಲಿ ಕೂಡಾ ಸಮಾಜವನ್ನು ಜೀವಂತವಾಗಿರಿಸಲು ಸಾಹಿತ್ಯವನ್ನು, ಭಾಷೆಯನ್ನು, ವಿದ್ವಾಂಸರನ್ನು ಜೀವಂತವಾಗಿರಿಸಬೇಕು. ಯಾವುದೇ ದೇಶದ,



ಸಮಾಜದ, ಸಂಸ್ಕೃತಿಯನ್ನು ನಷ್ಟಗೊಳಿಸಬೇಕೆಂದಿದ್ದರೆ ಮೊದಲು ಭಾಷೆಯನ್ನು ನಷ್ಟಗೊಳಿಸಿರಿ. ಭಾಷೆಯು ನಷ್ಟವಾದಾಗ ಆದಿವಾಸಿಗಳ ಸ್ಥಿತಿ ಉಂಟಾಗಬಹುದು. ಆದಿವಾಸಿಗಳಿಗೆ ಯಾವುದೇ ಲಿಖಿತ ಸಾಹಿತ್ಯವಿಲ್ಲ, ಯಾವುದೇ ವ್ಯಾಕರಣವಿಲ್ಲ ಮತ್ತು ಯಾವುದೇ ಧರ್ಮಗ್ರಂಥಗಳೂ ಇಲ್ಲ.

ಆದ ಕಾರಣ ನಾವು ನಮ್ಮ ಪ್ರಾಚೀನ ಆದರ್ಶಗಳನ್ನು ಜೀವಂತವಾಗಿರಿಸಲು ಬಯಸುತ್ತೇವೆಂದಾದರೆ ನಾವು ಸಾಹಿತ್ಯ, ತತ್ತ್ವಜ್ಞಾನ, ಭಾಷೆ ಇತ್ಯಾದಿಗಳನ್ನು ಜೀವಂತವಾಗಿರಿಸಬೇಕಾಗಿದೆ. ನಮ್ಮ ಸಮಾಜದಲ್ಲಿ ಅನೇಕ ಉಚ್ಚಕೋಟಿಯ ವಿದ್ವಾಂಸರು ಆಗಿ ಹೋದರು. ಡಾ॥ ಆದಿನಾಥ ನೇಮಿನಾಥ ಉಪಾಧ್ಯೆ (ಆ.ನೇ. ಉಪಾಧ್ಯೆ) ಆಗಿಹೋದರು. ಅವರ ಮರಣದ ನಂತರ ಅವರ ಒಂದು ಸ್ಮರಣಗ್ರಂಥ ಪ್ರಕಾಶಿತವಾಯಿತು. ಅದರಲ್ಲಿ ಹೀಗೆ ಬರೆಯಲಾಗಿತ್ತು- ''ಅವರು ಎಂತಹ ವ್ಯಕ್ತಿಗಳಾಗಿದ್ದರೆಂದರೆ ಅವರಿಗೆ ಯಶಸ್ಸು ಪಡೆಯಬೇಕೆಂಬ ಆಸೆಯಿರಲಿಲ್ಲ, ವೃದ್ಧಾಪ್ಯದ ಭಯವಿರಲಿಲ್ಲ, ಮರಣದ ಭಯವೂ ಇರಲಿಲ್ಲ ಮತ್ತು ಅವರು ಕರ್ತವ್ಯ ನಿರ್ವಹಿಸುತ್ತಾ ಕೊನೆಗೆ ಬಹಳ ಸಹಜ ರೀತಿಯಲ್ಲೇ, ಸಹಜ ಭಾವದಿಂದಲೇ ಶರೀರವನ್ನು ಬಿಟ್ಟುಬಿಟ್ಟರು. ಕೊನೆಗೆ ತನ್ನ ಒಬ್ಬ ರೋಗಿ ಮಿತ್ರನನ್ನು ಸಂಧಿಸುವುದಕ್ಕಾಗಿ ಆಸ್ಪತ್ರೆಗೆ ಹೋದವರು ಅಲ್ಲಿಯೇ ಣಮೋಕಾರ ಉಚ್ಚರಿಸುತ್ತಾ ಶರೀರತ್ಯಾಗ ಮಾಡಿದರು.

ಸಮಾಜದಲ್ಲಿ ವಿದ್ವಾಂಸರ ಪರಂಪರೆಯನ್ನು ಕೂಡಾ ಜೀವಂತವಾಗಿರಿಸಬೇಕು. ಸಾಹಿತ್ಯ ರಕ್ಷಣೆಗಾಗಿಯೂ ದಾನ ನೀಡಬೇಕು. ಎಲ್ಲಿ ಅಜ್ಜನಿಂದ ಹಿಡಿದು ಮೊಮ್ಮಗ-ಮರಿಮಗನವರೆಗೆ ಹೆಸರು ಬರೆಯಲಾಗುತ್ತದೆಯೋ ಅಲ್ಲೆಲ್ಲಾ ದಾನ ಕೊಡುತ್ತಾರೆ, ಧನ ಕೊಡುತ್ತಾರೆ. ಒಂದು ವೇಳೆ ಯಾವುದೇ ಕೆಟ್ಟ ಕೃತ್ಯದ ಕಾರಣದಿಂದ ಪೋಲೀಸ್ ಠಾಣೆಯಲ್ಲಿ ಹೆಸರು ದಾಖಲಾಗಿದ್ದರೆ, ಆ ಹೆಸರನ್ನು ಅಲ್ಲಿಂದ ಅಳಿಸಿ ಹಾಕಲು ಹಣ ಖರ್ಚು ಮಾಡುತ್ತಾರೆ. ಕೇವಲ ಹೆಸರಿಗಾಗಿ ದಾನ ಕೊಡುತ್ತಾರೆ. ಸಿದ್ಧರ ಹೆಸರು ಎಲ್ಲೂ ಇರುವುದಿಲ್ಲ. ಸಾಹಿತ್ಯದಲ್ಲಿ ನಮ್ಮ ಆಚಾರ್ಯರುಗಳ ಹೆಸರುಗಳಾಗಲೀ, ಪರಿಚಯವಾಗಲೀ, ತಂದೆ-ತಾಯಿಯ ಉಲ್ಲೇಖವಾಗಲೀ ಸಿಗುವುದಿಲ್ಲ. ಕೆಲವು ವಿದ್ವಾಂಸರಿಗಂತೂ ಆಚಾರ್ಯರ ಕುರಿತಾಗಿ ಸಂಶೋಧನೆ ನಡೆಸಿ ವಿವರಗಳನ್ನು ಕ್ರೋಢೀಕರಿಸುವ ವೇಳೆಗೆ ಅವರ ತಲೆ ಹಣ್ಣಾಗಿರುತ್ತದೆ. ಯಥಾರ್ಥಕ್ಕಾದರೆ ಇಂದು ಆಚಾರ್ಯರ ಬಲದಿಂದಲೇ ನಾವು ಬದುಕಿ ಉಳಿದಿದ್ದೇವೆ. ಅವರು ನಮಗಾಗಿ ಸಾಹಿತ್ಯವನ್ನು ಬಿಟ್ಟು ಹೋಗದೆ ಇದ್ದರೆ ನಾವು ಹೇಗೆ ಜೀವಿಸಬಲ್ಲೆವು ? ಆಚಾರ್ಯರು ವಿದ್ವಾಂಸರ ಕೈಯಲ್ಲಿ ಶಾಸ್ತ್ರರೂಪೀ ಕೀಲಿಕೈಯನ್ನು ಕೊಟ್ಟರು. ಜೈನ ವಿದ್ಯಾ ಸಂಸ್ಥಾನ ಮತ್ತು ಅಪಭ್ರಂಶ ಸಾಹಿತ್ಯ ಅಕಾಡೆಮಿಯ ಸಂಯೋಜಕರಾದ ಡಾ॥ ಕಮಲಚಂದ್ ಸೋಗಾಣಿ ಪ್ರಾಕೃತ-ಅಪಭ್ರಂಶ ಭಾಷೆಗಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಸಾಹಿತ್ಯ ರಕ್ಷಣೆ ಮಾಡುವುದು ನಮ್ಮ ಹೊಣೆಗಾರಿಕೆಯೂ ಆಗಿರುತ್ತದೆ.

ನೂರು ವರ್ಷ ನಾನು ಬದುಕಬೇಕು ಎಂದು ಪ್ರತಿಯೊಬ್ಬ ವ್ಯಕ್ತಿಯೂ ಬಯಸುತ್ತಾನೆ. ನಾವಾದರೋ ನೂರು ವರ್ಷ ಬದುಕಿ ಎಂದು ಯಾರಿಗೂ ಆಶೀರ್ವಾದ ಮಾಡುವುದಿಲ್ಲ. ಆದರೆ ಎಷ್ಟರ ತನಕ ಆಯುಷ್ಯವಿದೆಯೋ ಅಷ್ಟರ ತನಕ ಧರ್ಮಧ್ಯಾನ ಮಾಡುತ್ತಾ ಇರಿ ಮತ್ತು ಶಾಂತಿಯಿಂದ ದೇಹತ್ಯಾಗ ಮಾಡಿರಿ ಎಂದು ಆಶೀರ್ವದಿಸುತ್ತೇವೆ. ಇದೇ ಜೈನ ಧರ್ಮದ ಸಾರ. ಇದೇ ತೀರ್ಥಂಕರರ ಉಪದೇಶವೂ ಆಗಿದೆ. ಮರಣವನ್ನು ಮಾಂಗಲಿಕವನ್ನಾಗಿ ಮಾಡುವ ವಿಧಿಯನ್ನು ನಮಗೆ ಅವರು ಕಲಿಸಿದರು. ಜೈನ ಧರ್ಮದಲ್ಲಿ ಮರಣವನ್ನು ಅಮಂಗಲವೆಂದು ಹೇಳಿಯೇ ಇಲ್ಲ. ಕಷಾಯವಶದಿಂದ ಆತ್ಮಹತ್ಯಾ ಮಾಡುವುದಾದರೆ ಅದು ಅಮಂಗಲ, ಯಾರ ಮರಣವು ಅಮಂಗಲಿಕವಾಗಿರುತ್ತದೋ ಅವರ ಭವಿಷ್ಯ ಅನಂತಕಾಲದವರೆಗೆ ಕೆಟ್ಟುಹೋಗುತ್ತದೆ. ಆದ ಕಾರಣ ಸರ್ವರ ಮರಣವು ಮಂಗಳಮಯವಾಗಲಿ ಇದೇ ನಮ್ಮ ಆಶೀರ್ವಾದ.

---

## ವಿದ್ಯಾನಂದ ವಚನಾಮೃತ

*ಕಿಸೆಯಲ್ಲಿ ಒಂದು ಚಿಕ್ಕ ಧರ್ಮಗ್ರಂಥವನ್ನಾದರೂ ಇಟ್ಟುಕೊಳ್ಳಬಾರದೇ ? ರೈಲಿನಲ್ಲಿರಲಿ, ವಿಮಾನದಲ್ಲಿರಲಿ, ಬಜಾರಿನಲ್ಲಿರಲಿ ಒಂದು ಧರ್ಮಗ್ರಂಥವನ್ನಿಟ್ಟುಕೊಂಡು ವೇಳೆ ದೊರೆತಾಗಲೆಲ್ಲ ಸ್ವಾಧ್ಯಾಯ ಮಾಡಿದರೆ ನಿಮ್ಮ ಜೀವನ ಸಾರ್ಥಕವಾಗುವುದು. ಇಲ್ಲದಿದ್ದರೆ ಬೆಕ್ಕು, ಇಲಿ, ನೊಣ, ಹಲ್ಲಿ ಇವೆಲ್ಲ ಹುಟ್ಟಿ ಸಾಯುವುದಿಲ್ಲವೇ ? ಹಾಗಾಗುತ್ತದೆ ನಿಮ್ಮ ಜೀವನ. ಅವಕ್ಕೂ ನಮಗೂ ಏನೂ ವ್ಯತ್ಯಾಸ ಉಳಿಯಲಿಕ್ಕಿಲ್ಲ. ನಮ್ಮ ಮಾತು ಕಠೋರವಾದರೂ ಸರಿ, ವಿಚಾರ ಮಾಡಿರಿ. ಕಹಿ ಔಷಧಿಯನ್ನು ರೋಗಿಗೆ ಕುಡಿಸುತ್ತಾರೆ; ಯಾಕೆ ? ಆರೋಗ್ಯ ಉತ್ತಮವಾಗಲಿ ಎಂದು. ರೋಗಿ ಅದು ಕಹಿಯಾದರೂ ಮೂಗು ಹಿಡಿದು ಗಟಗಟನೆ ಕುಡಿಯುತ್ತಾನೆ. ನಮ್ಮ ಮಾತು ನಿಮಗೆ ಕಹಿಯಾಗಿ ಕಾಣಸಬಹುದು. ಆದರೂ ಇದು ಹಿತಕಾರಿ. ತಾವೆಲ್ಲರೂ ತಮ್ಮ ಜೊತೆಯಲ್ಲಿ ಒಂದಾದರೂ ಧರ್ಮದ ಪುಸ್ತಕವನ್ನಿಟ್ಟುಕೊಂಡು ದಿನವೂ ಎರಡು ಪಂಕ್ತಿಯಾದರೂ ಸ್ವಾಧ್ಯಾಯ ಮಾಡಲೇಬೇಕು. ಸ್ವಲ್ಪ ಹೊತ್ತಾದರೂ ಕಣ್ಣುಗಳನ್ನು ಮುಚ್ಚಿ ದೇವರ ಧ್ಯಾನ ಮಾಡಬೇಕು.*

*ಪಶು ಪಕ್ಷಿಗಳು ದೇವರ ಧ್ಯಾನ ಮಾಡುವಂತಿಲ್ಲ, ನಿಮಗೆ ಎಲ್ಲ ಇಂದ್ರಿಯಗಳು ಚೆನ್ನಾಗಿದ್ದರೂ ಧ್ಯಾನ-ಸ್ವಾಧ್ಯಾಯ ಮಾಡದಿದ್ದರೆ ಜೀವನ ನಿರರ್ಥಕ. ಇನ್ನಾದರೂ ನಮ್ಮ ಮಾತನ್ನು ಕೇಳಿ- "ಈ ಹೊತ್ತಿನಿಂದ ಅರ್ಧ ಗಂಟೆಯಾಗಲಿ, ೧೫ ನಿಮಿಷವಾಗಲಿ ಜಪ ಮಾಡುತ್ತೇನೆ. ೫-೧೦ ನಿಮಿಷ ಶಾಸ್ತ್ರ ಓದಿ ಮನನ ಮಾಡಿಕೊಳ್ಳುತ್ತೇನೆ" ಎಂದು ದೃಢ ನಿರ್ಧಾರ ತೆಗೆದುಕೊಳ್ಳಿ. "ಸಂಕಲ್ಪ ಕಲ್ಪ ವೃಕ್ಷಸ್ಯ" ದೃಢ ಸಂಕಲ್ಪ ಮಾಡಿ ಈ ನಿರ್ಧಾರ ಕೈಗೊಂಡರೆ ನಿಮ್ಮ ಭವಿಷ್ಯ ಉಜ್ವಲವಾಗುವುದು.*



-೮-

## ಜಗತ್ತಿನಲ್ಲಿ ಧರ್ಮವೇ ಶಾಶ್ವತ

ಮಹಾನುಭಾವರೇ ! ಭಾರತವು ಒಂದು ಧರ್ಮ ಪ್ರಧಾನ ದೇಶವಾಗಿದೆ. ಈ ದೇಶದ ಶ್ರವಣ ಸಂಸ್ಕೃತಿ-ದರ್ಶನಗಳು ಧರ್ಮದ ಮೇರು ದಂಡಗಳಾಗಿವೆ. ವೀತರಾಗ ದೇವರು, ನಿರ್ಗ್ರಂಥ ಗುರುಗಳು ಮತ್ತು ಸಿದ್ಧಾಂತ ಶಾಸ್ತ್ರಗಳು ಭಗವಾನ್ ಆದಿನಾಥರಿಂದ ಇಂದಿನವರೆಗೆ ಅವಿಚ್ಛಿನ್ನವಾಗಿ ಹರಿದು ಬಂದಿರುವ ಪರಂಪರೆಗಳಾಗಿವೆ. ಅನೇಕ ಅನುಕೂಲ-ಪ್ರತಿಕೂಲ ಪರಿಸ್ಥಿತಿಯಲ್ಲಿ ಇಂದಿಗೂ ನಮ್ಮ ಪರಂಪರೆಯು ಜೀವಂತವಾಗಿ ನಿಂತಿದೆ. ದೇಶದಲ್ಲಿ ಹೂಣರು ಬಂದರು, ಶಕರು ಬಂದರು, ಪೋರ್ಚುಗೀಸರು ಬಂದರು, ಮೊಗಲರು ಬಂದರು, ಬ್ರಿಟಿಷರು ಬಂದರು ಇವರೆಲ್ಲಾ ತಮ್ಮ ತಮ್ಮ ಮತ-ಸಿದ್ಧಾಂತಗಳನ್ನು ನಮ್ಮ ಮೇಲೆ ಹೇರುತ್ತಾ ಬಂದರು. ಬಲಾತ್ಕಾರ ಮಾಡಿದರು, ತಮ್ಮ ನೀತಿ-ನಿಯಮಗಳನ್ನು ಭಾರತೀಯರ ಮೇಲೆ ಹೇರಿದರು. ಹೀಗಿದ್ದರೂ, ಇವರೆಲ್ಲರ ಮಧ್ಯೆ ಕೂಡಾ ಜೈನ ಧರ್ಮವು ಹೇಗೆ ಜೀವಂತ ನಿಂತಿತು ?

ಅಕ್ಕಸಾಲಿಗನು ಚಿನ್ನವನ್ನು ಬೆಂಕಿಗೆ ಹಾಕಿ ಸುಡುತ್ತಾನೆ, ಮತ್ತೆ ಸುತ್ತಿಗೆಯಿಂದ ಅದರ ಮೇಲೆ ಹೊಡೆಯುತ್ತಾನೆ. ಅನಂತರ ಬೇಕಾದ ಆಕೃತಿಗೆ ಕತ್ತರಿಸಿಕೊಳ್ಳುತ್ತಾನೆ. ಇಷ್ಟೆಲ್ಲಾ ಮಾಡಿ ಸುಂದರವಾದ ಆಭರಣವನ್ನು ನಿರ್ಮಿಸಿದ ಮೇಲೆ ಅದು ಕೊರಳಿಗೆ ಧರಿಸಬಹುದಾದ ಒಡವೆಯಾಗುತ್ತದೆ. ನೆತ್ತಿಗೂ ಏರಿಸಬಹುದಾದ ಅಮೂಲ್ಯ ವಸ್ತುವಾಗುತ್ತದೆ. ಇದೇ ರೀತಿ ಅನೇಕ ಆಪತ್ತು-ವಿಪತ್ತುಗಳನ್ನು ಸಹಿಸಿದ ಬಳಿಕವೇ ಆ ಕಾರಣದಿಂದಲೇ ನಾವು ಕೂಡಾ ಚಿನ್ನದ ಆಭರಣವಾಗುತ್ತೇವೆ, ನಮ್ಮಲ್ಲಿ ಸ್ಥಿರತೆ ಉಂಟಾಗುತ್ತದೆ. ಆ ಮೇಲೆ ಪರಿವರ್ತನೆಯಿಲ್ಲ, ಇದು ಕಂಚಿನಂತಹ ಧರ್ಮವಲ್ಲ, ಚಿನ್ನದಂತಹ ಧರ್ಮವಾಗಿದೆ. ನಮ್ಮ ಸಿದ್ಧಾಂತ-ತತ್ತ್ವಜ್ಞಾನಗಳು ಸ್ವತಂತ್ರವಾದವುಗಳು. ಆಚಾರ್ಯರು ಒಂದು ಗಾಥೆಯಲ್ಲಿ ಈ ವಿಶಾಲ ವಿಶ್ವದ ಉಪಾದಾನವನ್ನು ಸ್ಪಷ್ಟಪಡಿಸುತ್ತಾ ಕೆಳಗಿನಂತೆ ಹೇಳಿದ್ದಾರೆ;-

**ಲೋಗೋ ಅಕಿಟ್ಟಿಮೋ ಖಲು, ಅಣಾರಹಣಿಹಣೋ ಸಹಾವಣಿಪ್ಪಣ್ಣೋ ।**
**ಜೀವಾಜೀವೇಹಿ ಫುಡೋ, ಸದ್ದಾಗಾಸವಯವೋ ಣಿ ಚ್ಚೋ ॥**-ತ್ರಿಲೋಕಸಾರ

ಈ ಲೋಕವು ನಿಶ್ಚಯವಾಗಿಯೂ ಅಕೃತ್ರಿಮವಾಗಿದೆ. ಅನಾದಿ ನಿಧನವಾಗಿದೆ. ಅರ್ಥಾತ್ ಈ ಜಗತ್ತನ್ನು ಯಾರೂ ನಿರ್ಮಿಸಿಲ್ಲ ಮತ್ತು ಯಾರೂ ಇದನ್ನು ನಾಶಗೊಳಿಸಲಾರರು. ಇದು ಅನಾದಿ-ಅನಂತವಾಗಿದೆ, ಅಕೃತ್ರಿಮವಾಗಿದೆ. ಜಗತ್ತು ಶಾಶ್ವತವಲ್ಲ, ಪರಿವರ್ತನಶೀಲವಾಗಿದೆ ಮತ್ತು ಷಡ್ದ್ರವ್ಯಗಳಿಂದ ತುಂಬಿಕೊಂಡಿದೆ.

**ಷಡ್ದ್ರವ್ಯಾತ್ಮಕಂ ಸಃ ಲೋಕಃ ।**

ಭಗವಾನರು (ತೀರ್ಥಂಕರರು) ನಮಗೆ ಯಾವುದೇ ಭೌತಿಕ ವಸ್ತುಗಳನ್ನಾಗಲೀ,

ಧನ-ದೌಲತ್ತನ್ನಾಗಲೀ, ಅಂಗಡಿ-ಮನೆಗಳನ್ನಾಗಲೀ, ಫ್ಯಾಕ್ಟರಿ-ವಾಹನಗಳನ್ನಾಗಲೀ, ವಸ್ತ್ರಾಭರಣವನ್ನಾಗಲೀ ಕೊಡುವುದಿಲ್ಲ, ಮತ್ತೆ ನಾವೇಕೆ ಅವರಿಗೆ ನಮಸ್ಕರಿಸಬೇಕು ? ಆಚಾರ್ಯ ನೇಮಿಚಂದ್ರರು ಇದಕ್ಕೆ ಉತ್ತರ ಕೊಡುತ್ತಾ ಹೀಗೆ ಬರೆದಿದ್ದಾರೆ- ''ನಾನು ಜೀವ - ಅಜೀವಗಳು ಎರಡೂ ಭಿನ್ನ ದ್ರವ್ಯಗಳಾಗಿವೆ ಎಂದು ಹೇಳಿದಿರಿ. ಪ್ರತಿಯೊಂದು ಜೀವಕ್ಕೂ ಸ್ವತಂತ್ರ ಸತ್ತೆಯಿದೆ. ನೀನು ಸ್ವತಂತ್ರನಾಗಿರುವೆ, ಸ್ವಾವಲಂಬಿಯಾಗಿರುವೆ ಎಂಬ ಮಾರ್ಗವನ್ನು ನೀವು ಹೇಳಿದಿರಿ. ಆದ ಕಾರಣ ನಾನು ತಮಗೆ ನಮಸ್ಕರಿಸುತ್ತೇನೆ.

**ಜೀವಮಜೀವಂ ದವ್ವಂ ಜಿಣವರವಸಹೇಣ ಜೇಣ ಣಿದ್ದಿಟ್ಠಂ ।**
**ದೈವಿಂದವಿಂದವದಂ ವಂದೇ ತಂ ಸವ್ವದಾ ಸಿರಸಾ ॥**

ತಾವು ಲೋಕಾಕಾರ ಮತ್ತು ಅಲೋಕಾಕಾಶವನ್ನು ತಿಳಿಸಿಕೊಟ್ಟಿರಿ. ಎಲ್ಲವೂ ನಷ್ಟವಾಗಿ ಹೋಗುವಂಥವುಗಳೆಂದು ಕ್ಷಣಿಕವಾದಿಗಳು ಹೇಳುತ್ತಾರೆ. ಅವು ನಷ್ಟವಾಗುವುದಿಲ್ಲ, ಪರಿವರ್ತನ ಹೊಂದುತ್ತವೆ ಎಂದು ತಾವು ಹೇಳಿದಿರಿ. ದ್ರವ್ಯವು ಪರಿವರ್ತನಶೀಲವಾಗಿದೆ, ನಿತ್ಯವಾಗಿದೆ.

**ಉತ್ಪಾದವ್ಯಯಧ್ರೌವ್ಯಯುಕ್ತಂ ಸತ್ ।**

ಒಮ್ಮೆ ಸೇಠ್ ಹುಕುಮ್‌ಚಂದ್ ಅವರು ಆಚಾರ್ಯ ಶಾಂತಿಸಾಗರರ ಬಳಿಗೆ ಬಂದರು. ಅವರು ವಿನೋದವಾಗಿ ಮಾತಾಡುತ್ತಾ ''ಮಹಾರಾಜ್, ಈ ವರ್ತಮಾನ ಕಾಲದಲ್ಲಿ ಸಮ್ಯಗ್‌ದೃಷ್ಟಿಗಳು ಇಬ್ಬರೇ ಸಾಕು, ಒಂದು ತಾವು ಮತ್ತು ಇನ್ನೊಂದು ನಾನು'' ಎಂದರು. ಆಗ ಆಚಾರ್ಯರು ನಗುತ್ತಾ ''ನಾವು ಲಂಗೋಟಿ ಬಿಟ್ಟವರು ಮತ್ತು ನೀವು ನವಕೋಟಿ ನಾರಾಯಣರು. ಈ ಕಾರಣದಿಂದ ನಾವಿಬ್ಬರೂ ಸಮ್ಯಗ್‌ದೃಷ್ಟಿಗಳಾದೇವೇ?'' ಎಂದು ಹೇಳಿದರು. ಮತ್ತೆ ಮುಂದುವರಿದು ''ಹಾಗಲ್ಲ, ಗುಡಿಸಲಿನಲ್ಲಿ ವಾಸಿಸುವ ಅನಕ್ಷರಸ್ಥ ಮಹಿಳೆ ಕೂಡಾ ಸಮ್ಯಗ್‌ದರ್ಶನ ಪ್ರಾಪ್ತಿಸಿಕೊಳ್ಳಲು ಸಾಧ್ಯವಿದೆ. ಎಲ್ಲಾ ಪಂಚೇಂದ್ರಿಯ ಪ್ರಾಣಿಗಳಿಗೂ ಸಮ್ಯಗ್‌ದರ್ಶನ ಪಡೆಯಲು ಅರ್ಹತೆಯಿದೆ. ಸೇಠ್‌ಜೀ ನಡೆಸುತ್ತಾರೆ ಅಥವಾ ನಾವು ನಡೆಸುತ್ತೇವೆ ಎಂದರೆ ಅದು ಧರ್ಮವಾಗುವುದಿಲ್ಲ. ನಮ್ಮಲ್ಲಿರುವುದು ''ಕೇವಲೀ ಪಣ್ಣತ್ತೋ ಧಮ್ಮೋ ಮಂಗಲಂ'' ಮಾತ್ರ. ಪಂಡಿತ್ ತೋಡರಮಲ್ಲಜೀಯವರು ಕೂಡಾ ''ಕೇವಲಿ ಕಹ್ಯಾ ಸೋ ಪ್ರಮಾಣ'' ಅರ್ಥಾತ್ ಜೈನ ಧರ್ಮವು ಕೇವಲಿಗಳ ನಿಶ್ಚಲ, ದೃಢ ಮತ್ತು ಶಾಶ್ವತವಾದವುಗಳು.

ಒಮ್ಮೆ ಡೆಲ್ಲಿಯಲ್ಲಿ ಯಾವುದೋ ಒಂದು ಸಭೆಯಲ್ಲಿ ಪಾಟೋದಿಯವರು (ಶ್ರೀ ಬಾಬೂಲಾಲ್ ಪಾಟೋದಿ, ಇಂದೂರ್) ಮಾತಾಡುತ್ತಾ - ''ಸರಕಾರವು ಗಾಂಧೀಜಿಯವರ, ಭಗವಾನ್ ಮಹಾವೀರರ ಸಿದ್ಧಾಂತಗಳನ್ನು ಯಮುನಾ ನದಿಯಲ್ಲಿ ಮುಳುಗಿಸಿಬಿಟ್ಟಿದ್ದಾರೆ'' ಎಂದರು. ಕೂಡಲೇ ಇನ್ನೊಬ್ಬ ವ್ಯಕ್ತಿ ಅವರ ಮಾತನ್ನು ಒಪ್ಪಿಕೊಳ್ಳದೆ- ''ಭಗವಾನ್ ಮಹಾವೀರರ ಸಿದ್ಧಾಂತಗಳನ್ನು ಯಾರಿಂದಲೂ ಮುಳುಗಿಸಲು ಸಾಧ್ಯವಿಲ್ಲ. ನಾವು ಅವರ ಸಿದ್ಧಾಂತಗಳನ್ನು ಪಾಲಿಸುತ್ತಿಲ್ಲ, ಆದ ಕಾರಣ ನಾವು ಮುಳುಗುತ್ತೇವೆ'' ಎಂದರು.



ಧರ್ಮದಲ್ಲಿ ಮಹಾನ್ ಶಕ್ತಿಯಿದೆ. ಆದರೆ ನಾವು ಹೇಡಿಗಳಾಗಿದ್ದೇವೆ. ಸಿದ್ಧಾಂತಗಳೆಲ್ಲಾ ಹೇಗೆ ಇವೆಯೋ ಹಾಗೆಯೇ ಇರುತ್ತವೆ. ಅದನ್ನು ಹೇಳುವಲ್ಲಿ, ತಿಳಿಸಿಕೊಡುವಲ್ಲಿ ಮಾತ್ರ ಶೈಲಿಯನ್ನು ಬದಲಾಯಿಸುತ್ತೇವೆ. ಶೈಲಿ ಬದಲಾಗುವುದು ಸಹಜವೇ ಆಗಿದೆ. ಒತ್ತಾಯಪೂರ್ವಕ ಹೇಳುವಾಗ ಶೈಲಿ ಬದಲಾಗಬಹುದು. ಒಂದು ಅಂಗಡಿಗೆ ಸಾಮಾನು ಕೊಳ್ಳಲು ಗ್ರಾಹಕರು ಬರುತ್ತಲೇ ಇದ್ದರೆ ಮಾಲೀಕನು ತನ್ನಲ್ಲಿರುವ ವಸ್ತುಗಳ ಬಗ್ಗೆ ಒತ್ತಾಯಿಸಿ ಯಾರಿಗೂ ಹೇಳಬೇಕಾಗಿಲ್ಲ, ಆದರೆ ತನ್ನಲ್ಲಿರುವ ಮಾಲುಗಳನ್ನು ಗಿರಾಕಿಗಳಿಗೆ ತೋರಿಸುವುದು, ಅದರ ಉಪಯೋಗ ಹೇಳುವುದು, ಲಾಭ ತಿಳಿಸುವುದು ಇವೆಲ್ಲಾ ಮಾಲೀಕನ ಕರ್ತವ್ಯವೇ ಆಗಿರುತ್ತದೆ. ಗ್ರಾಹಕ ಅವುಗಳನ್ನು ಖರೀದಿಸುವುದು ಅವನ ಇಷ್ಟಕ್ಕೆ ಬಿಟ್ಟ ಸಂಗತಿ. ಹಾಗೆಯೇ ನೀವೆಲ್ಲಾ ಜನರಿಗೆ ಧರ್ಮದ ಆದರ್ಶ, ಧರ್ಮದ ಸಿದ್ಧಾಂತ ಇತ್ಯಾದಿಗಳನ್ನು ಹೇಳಲೇಬೇಕು. ಯಾರಿಗೆ ಯೋಗ್ಯತೆಯಿದೆಯೋ ಅವರು ಅವುಗಳನ್ನು ಪಾಲಿಸುತ್ತಾರೆ. ಆಚಾರ್ಯ ಕುಂದಕುಂದರು ''ಇಚ್ಛಾಮಿ, ಭಂತೇ ಯಾವ ದೇವರೂ ನನ್ನ ಮೇಲೆ ಕಡ್ಡಾಯವಾಗಿ ಧರ್ಮವನ್ನು ಹೇರಲಿಲ್ಲ, ನಾನು ಸ್ವೇಚ್ಛೆಯಿಂದ, ಸ್ವಸ್ಫೂರ್ತಿಯಿಂದ ಧರ್ಮದ ಪಾಲನೆ ಮಾಡುವೆನು'' ಎಂದು ಬರೆದಿದ್ದಾರೆ. ಗ್ರಂಥ ರಚನೆಯ ಸಮಯದಲ್ಲಿ ಈ ರೀತಿಯ ಪ್ರತಿಜ್ಞೆಯನ್ನು ಅವರು ಮಾಡಿದ್ದಾರೆ.

ನೀವು ಮನೆಯಲ್ಲಿ ನಿಮ್ಮ ಮಕ್ಕಳಿಗೆ ಒತ್ತಡಪೂರ್ವಕ, ಅವರ ಇಚ್ಛೆಗೆ ವಿರುದ್ಧವಾಗಿ ಯಾವ ಆಹಾರವನ್ನೂ ತಿನ್ನಿಸಲಾರಿರಿ. ಅವರಿಗೂ ಸ್ವತಂತ್ರತೆ ಇರುತ್ತದೆ. ಜೈನ ಧರ್ಮವು ಯಾರ ಸ್ವಾತಂತ್ರ್ಯವನ್ನೂ ಹರಣ ಮಾಡುವುದಿಲ್ಲ. ತಪ್ಪು ಕೆಲಸ ಮಾಡಿದಾಗ ಹೇಗೆ ತಾಯಿ-ತಂದೆ ಕೂಡಾ ಮಕ್ಕಳನ್ನು ತಡೆಯುತ್ತಾರೋ ಹಾಗೆಯೇ ಜೈನಧರ್ಮವು ತಪ್ಪು ಹೆಜ್ಜೆಯಿಟ್ಟವರನ್ನು ಸರಿಪಡಿಸಲು ಕಾರ್ಯವೆಸಗುತ್ತದೆ.

ಭಗವಾನ್ ಆದಿನಾಥರು ತಮ್ಮ ಪುತ್ರಿಯರಾದ ಬ್ರಾಹ್ಮೀ ಮತ್ತು ಸುಂದರೀ ಎಂಬುವವರಿಗೆ ಭಾಷೆ ಕಲಿಸಿದರು, ಗಣಿತ ಕಲಿಸಿದರು. ಸ್ತ್ರೀಯರನ್ನು ಸುಶಿಕ್ಷಿತರನ್ನಾಗಿ ಮಾಡುವ ಮೊದಲನೆಯ ಉದಾಹರಣೆ ಅವರು ಕೊಟ್ಟರು. ಶಿಕ್ಷಣ ಕ್ಷೇತ್ರದಲ್ಲಿ ನಾರಿಯರಿಗೆ ಎಂತಹ ಅಧಿಕಾರವನ್ನು ಜೈನ ಧರ್ಮವು ನೀಡಿದೆಯೋ ಅವು ಅನ್ಯ ಧರ್ಮಗಳಲ್ಲಿ ಕಾಣಿಸುವುದಿಲ್ಲ. ಜೈನ ಧರ್ಮದಲ್ಲಿ ಸ್ತ್ರೀಯರು ಶಾಸ್ತ್ರಗಳನ್ನು ಓದಬಹುದು, ಸ್ವಾಧ್ಯಾಯ ಮಾಡಬಹುದು, ಧಾರ್ಮಿಕ ಕಾರ್ಯಗಳನ್ನು ನಡೆಸಬಹುದು. ಒಬ್ಬಳು ಸ್ತ್ರೀ ಓದಿದಳೆಂದಾದರೆ ಆಕೆ ತನ್ನ ಏಳು ಪೀಳಿಗೆಯ ವರೆಗೂ ಅದನ್ನು ಕಲಿಸಬಲ್ಲಳು. ಯಾವ ಮನೆಯಲ್ಲಿ ಕಲಿತ ಸ್ತ್ರೀ ಇಲ್ಲವೋ ಆ ಮನೆಯನ್ನು ಸರಿಪಡಿಸಲು ಯಾರಿಂದಲೂ ಸಾಧ್ಯವಿಲ್ಲ. ಸುಶಿಕ್ಷಿತ ತಾಯಿ ನೀಡುವಂತಹ ಸಂಸ್ಕಾರವನ್ನು ನೂರು ಮಂದಿ ಪುರುಷ ಅಧ್ಯಾಪಕರಿಂದಲೂ ಕೊಡಲು ಸಾಧ್ಯವಿಲ್ಲ. ಆಚಾರ್ಯ ಕುಂದಕುಂದರಿಗೆ, ಆಚಾರ್ಯ ಶಾಂತಿಸಾಗರರಿಗೆ, ಮಹಾತ್ಮಾ ಗಾಂಧೀಜಿಯವರಿಗೆ ಹೀಗೆ ಮಹಾನ್ ವ್ಯಕ್ತಿಗಳಾದ ಸರ್ವರಿಗೂ ಶಿಕ್ಷಣವಿತ್ತವಳು ತಾಯಿಯೇ ಆಗಿರುತ್ತಾಳೆ. ಆಚಾರ್ಯರು ಮಾತೆಯ ಮಹತ್ವವನ್ನು ಸ್ವೀಕಾರ ಮಾಡಿದರು.

ಗೌರವಿಸಿದರು. ಗುರುವಿನ ಉಪಕಾರವನ್ನು ತಾಯಿಯ ಹಿರಿಮೆಯನ್ನು ಸ್ವೀಕರಿಸುತ್ತಾ ಆಚಾರ್ಯರು ಹೀಗೆ ಹೇಳಿದ್ದಾರೆ- ''ಗುರುವಿನಲ್ಲಿರುವ ಒಂದು ಚಿಕ್ಕ ಕೊರತೆಯೇನೆಂದರೆ ಗುರು ಎಷ್ಟೇ ಶಿಷ್ಯರಿಗೆ ವಿದ್ಯಾದಾನ ಮಾಡಿ ಅವರನ್ನು ಉನ್ನತ ಮಟ್ಟಕ್ಕೆ ಏರಿಸಿರಬಹುದು, ಆದರೆ ತಾಯಿಯಂತೆ ಒಂಭತ್ತು ತಿಂಗಳು ಗರ್ಭದಲ್ಲಿ ಧರಿಸಲಿಲ್ಲ, ತಾಯಿಯಾದರೋ ಒಂಬತ್ತು ತಿಂಗಳು ತನ್ನ ಮಗುವನ್ನು ಗರ್ಭದಲ್ಲಿಟ್ಟು ಪೋಷಿಸಿದಳು. ಅದಕ್ಕಿಂತ ದೊಡ್ಡ ಉಪಕಾರ ಬೇರೊಂದಿಲ್ಲ, ಉಳಿದೆಲ್ಲ ಕೆಲಸಗಳನ್ನು ಗುರು ಮಾಡಬಹುದು. ಆದರೆ ಇದೊಂದು ಸಾಧ್ಯವಿಲ್ಲ, ಆಚಾರ್ಯ ಭದ್ರಬಾಹು ಉಜ್ಜೈನಿಯಿಂದ ಯಾವಾಗ ದಕ್ಷಿಣ ದಿಕ್ಕಿಗೆ ವಿಹಾರ ಹೊರಟರೋ ಆಗ ಅಲ್ಲಿಯ ಸಾಮಂತರಾಜರು, ಸೇಠ್‌ಜೀಗಳು, ಶ್ರಾವಕರು ಹೀಗೆ ಎಲ್ಲರೂ ಚಿಂತಿತರಾದರು. ಆಗ ಆಚಾರ್ಯರು ಹೇಳಿದರು- ''ತಾವು ಅಕಾಲ ಬಂತೆಂದು ಚಿಂತಿಸಬೇಡಿ. ನಮ್ಮಲ್ಲಿ ಸಾಕಷ್ಟು ಧನವಿದೆ. ನಾವು ಎಲ್ಲಾ ರೀತಿಯ ವ್ಯವಸ್ಥೆಯನ್ನೂ ಮಾಡಿಕೊಡಬಲ್ಲೆವು'' ಮತ್ತೆ ಆಚಾರ್ಯರಿಗೆ- ''ನೀವು ನಮ್ಮನ್ನು ತಡೆಯಲು ಇಷ್ಟೇಕೆ ಆಗ್ರಹಪಡಿಸುತ್ತೀರಿ ? ಎಂದು ಕೇಳಲು ಶ್ರಾವಕರು ಹೀಗೆ ಉತ್ತರ ಕೊಟ್ಟರು;-

**ಗುರುಂ ಬಿನಾ ಸರ್ವೇ ಭವಂತಿ ಪಶುಸನ್ನಿಭಾ ।**

ನೀವು ಹೊರಟು ಹೋದಿರೆಂದಾದರೆ ನಾವು ಪಶುಗಳಂತಾಗುತ್ತೇವೆ. ತಾಯಿಯ ನಂತರದ ಸ್ಥಾನವಿರುವುದು ಗುರುವಿಗೆ ಮಾತ್ರ.

ವಿಶ್ವದಲ್ಲಿ ಕೋಟಿಗಟ್ಟಲೆ ಜನರಿದ್ದಾರೆ, ಆದರೆ ಎಷ್ಟೋ ಕೋಟಿ ಮಂದಿಗೆ ಧರ್ಮ ಗುರುಗಳಿಲ್ಲ, ಧರ್ಮ ಶಾಸ್ತ್ರಗಳಿಲ್ಲ, ಧರ್ಮಗ್ರಂಥಗಳಿಲ್ಲ, ಯಾವ ದೇವರುಗಳೂ ಇಲ್ಲ, ನಮ್ಮಲ್ಲಿ ಹಾಗಲ್ಲ, ದೇವ-ಶಾಸ್ತ್ರ-ಗುರು ಈ ಮೂರೂ ಇವೆ. ಈ ಮೂರರಿಂದಲೇ ನಾವಿಂದು ಜೀವಂತವಾಗಿದ್ದೇವೆ.

ಮೇರಠ್ ಚಾತುರ್ಮಾಸದಲ್ಲಿದ್ದಾಗ ಒಬ್ಬ ಪಂಡಿತರು ಪ್ರವಚನ ಕೇಳಲು ಬರುತ್ತಿದ್ದರು. ಕೆಲವು ದಿನಗಳ ಬಳಿಕ ಅವರು ಹೇಳಿದರು- ''ಮಹಾರಾಜ್, ಶಾಸ್ತ್ರಗಳಲ್ಲಿ ಏನು ಬರೆಯಲಾಗಿದೆಯೋ ಅದನ್ನೇ ಮುನಿಗಳು ನಮಗೆ ತಿಳಿಸಿಕೊಡುತ್ತಾರೆ. ಅದರಿಂದ ಹೊರತಾದ ವಿಚಾರಗಳು ಏನೂ ಇರುವುದಿಲ್ಲ, ಆದರಲ್ಲಿರುವ ವಿಶೇಷತೆ ಏನೆಂದರೆ ಹಳೆಯ ಪದ್ಧತಿಯಂತೆ ಮುನಿಗಳು ಹೇಳುತ್ತಿದ್ದರು. ರೂಢಿಯಂತೆ ನಾವು ಕೇಳುತ್ತಿದ್ದೆವು. ಈಗ ಮುನಿಗಳು ತಿಳಿಸಿಕೊಡುವ ಶೈಲಿಯನ್ನು ಬದಲಿಸಿದ್ದಾರೆ. ಆದ ಕಾರಣ ಹೆಚ್ಚಿನ ಸಂಖ್ಯೆಯಲ್ಲಿ ಅದನ್ನು ಕೇಳಲು ಜನ ಬರುತ್ತಿದ್ದಾರೆ.''

ಧರ್ಮದ ಸಿದ್ಧಾಂತಗಳಾದ ಅಹಿಂಸೆ, ಸತ್ಯ ಇತ್ಯಾದಿಗಳಾದರೋ ಹಿಂದೆ ಹೇಗಿದ್ದವೋ ಇಂದಿಗೂ ಹಾಗೆಯೇ ಇರುತ್ತವೆ. ಸಿದ್ಧಾಂತಗಳನ್ನು ಎಂದಿಗೂ ಬದಲಾಯಿಸಲು ಸಾಧ್ಯವಿಲ್ಲ, ಅವುಗಳನ್ನು ಹೇಳುವ, ತಿಳಿಸಿಕೊಡುವ ಶೈಲಿ ಏನಿದೆಯೋ ಅದನ್ನು ಮಾತ್ರ ಬದಲಾಯಿಸಬಹುದು. ಯುಗಾನುರೂಪವಾಗಿ ಶೈಲಿಯು ಬದಲಾಗಬೇಕು.



ಒಂದು ಅಹಿಂಸಾ ಸಿದ್ಧಾಂತವು ಮಹಾತ್ಮಾ ಗಾಂಧಿಯವರ ಜೀವನವನ್ನೇ ಬದಲಾಯಿಸಿತು. ಭಾರತದ ಸಂವಿಧಾನದ ಒಂದು ಪ್ರತಿಯಲ್ಲಿ ಭಗವಾನ್ ಮಹಾವೀರರ ಚಿತ್ರ ಕೊಡಲಾಗಿದೆ. ಅದರ ಕೆಳಗಡೆ ಹೀಗೆ ಬರೆದಿದೆ;-

''ಜೈನ ಧರ್ಮವು ಆತ್ಮಿಕ ಉತ್ಕರ್ಷದ ಒಂದು ಪ್ರವಾಹ. ಅದು ಮಾನವ ಚಾರಿತ್ರದ ಉತ್ಥಾನಕ್ಕಾಗಿ ಅಹಿಂಸೆಯನ್ನು ತನ್ನದಾಗಿಸಿಕೊಳ್ಳುವುದರ ಮೇಲೆ ಬಲ ಕೊಡುತ್ತದೆ. ಬ್ರಿಟಿಷ್ ಸಾಮ್ರಾಜ್ಯದ ವಿರುದ್ಧ ರಾಜ ನೈತಿಕ ಆಂದೋಲನದಲ್ಲಿ ಮಹಾತ್ಮಾ ಗಾಂಧಿಯವರ ಕೈಗಳಲ್ಲಿ ಈ ಅಮೋಘ ಅಸ್ತ್ರ ಸಿದ್ಧವಾಗಿದೆ.''

ಭಾರತದ ಪ್ರಥಮ ರಾಷ್ಟ್ರಪತಿ ಡಾ॥ ರಾಜೇಂದ್ರ ಪ್ರಸಾದರು ಆ ಚಿತ್ರವನ್ನು ''ಶಾಂತಿ ನಿಕೇತನ' ದಿಂದ ಪಡೆದುಕೊಂಡಿದ್ದರು. ಇಂದು ದೂರದರ್ಶನ ಇತ್ಯಾದಿಗಳ ಪ್ರಭಾವದಿಂದ ಅನೇಕ ದೋಷಗಳುಂಟಾಗಿವೆ. ಆದರೂ ನಾವು ನಿರಾಶರಾಗಬೇಕಾಗಿಲ್ಲ, ನಾವು ಯಾವಾಗಲೂ ಆಶಾವಾದಿಗಳಾಗಿಯೇ ಇರಬೇಕು.

**ನಿರಾಶಾಯಾಮ್ ಮಹತ್ ಪಾಪಮ್ ।**

ನಿರಾಶಾವಾದಿಯು ಪಾಪಿಯಾಗಿರುತ್ತಾನೆ. ಆಶಾವಾದಿ ಪುರುಷಾರ್ಥಿಯಾಗಿರುತ್ತಾನೆ. ಅವನೇ ಪುಣ್ಯಾತ್ಮನು. ಭಾರತದ ತೊಂಬತ್ತು ಸಾವಿರ ಜನರು, ಮಂತ್ರಿಗಳು, ಕಾವಲುಗಾರರು ಲಂಚ ಇತ್ಯಾದಿ ತಪ್ಪು ಕೆಲಸಗಳನ್ನು ಮಾಡಿದರೆಂದಾದರೆ ನಾವೇಕೆ ಹೆದರಬೇಕು ? ಬೇರೆ ಯಾರಾದರೂ ತಪ್ಪು ಕೆಲಸಗಳನ್ನು ಮಾಡಿದರೆ ನಾವು ಗಾಬರಿಗೊಳ್ಳುವುದೇಕೆ ? ಕಾಲವು ಎಷ್ಟೇ ಬದಲಾದರೂ ನಾವು ಹೆದರಬಾರದು. ನಮ್ಮ ಆಚಾರ್ಯರು ''ಜಗತ್ತು ಬದಲಾವಣೆ ಹೊಂದುತ್ತಿದೆಯಾದರೆ ಹೊಂದಲಿ, ನಾವು ಎರಡು ವಿಷಯಗಳ ಬಗ್ಗೆ ಮಾತ್ರ ಧ್ಯಾನವಿರಿಸಬೇಕು. ೧. ಅನ್ನಾಹಾರದಲ್ಲಿ ಶುದ್ಧತೆ, ೨. ವೀತರಾಗ ಅರಹಂತ ಭಗವಾನರ ಬಗ್ಗೆ ಶ್ರದ್ಧೆ' ಎಂದಿದ್ದಾರೆ.

ವೇಷ ಬದಲಿಸುವುದರಿಂದ, ದೇಶ ಬದಲಾಯಿಸುವುದರಿಂದ ಧರ್ಮವು ಸಮಾಪ್ತವಾಗುವುದಿಲ್ಲ, ಆದರೆ ಅನ್ನ-ಪಾನದ ಶುದ್ಧತೆ ಮತ್ತು ವೀತರಾಗ ತೀರ್ಥಂಕರರ ಶ್ರದ್ಧೆಯಿಂದ ವಿಚಲಿತರಾದರೆ ಧರ್ಮ ನಾಶವಾದೀತು. ಯಾವ ಮನೆಯಲ್ಲಿ ಮಾಂಸಾಹಾರದ ಸೇವನೆಯಿರುತ್ತದೋ ಆ ಮನೆಯು ನಷ್ಟ ಹೊಂದಬಹುದು.

ಕಾಲ ಬದಲಾಗುತ್ತಿದೆ; ಮನೆ ಅಂಗಡಿಗಳ ವಿನ್ಯಾಸ ಬದಲಾಗುತ್ತಿದೆ. ಕಾನೂನು ಬದಲಾಗುತ್ತದೆ. ಎಲ್ಲಾ ವಸ್ತುಗಳೂ ಬದಲಾಗುತ್ತವೆ, ಆದರೆ ಧರ್ಮ ಮಾತ್ರ ಬದಲಾಗುವುದಿಲ್ಲ, ಅಹಿಂಸಾಧರ್ಮ, ಸತ್ಯಧರ್ಮ ಇವು ಬದಲಾಗುವಂಥವಲ್ಲ, ಅವುಗಳ ಮೇಲೆ ನಮಗೆ ಶ್ರದ್ಧೆ ಇರಬೇಕು. ವಿಷಮ ಪರಿಸ್ಥಿತಿಯಲ್ಲೂ ಧರ್ಮದ ಬಗ್ಗೆ ಶ್ರದ್ಧೆ ಕಡಿಮೆಯಾಗಬಾರದು.

ಸನ್ 1942ರಲ್ಲಿ ಇಂದೋರಿನ ಶ್ರೀ ಮಿಶ್ರಿಲಾಲ್ ಗಂಗವಾಲ್, ಬಾಬೂಲಾಲ್ ಪಟೋದಿ ಮೊದಲಾದವರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಜೈಲಿನಲ್ಲಿದ್ದರು. ಈ ಮಹನೀಯರು ಜೈಲಿನಲ್ಲಿ ದೇವಸ್ಥಾನ ಕಟ್ಟಿಸಿದರು. ಅಲ್ಲಿ ಪ್ರತಿದಿನವೂ ಪೂಜೆ ಮಾಡಿ ಆಹಾರ ಸೇವಿಸುತ್ತಿದ್ದರು.

ನಮ್ಮ ಧರ್ಮವು ವೀತರಾಗ ಧರ್ಮವಾಗಿದೆ. ಅನೇಕ ಪಂಥಗಳು ಬಂದುವು. ಆದರೆ ಎಲ್ಲವೂ ಣಮೋಕಾರ ಮಂತ್ರವನ್ನು ಮನ್ನಿಸುವಂಥವುಗಳು. ನಾವು ಎಲ್ಲರನ್ನೂ ಸೇರಿಸಿಕೊಂಡು ಆಧ್ಯಾತ್ಮಿಕ ಧರ್ಮದೊಂದಿಗೆ ಆದರ್ಶ ಸಮಾಜದ ನಿರ್ಮಾಣ ಮಾಡಬೇಕಾಗಿದೆ. ಶ್ರಾವಕರು ಮತ್ತು ಸಾಧುಗಳು ಈ ಎರಡು ಗುಂಪಿನವರೂ ಜೊತೆಗೂಡಿ ಧರ್ಮರಥವನ್ನು ನಡೆಸುತ್ತಾ ಸಿದ್ಧಾಲಯದ ವರೆಗೆ ತಲುಪಿಸಬೇಕಾಗಿದೆ.

---

## ವಿದ್ಯಾನಂದ ವಚನಾಮೃತ

*ನಂದಿಮಿತ್ರನು ಸತ್ಸಂಗದಲ್ಲಿ ಮೂರೇ ಮೂರು ದಿನ ಇದ್ದುದರಿಂದ ಅವನಿಗೆ ಎರಡು ವಿಧದ ಲಾಭಗಳಾದವು. ಒಂದು ಸಮಾಧಿ ಮರಣ, ಇನ್ನೊಂದು ಮರುಭವದಲ್ಲಿ ಚಕ್ರವರ್ತಿ ಪದವಿ. ಅವನು ತನ್ನ ಚಕ್ರವರ್ತಿ ಪದವಿಯಲ್ಲಿ ಉತ್ತಮರೀತಿಯಲ್ಲಿ ರಾಜ್ಯಭಾರ ಮಾಡಿ ಕೊನೆಗೆ ಚಂದ್ರಗುಪ್ತ ಮುನಿಯಾದನು. ಹತ್ತು ಹನ್ನೊಂದು ಭವಗಳ ಪೂರ್ವದವರೆಗೆ ಅವರಿಗೆ ಜ್ಞಾನವಿದ್ದಿತು. ವಿಶಾಖಾಚಾರ್ಯ ಎನಿಸಿಕೊಂಡು ಸಮಾಧಿ ಮರಣ ಪೂರ್ವಕ ಶರೀರವನ್ನು ತೊರೆದರು. ಸತ್ಸಂಗದಿಂದ ನಂದಿಮಿತ್ರ-ಚಂದ್ರಗುಪ್ತರಿಗೆ ಎಷ್ಟೊಂದು ಲಾಭವಾಯಿತು ನೋಡಿ.*

*ಅಂಗಡಿಯಿಂದ ಕಡ ಅಥವಾ ಸಾಲದಿಂದ ಸಾಮಾನುಗಳನ್ನು ತಂದು ಮನೆ ನಡೆಸಲು ಎಷ್ಟು ದಿನ ಸಾಧ್ಯ ? ಜೀವನ ಪೂರ್ತಿಯಾಗಿ ಸಾಲದಿಂದಲೇ ನಡೆಸಲು ಸಾಧ್ಯವಿಲ್ಲ. ನಮ್ಮದು ತೆಗೆದುಕೊಳ್ಳುವುದು ಮಾತ್ರ. ಅಂದರೆ ಕಡ ತೆಗೆದುಕೊಳ್ಳುವುದು, ಅದನ್ನು ಈಗ ಬಡ್ಡಿ ಸಮೇತ ಹಿಂದೆ ಕೊಡಬೇಕು. ಹಾಗೆ ಕೊಡುವ ಹಣವು ಕೂಡಾ ಸ್ವಂತ ಗಳಿಸಿದ್ದಾಗಿರಬೇಕು. ಅಂಗಡಿಯನ್ನೂ ಅಷ್ಟೇ. ಅವನು ಸ್ವಂತ ಗಳಿಸದೇ ಕಡದಲ್ಲೇ ನಂಬಿ ಕುಳಿತರೆ ಹಾಳಾಗುತ್ತಾನೆ. ಈಗ ನಾವು ನಿಮಗೆಷ್ಟೋ ಉಪದೇಶ ಮಾಡಿದೆವು. ಆ ನಮ್ಮ ನಾಲ್ಕು ಶಬ್ದಗಳನ್ನು ನೀವು ಕಿವಿಯಿಂದ ಕೇಳಿ ಸುಮ್ಮನೆ ಕುಳಿತುಕೊಂಡಿರಿ ಎಂದಾದರೆ ನಿಮ್ಮ ಕಲ್ಯಾಣವಾಗಲು ಶಕ್ಯವಿಲ್ಲ. ನೀವು ನಿಮ್ಮ ಸ್ವಂತ ಕಾಲ ಮೇಲೆ ನಿಲ್ಲುವಂತಾಗಬೇಕು. ಆದ ಕಾರಣ ದಿನವೂ ಸ್ವಾಧ್ಯಾಯ ಮಾಡಿ ಅದನ್ನು ಆಚರಣೆಯಲ್ಲಿ ತಂದರೆ ನಿಮ್ಮ ಕಲ್ಯಾಣವಾಗುವುದು.*



—೯—

## ಶ್ರದ್ಧೆ ದೃಢವಾಗಿರಲಿ

ಮಹಾನುಭಾವರೇ, ಪ್ರಾಚೀನ ಗ್ರಂಥಗಳಲ್ಲಿ ಪ್ರತಿಕ್ರಮಣದಲ್ಲಿ ಭಗವಂತನ ವಾಣಿಗೆ ''ಣಿಗ್ಗಂಠ ಪವಯಣಂ'' ಎಂಬ ಶಬ್ದದ ಪ್ರಯೋಗ ಮಾಡಲಾಗಿದೆ. ತಾವು ತಮ್ಮ ಜೀವನದಲ್ಲಿ ಜೊತೆಯಾಗಿ ನಿಲ್ಲುವಂತಹ ಕೆಲವು ಗಾಥೆಗಳನ್ನು ನೆನಪಿಸಿಕೊಳ್ಳಬೇಕೆಂದು ನಾವು ಬಯಸುತ್ತೇವೆ. ತಾವು ತಮ್ಮ ಆತ್ಮನ ಮೇಲೆ ಎಂತಹ ಸಂಸ್ಕಾರವನ್ನು ನೀಡುತ್ತೀರೋ ಅದು ಭವ-ಭವಾಂತರಗಳ ವರೆಗೂ ಪರಿಣಾಮಕಾರಿಯಾಗಿರುತ್ತದೆಂದು ಶಾಸ್ತ್ರಗಳಲ್ಲೇ ಹೇಳಲಾಗಿದೆ. ಯಾತ್ರೆ-ಪ್ರವಾಸ ಇತ್ಯಾದಿಗಳಲ್ಲಿ ನೀವು ನಿಮ್ಮನ್ನು ತೊಡಗಿಸಿಕೊಂಡಾಗ ಜೊತೆಯಲ್ಲಿ ಸ್ವಲ್ಪ ನೀರು-ಆಹಾರ ಮೊದಲಾದವುಗಳನ್ನು ಕೊಂಡು ಹೋಗುತ್ತೀರಿ. ದಾರಿಯಲ್ಲಿ ಬಾಯಾರಿಕೆಯಾಯಿತು ಅಥವಾ ಹಸಿವೆಯಾಯಿತು ಎಂದಾದರೆ ಅದರ ಉಪಯೋಗ ಮಾಡುತ್ತೀರಿ. ಅದೇ ರೀತಿ ಆತ್ಮನ ಮೇಲೆ ರಚಿತವಾಗಿರುವ ಶ್ಲೋಕಪಾಠ ಇತ್ಯಾದಿಗಳ ಸಂಸ್ಕಾರವು ಭವ-ಭವಾಂತರಗಳ ವರೆಗೆ ಜೊತೆಯಲ್ಲೇ ಬರುತ್ತದೆ. ಅವು ಕಾಲಾಂತರಗಳಲ್ಲೂ ಕೆಲಸಕ್ಕೆ ಬರುತ್ತವೆ. ಅವುಗಳನ್ನು ಎಷ್ಟು ಕಾಲ ದಾಟಿದರೂ ಮರೆಯುವ ಹಾಗಿಲ್ಲ.

ರಾಜಕುಮಾರ ಪಾರ್ಶ್ವನಾಥರು ಅಗ್ನಿಯಲ್ಲಿ ಉರಿಯುತ್ತಿದ್ದ ನಾಗ-ನಾಗಿನಿಯರಿಗೆ ಣಮೋಕಾರ ಮಂತ್ರವನ್ನು ಬೋಧಿಸಿದರು. ಆ ನಾಗ-ನಾಗಿನಿಯರು ಮರಣ ಹೊಂದಿದ ಮೇಲೆ ಸ್ವರ್ಗದಲ್ಲಿ ಧರಣೇಂದ್ರ-ಪದ್ಮಾವತಿಯರಾದರು. ಣಮೋಕಾರ ಮಂತ್ರದ ಸಂಸ್ಕಾರವು ಭವಾಂತರಗಳ ವರೆಗೆ ಅವರ ಜೊತೆಯಲ್ಲೇ ನಿಂತಿತು. ನಮ್ಮ ಶಾಸ್ತ್ರಗಳಲ್ಲಿ ಈ ರೀತಿಯ ಅನೇಕ ಉದಾಹರಣೆಗಳಿವೆ. ಇಲ್ಲಿ ವಿತರಣೆಗೊಂಡ ಣಿಗ್ಗಂಠ ಪವಯಣದಲ್ಲಿ ಗ್ರಂಥಗಳಿಂದ ಸಂಕಲಿತವಾದ ಪ್ರಾಕೃತದ ಗಾಥೆಗಳು ಪ್ರಕಾಶಿತವಾಗಿವೆ. ಅದರ ಒಂದು ಪ್ರಥಮ ಗಾಥೆ ಹೀಗಿದೆ;-

**ವೀಸಂ ತು ಜಿಣವರಿಂದಾ, ಅಮರಾಸುರ ವಂದಿದಾ ಧುದಕಿಲೇಸಾ ।**
**ಸಮ್ಮೇದೇ ಗಿರಿಸಿಹರೇ, ಣಿವ್ವಾಣಗಯಾ ಣಮೋ ತೇ ಸಿಂ ॥**

ನೀವೆಲ್ಲರೂ ನಿತ್ಯವೂ ಮಂದಿರದಲ್ಲಿ ಈ ಗಾಥೆಯನ್ನು ಹೇಳಿ ಅರ್ಘ್ಯ ಬಿಡುತ್ತೀರಿ. ಇಲ್ಲಿ ಕುಳಿತ ಹಾಗೆಯೇ ನೀವು ಸಮ್ಮೇದ ಶಿಖರದ ಭಾವಯಾತ್ರೆ ಮಾಡುತ್ತೀರಿ.

'ಭಗವತೀ ಆರಾಧನಾ'ದಲ್ಲಿ ಒಂದು ಪ್ರಸಂಗ ಬರುತ್ತದೆ. ಒಬ್ಬ ಕೇಳುತ್ತಾನೆ- ''ನೀವು ಇಷ್ಟು ಬೇಗ ಏಕೆ ಎದ್ದಿರಿ ?'' ಉತ್ತರವಾಗಿ ''ಬೆಳಿಗ್ಗೆ ಮಂದಿರಕ್ಕೆ ಹೋಗಲಿಕ್ಕಿದೆ. ಪೂಜೆ ಮಾಡಲಿಕ್ಕಿದೆ.'' ನೋಡಿ, ಮಂದಿರಕ್ಕೆ ಹೋಗುವ ಮೊದಲೇ ಮಂದಿರಕ್ಕೆ ಹೋಗುವ ಭಾವ, ಪೂಜೆ ಮಾಡುವ ಭಾವ ಪ್ರಾರಂಭವಾಗುವುದರಿಂದ ನಿಮ್ಮ ಪರಿಣಾಮ ಪವಿತ್ರವಾ

ಗುತ್ತದೆ. ಮಾತ್ರವಲ್ಲ ಪರಿಣಾಮಗಳಲ್ಲಿ ನಿರ್ಮಲತೆ ಬರಲು ತೊಡಗುತ್ತದೆ. ಅದು ಹೇಗೆಂದರೆ- ಗ್ರಹಣ ಉಂಟಾಗುವ ಮೊದಲು ಅದರ ಮುನ್ಸೂಚನೆ ಹೇಗೆ ಸಿಗುತ್ತದೋ ಹಾಗೆಯೇ ಮಂದಿರವನ್ನು ತಲುಪುವ ಮುಂಚಿತವಾಗಿಯೇ ಮಂದಿರಕ್ಕೆ ಹೋಗುವ ಭಾವದಿಂದಾಗಿ ಪರಿಣಾಮಗಳಲ್ಲಿ ನಿರ್ಮಲತೆ ಪ್ರಾರಂಭವಾಗುತ್ತದೆ.

ತೀರ್ಥಂಕರ ನೇಮಿನಾಥರ ಕಾಲದಿಂದಲೇ ಪ್ರಾಕೃತ ಭಾಷೆಯು ಪ್ರಚಲಿತವಾಗುತ್ತಾ ಬಂದಿದೆ. ತೀರ್ಥಂಕರ ಪಾರ್ಶ್ವನಾಥರ ಕಾಲದಲ್ಲೂ ಪ್ರಾಕೃತಭಾಷೆಯ ಪ್ರವಚನವಿತ್ತು. ತೀರ್ಥಂಕರ ಮಹಾವೀರರ ಕಾಲದಲ್ಲೂ ಮಗಧದಲ್ಲಿ ಇದೇ ಭಾಷೆಯಿತ್ತು. ಸ್ಥಾನ ಭೇದದಿಂದಾಗಿ ಕೆಲವು ಶಬ್ದಗಳಲ್ಲಿ ಮಾತ್ರ ಅಂತರವಿರಬಹುದು. ಆದರೆ ಮೂಲ ಭಾಷೆ ಇದೇ ಆಗಿತ್ತು, ಆದ ಕಾರಣ ಪ್ರಾಕೃತದ ಈ ಗಾಥೆಗಳನ್ನು ನೆನಪಿಸಿಕೊಳ್ಳಿ. ಆಚಾರ್ಯ ಅಕಲಂಕರು ಏಕಪಾಠಿಗಳಾಗಿದ್ದರು. ಅವರಿಗೆ ಒಮ್ಮೆ ಓದಿದರೆ ಸಾಕು ಅದು ನೆನಪಿನಲ್ಲಿರುತ್ತಿತ್ತು. ಆಚಾರ್ಯ ಪುಷ್ಪದಂತರಿಗೆ ಕೂಡಾ ಒಮ್ಮೆ ಹೇಳಿಸಿಕೊಂಡದ್ದು ಜೀವನ ಪೂರ್ತಿ ನೆನಪಿನಲ್ಲುಳಿಯುತ್ತಿತ್ತು. ನಾವು ಸಹ ಸಿದ್ಧಾಂತದ ಗಾಥೆಗಳನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ನಮಗೆ ಕೆಟ್ಟ ಮಾತುಗಳಾದರೋ ಚೆನ್ನಾಗಿ ನೆನಪಿನಲ್ಲುಳಿಯುತ್ತದೆ. ಉದಾಹರಣೆಗೆ ನಿಮ್ಮನ್ನು ಯಾರಾದರೂ ಕೆಟ್ಟ ಶಬ್ದಗಳಿಂದ ಬೈದರೆಂದಿಟ್ಟುಕೊಳ್ಳಿ; ಅದನ್ನು ಮಾತ್ರ ನೀವು ನಿಮ್ಮ ಜೀವನವಿಡೀ ಮರೆಯುವುದಿಲ್ಲ, ಆದರೆ ಧರ್ಮದ ಮಾತು ಬಂದರೆ ಅತೀ ಕ್ಷಿಪ್ರವಾಗಿ ಮರೆತುಬಿಡುತ್ತೀರಿ. ಅದೇಕೆ ಹಾಗೆ ? ಇದರಿಂದ ಸ್ಪಷ್ಟವಾಗಿ ತಿಳಿಯುವುದೇನೆಂದರೆ ಭವ-ಭವಾಂತರಗಳಿಂದ ನಿಮ್ಮಲ್ಲಿ ಧರ್ಮದ ಸಂಸ್ಕಾರ ಉಂಟಾಗಿಲ್ಲವೆಂದು. ಒಂದು ವೇಳೆ ಧರ್ಮದ ಗಾಥೆಗಳು ನಿಮ್ಮ ನೆನಪಿನಲ್ಲುಳಿಯುತ್ತದೆಂದಾದರೆ ನಿಶ್ಚಯವಾಗಿಯೂ ಹಿಂದಿನ ಜನ್ಮದಲ್ಲಿ ಉತ್ತಮ ಸಂಸ್ಕಾರ ದೊರಕಿರಬಹುದೆಂದೇ ತಿಳಿಯಬಹುದು. ಮಾತ್ರವಲ್ಲ ಆದರಿಂದಾಗಿ ಮುಂದಿನ ಭವವೂ ಉಜ್ವಲವಾಗಬಹುದು.

ಶ್ರಾವಕ ಮತ್ತು ಸಾಧು, ಸಾಗಾರ ಮತ್ತು ಅನಾಗಾರ ಇವೆರಡರಲ್ಲೂ ಪರಸ್ಪರ ಉಪಕಾರವಿರುತ್ತದೆ. ಅದರ ಬಗ್ಗೆ ಆಚಾರ್ಯ ಕುಂದಕುಂದರು ಪ್ರವಚನಸಾರದಲ್ಲಿ ಹೇಳಿರುವುದನ್ನು ನೋಡಿ;-

**ಜೇಣ್‌ಹಾಣಂ ಣಿರವೇಕ್ಖಂ, ಸಾಯಾರಣಯಾರ ಚರಿಯಜುತ್ತಾಣಂ ।**
**ಅಣುಕಂಪಪಯೋವಯಾರೋ, ಕುವ್ವದು ಲೋವೋ ಜದಿ ವಿ ಅಪ್ಪೋ ॥**

ಅನಗಾರ ನಿರಪೇಕ್ಷಭಾವದಿಂದ, ಅನುಕಂಪಾಭಾವದಿಂದ ಉಪಕಾರ ಮಾಡುತ್ತಾರೆ. ಇದರಿಂದ ಅವರಿಗೆ ನಿಶ್ಚಯವಾಗಿಯೂ ಪುಣ್ಯಬಂಧ ಉಂಟಾಗುತ್ತದೆ. ಆಚಾರ್ಯರು ಉಪಕಾರದ ವಿಧಿ ಮತ್ತು ನಿಷೇಧ, ಈ ಎರಡನ್ನೂ ಹೇಳಿದ್ದಾರೆ.

ಮುನಿ-ಆರ್ಯಿಕಾ-ಶ್ರಾವಕಾ-ಶ್ರಾವಿಕಾ ಈ ನಾಲ್ವರ ಸಂಘವನ್ನು ಚತುರ್ವಿಧ ಸಂಘವೆಂದು ಹೇಳಲಾಗಿದೆ. ಕಲಿಯುಗದಲ್ಲಿ ಸಂಘದಲ್ಲಿ ಅಥವಾ ಸಂಘಟನೆಯಲ್ಲೇ ಶಕ್ತಿ



ಇರುವುದು. ಈ ನಾಲ್ಕು ಕೂಡಾ ಸಮಾಜದ ಮಹತ್ವಪೂರ್ಣ ಘಟಕವಾಗಿದೆ. ಆದುದರಿಂದಲೇ ಈ ನಾಲ್ಕರಲ್ಲಿ ಯಾವುದರಲ್ಲೂ ಅವಿನಯವಿರಬಾರದು. ಸುತ್ತಮುತ್ತ ಮತಭೇದವೇನೋ ಇರಬಹುದು. ಆದರೆ ಮನಃಕ್ಲೇಷವಿರಬಾರದು.

ಸಾಮಾಜಿಕ ಸಂಘಟನೆಗಾಗಿ ಅನೇಕ ಕಷ್ಟ ಪಡಬೇಕಾಗುತ್ತದೆ. ಅನೇಕ ಜನರು ಅದರಿಂದ ಕಷ್ಟಪಟ್ಟದ್ದೂ ಇದೆ. ಶೀತಲ್ ಪ್ರಸಾದ್‌ಜೀಯವರು ಸಾಮಾಜಿಕ ರೀತಿಯನ್ನು ದೂರಗೊಳಿಸುವುದಕ್ಕಾಗಿ ಬಹಳ ಕಷ್ಟಪಟ್ಟರು. ನಿಜವಾಗಿ ನೋಡಿದರೆ ಮೃತ್ಯು ಭೋಜನವು ಜೈನರ ಸಂಪ್ರದಾಯವಲ್ಲ, ಆದರೂ ಈಗ ಅದು ಸಮಾಜದಲ್ಲಿ ಪ್ರಚಲಿತವಾಗಿದೆ. ಅನೇಕ ಕಡೆಗಳಲ್ಲಿ ಇಂತಹ ಬೇರೆ ಬೇರೆ ಅನೇಕ ಬೇಡವಾದ ಪರಿಪಾಟಗಳಿವೆ. ಉದಾಹರಣೆಗೆ- "ಸಾಲಮಾಡಿ ಮನೆಕಟ್ಟು, ಅಂಗಡಿ ನಿರ್ಮಿಸು" ಇತ್ಯಾದಿ. ಹಾಗೆಯೇ ಆಭರಣವನ್ನು ಬೇಕಾದರೆ ಮಾರು, ಆದರೆ ಮೃತ್ಯು ಭೋಜನವನ್ನಂತೂ ಅವಶ್ಯ ಮಾಡು. ಇದು **ಜೈನ ಸಮಾಜದ ಪರಂಪರೆಯಲ್ಲವಾದರೂ ಅಜ್ಞಾನದಿಂದಾಗಿ ಇದು ಉಳಿದುಕೊಂಡಿರುವುದನ್ನು ನಾವು ಕಾಣಬಹುದು.** ಕೆಡಕುಗಳು ಏನಾದರೂ ಇದ್ದರೆ ಅವುಗಳನ್ನು ಇತರರು ಮಾಡುವಂತೆ ಪ್ರೇರೇಪಿಸುವುದು ಮನುಷ್ಯನ ಸ್ವಭಾವವಾಗಿದೆ. ಇದು ಒಳ್ಳೆಯದಲ್ಲ, ಈ ಸ್ವಭಾವವನ್ನು ಅಡಗಿಸುವುದು ಅಷ್ಟು ಸುಲಭವಲ್ಲ.

ಬೆಸ್ತರ ಕನ್ಯೆಯೊಬ್ಬಳಿದ್ದಳು. ಅವಳ ಸೌಂದರ್ಯವನ್ನು ನೋಡಿ ಒಬ್ಬ ಸುಂದರನಾದ ರಾಜನು ಅವಳನ್ನು ಮದುವೆಯಾದನು. ಆ ಬೆಸ್ತರವಳು ರಾಜಮಹಲಿಗೆ ಬಂದು ವಾಸಿಸತೊಡಗಿದಳು. ಆದರೆ ರಾಜಮಹಲಿನ ಸ್ವಚ್ಛ-ಸುಗಂಧಿತ ವಾತಾವರಣ ಅವಳಿಗೆ ಹಿಡಿಸಲಿಲ್ಲ, ಮೂರು ನಾಲ್ಕು ದಿನಗಳಲ್ಲೇ ಆಕೆ ಅಸ್ವಸ್ಥಳಾದಳು. ಅವಳ ತಲೆನೋವು ಹೆಚ್ಚಾಯಿತು. ಔಷಧೋಪಚಾರ ಮಾಡಿದರೂ ಅವಳ ನೋವು ಕಡಿಮೆಯಾಗಲಿಲ್ಲ, ಆಗ ಒಬ್ಬ ಚಿಕಿತ್ಸಕ ಬಂದು ಅವಳನ್ನು ತವರು ಮನೆಗೆ ಕಳುಹಿಸಿಕೊಡಲು ಸಲಹೆ ಕೊಟ್ಟನು. ಅಂತೆಯೇ ಅವಳನ್ನು ಕಳುಹಿಸಲಾಯಿತು. ಅಲ್ಲಿಗೆ ಹೋದಬಳಿಕ ಅವಳಿಗೆ ಚಿರಪರಿಚಿತವಾದ ಮೀನುಗಳನ್ನು ಕಂಡು ಅವುಗಳ ವಾಸನೆ ಹೀರಿ ಅವಳ ಕಾಯಿಲೆ ವಾಸಿಯಾಯಿತು. ತಲೆನೋವು ಇಲ್ಲದಾಯಿತು. ಹಾಗೆಯೇ ನಮಗೂ ಮಿಥ್ಯಾತ್ವದ ಸ್ವಭಾವ ಅಂಟಿಕೊಂಡುಬಿಟ್ಟಿದೆ. ಸಮ್ಯಗ್‌ಜ್ಞಾನದ ಹೆಸರು ಕೇಳಿದೊಡನೆ ತಲೆನೋವು ಪ್ರಾರಂಭವಾಗುತ್ತದೆ.

ಭಗವಾನ್ ಆದಿನಾಥರಿಂದ ಹಿಡಿದು ಇಂದಿನ ವರೆಗೆ ನಮ್ಮ ಪರಂಪರೆಯು ಅವಿಚ್ಛಿನ್ನವಾಗಿ ನಡೆದಿದೆ. ಶ್ರಾವಕನು ಯಾವನೇ ಇರಲಿ ಅವನು ನಮಗೆ ಆದರಣೀಯನಾಗಿದ್ದಾನೆ. ಯಾರಿಗೂ ಅವಜ್ಞೆ ಮಾಡಬಾರದು. ಅವನ ಯಥಾಯೋಗ್ಯ ಸತ್ಕಾರ ಮಾಡಿರಿ. ಅವನು ಕೂಡಾ ಸಮಾಜದ ಒಂದು ಅಂಗವೇ ಆಗಿರುತ್ತಾನೆ. 'ಧಾರ್ಮಿಕನಿಲ್ಲದೆ ಧರ್ಮವು ಹೇಗೆ ನಡೆಯಬಲ್ಲುದು ?'

ಅಷ್ಟಪಾಹುಡದಲ್ಲಿ ಒಂದು ಉಲ್ಲೇಖ ಹೀಗಿದೆ- ಒಬ್ಬ ಗುರು ತನ್ನ ಶಿಷ್ಯಂದಿರಲ್ಲಿ

ಕೇಳಿದ- ''ನೀವು ಅಹಿಂಸೆಯ, ಶಾಕಾಹಾರದ, ಧರ್ಮದ ಬಗ್ಗೆ ಪ್ರಚಾರಕ್ಕಾಗಿ ಹೋಗುತ್ತೀರಿ ಆಗ ಯಾರಾದರೂ ನಿಮ್ಮನ್ನು ಬೈದರೆ ಏನು ಮಾಡುತ್ತೀರಿ?'' ಅದಕ್ಕೆ ಒಬ್ಬ ಶಿಷ್ಯ ಹೇಳಿದ- ''ನಾವು ಅದರ ಬೈಗುಳಗಳನ್ನು ಸಹಿಸುತ್ತೇವೆ ಅನಂತರ ಅವರು ಕೇವಲ ಬೈದದ್ದು ಹೊರತು ಹೊಡೆಯಲಿಲ್ಲವಲ್ಲಾ ಎಂದು ಯೋಚಿಸುತ್ತೇವೆ. ಮತ್ತೆ ಗುರು ಕೇಳಿದ- ''ಒಂದು ವೇಳೆ ಯಾರಾದರೂ ಒಡೆದರು ಎಂದಿಟ್ಟುಕೊಳ್ಳಿ, ಆಗ ಅದಕ್ಕೆ ಶಿಷ್ಯ ಉತ್ತರ ಕೊಟ್ಟ- ''ನಾವು ಹೊಡೆತವನ್ನು ಸಹಿಸುತ್ತೇವೆ; ಮತ್ತೆ ಹೊಡದದ್ದಷ್ಟೇ ಹೊರತು ನಮ್ಮನ್ನು ಅಂಗ ಹೀನನನ್ನಾಗಿ ಮಾಡಲಿಲ್ಲವಲ್ಲಾ ಎಂದು ತಿಳಿಯುತ್ತೇವೆ.'' ಗುರು ಹೇಳಿದ- ''ಇರಲಿ, ನಿಮ್ಮ ಶರೀರಕ್ಕೂ ಹೊಡೆದು ಅಂಗಹೀನನ್ನಾಗಿ ಮಾಡಿದರೆ ಆಗ ಏನು ಮಾಡುತ್ತೀರಿ ?'' ಶಿಷ್ಯ ಉತ್ತರಿಸಿದ- ''ನಮ್ಮ ಶರೀರಕ್ಕಷ್ಟೇ ಹಾನಿಯುಂಟಾಗಿದೆ ಆತ್ಮಕ್ಕಲ್ಲವಲ್ಲಾ ! ಎಂದು ಭಾವಿಸುತ್ತೇವೆ.'' ಮತ್ತೆ ಕೇಳಿದರು- ''ನಾವು ಎಲ್ಲವನ್ನೂ ಸಹಿಸುತ್ತಾ ಧರ್ಮ ಪ್ರಚಾರ ಮಾಡಿಯೇ ಮಾಡುತ್ತೇವೆ' ನೋಡಿ ಇಂತಹ ದೃಢತೆ ಮನಸ್ಸಿನಲ್ಲಿ ಯಾವಾಗ ಉಂಟಾಗುತ್ತದೋ ಆಗ ಧರ್ಮ ಉಳಿಯುತ್ತದೆ ಮತ್ತು ಧರ್ಮ ಪ್ರಚಾರ ಖಂಡಿತವಾಗಿಯೂ ನಡೆಯುತ್ತದೆ.

ನಾವು ಹಿಮಾಲಯ ಯಾತ್ರೆಗೆ ಹೋಗಿದ್ದೆವು. ಅಲ್ಲಿ ಒಂದು ಕಡೆ ದಾರಿಯ ನಿರ್ಮಾಣ ಆಗುತ್ತಿತ್ತು, ಬಹಳ ಮಂದಿ ಕೆಲಸಗಾರರು ಕೆಲಸ ಮಾಡುತ್ತಿದ್ದರು. ಸ್ವಲ್ಪ ವಿಶ್ರಾಂತಿ ಪಡೆಯುವ ಹೊತ್ತಿನಲ್ಲಿ ಒಬ್ಬರು ಪಾದರಿ ಬಂದು ಏಸುವಿನ ಜೀವನದ ಬಗ್ಗೆ ಹೇಳುತ್ತಿದ್ದರು. ಅವರು ಕ್ರೈಸ್ತ ಧರ್ಮದ ಮಾತುಗಳನ್ನೇ ಹೇಳುತ್ತಿದ್ದರು ಮತ್ತು ಅದೇ ಸಂಸ್ಕಾರ ಕೊಡುತ್ತಿದ್ದರು. ಹೀಗೆ ನಿತ್ಯವೂ ನಡೆಯುತ್ತಿತ್ತು. ಅವರು ಆಸ್ಪತ್ರೆಗೆ ಹೋದಾಗಲೂ ಅಲ್ಲಿ ರೋಗಿಗಳಿಗೆ ಧರ್ಮದ ವಿಚಾರವಾಗಿ ತಿಳಿಸುತ್ತಾ ಅವರು ಕೇಳುವಂತೆ ಮಾಡುತ್ತಿದ್ದರು.

''ಭಗವತೀ ಆರಾಧನಾ''ದಲ್ಲಿ ಸಹ ಒಂದು ಉಲ್ಲೇಖವಿದೆ- ಯಾರೇ ಆಗಲಿ ಅವನು ದುಃಖದಲ್ಲಿದ್ದಾಗ, ಅನಾರೋಗ್ಯದಿಂದ ಪೀಡಿತನಾಗಿದ್ದಾಗ, ಕಷ್ಟದಲ್ಲಿ ತೊಳಲಾಡುತ್ತಿದ್ದಾಗ ಅವನಿಗೆ ಧರ್ಮವನ್ನು ಬೋಧಿಸು, ಣಮೋಕಾರ ಮಂತ್ರವನ್ನು ಕೇಳಿಸು.'' ನೀವು ಇತರರ ಕಲ್ಯಾಣಕ್ಕಾಗಿ ಏನೇ ಮಾಡುವುದಾದರೂ ಅದರಿಂದ ನಿಮ್ಮ ಕಲ್ಯಾಣವೇ ಆಗುತ್ತದೆ. ಇದರಿಂದ ನಿಮಗೇ ಧರ್ಮ-ಲಾಭ ಉಂಟಾಗುತ್ತದೆ. ಧರ್ಮವನ್ನು ನಡೆಸಲು ಪರಂಪರೆಯ ಸಹಯೋಗವು ಕೂಡಾ ಅತ್ಯಂತ ಆವಶ್ಯಕ. ನಮ್ಮಲ್ಲಿ ಸಹಯೋಗದ ಭಾವನೆಯು ಕಡಿಮೆಯಾಗಿರುವುದರಿಂದಲೇ ಕಬೀರ್‌ದಾಸರು ಹೀಗೆ ಬರೆದಿದ್ದಾರೆ:-

**ಪಡೌಸಿಸೇ ರೂಸ್‌ನಾ, ತಿಲ್-ತಿಲ್ ಸುಖ್‌ಕೀ ಹಾನಿ ।**
**ಪಂಡಿತ್ ಭಯೇ ಸರಾವಗೀ, ಪಾನೀ ಪೀವೇ ಛಾನಿ ॥**

ನಾವು ದಿನಂಪ್ರತಿ ಪೂಜೆ ಮಾಡುತ್ತೇವೆ, ಶಾಸ್ತ್ರ ಓದುತ್ತೇವೆ. ಆದರೆ ನಮ್ಮ ಸಾಧರ್ಮಿ



ಸಹೋದರರೊಂದಿಗೆ ದ್ವೇಷ ಬೆಳೆಸುವುದಾದರೆ ಹೇಗೆ ಜೈನರಾಗುತ್ತೇವೆ ? ಆದ ಕಾರಣ ಒಂದು ವಿಚಾರ ನಮ್ಮ ಮನಸ್ಸಿನಲ್ಲಿ ಸದಾ ಇರಬೇಕು. ಅದೇನೆಂದರೆ ನನ್ನಿಂದೇನಾದರೂ ಅವಿನಯ ಸಂಭವಿಸಿತೆಂದಾದರೆ, ಪರಿಣಾಮದಲ್ಲಿ ಮಲಿನತೆ ಬಂತೆಂದಾದರೆ, ಯಾವುದೇ ತಪ್ಪು ನಡೆದುಹೋಯಿತೆಂದಾದರೆ ಅದಕ್ಕೆ ಪ್ರಾಯಶ್ಚಿತ್ತ ಮಾಡಬೇಕು. ತಮ್ಮ ಮನಸ್ಸನ್ನು ಸನ್ಯಾಸಿಯನ್ನಾಗಿ ಮಾಡಲು, ಚಿತ್ತವನ್ನು ನಿರ್ಮಲಗೊಳಿಸಲು ಮಂದಿರಕ್ಕೆ ಹೋಗಿ ಮೂರ್ತಿಯ ಮುಂದೆ ಕುಳಿತುಕೊಳ್ಳುತ್ತೇವೆ. ಅದರ ಉಪಾಸನೆ ಮಾಡುತ್ತೇವೆ. ಮೂರ್ತಿಗೆ ನಾವು ಚೈತನ್ಯ ಎನ್ನುತ್ತೇವೆ. ಚೈತ್ಯ ಎಂದರೆ ಮೂರ್ತಿ, ಆಲಯ ಎಂದರೆ ಮನೆ, ಮಂದಿರ.

**ಚಿತ್ತೋಪಯೋಗೇನಾನುಷ್ಠಾನಸ್ಯ ಸಾಫಲ್ಯತ್ವಾತ್ ಚೇದಿಯ...।**

ಮನಸ್ಸಿನ ಶುದ್ಧಿಗಾಗಿ ಭಗವಂತನನ್ನು ನೋಡುತ್ತೇವೆ. ಚಿತ್ತದ ಅನುಷ್ಠಾನಕ್ಕಾಗಿ ದರ್ಶನ ಮಾಡುತ್ತೇವೆ. ಚಿತ್ತಾನುಷ್ಠಾನಕ್ಕಾಗಿಯೇ ಇರುವುದು ಚೈತ್ಯ. ಮನಸ್ಸಿನಿಂದ, ವಚನದಿಂದ, ಕಾಯದಿಂದ ಯಾವನೇ ಸಾಧರ್ಮಿಗೆ ಅಥವಾ ಯಾವನೇ ಶ್ರಾವಕನಿಗೆ ಅವಿನಯವಾದರೆ ಪ್ರಾಯಶ್ಚಿತ್ತ ಮಾಡುವುದು, ಮನಸ್ಸನ್ನು ನಿರ್ಮಲಗೊಳಿಸುವುದು, ಶುದ್ಧಗೊಳಿಸುವುದು, ಸನ್ಯಾಸಿಯನ್ನಾಗಿ ಮಾಡುವುದು ಅವಶ್ಯಕವಾಗಿದೆ.

ನಾವು ಸಾಮಾಜಿಕ ಸಂಘಟನೆಯಿಂದ ವಿಘಟಿತರಾಗಿದ್ದೇವೆ. ಚದುರಿಹೋಗಿದ್ದೇವೆ. ಆದ ಕಾರಣವೇ ಯಾವುದೇ ಕಾರ್ಯವನ್ನು ಮಾಡಲು ಅಸಮರ್ಥರಾಗಿದ್ದೇವೆ. ಪ್ರಪಂಚದ ಮುಂದೆ, ಅನ್ಯರ ಮುಂದೆ ನಾವು ತೋರಿಸಬೇಕಾದ ಅನೇಕ ಆದರ್ಶಗಳಿವೆ. ಹಿಂದಿನ ಕಾಲದಲ್ಲಿ ಅಂತಹ ಸಂಘಟನೆಯಿತ್ತು. ಈಗ ನಾವು ಅದನ್ನು ಎತ್ತಿ ಹಿಡಿಯಬೇಕಾಗಿದೆ.

ಸಮವಸರಣದಲ್ಲಿ ಎಲ್ಲಾ ಪ್ರಾಣಿಗಳೂ ಕುಳಿತುಕೊಳ್ಳುತ್ತವೆ. ಸರ್ಪ ಮತ್ತು ಮುಂಗುಸಿ ಕೂಡಾ ಕುಳಿತುಕೊಳ್ಳುತ್ತವೆ. ದೇವಸ್ಥಾನಗಳಲ್ಲಿ ಸಹ ನಾವು ಸಮವಸರಣದ ಚಿತ್ರ ರಚಿಸುತ್ತೇವೆ. ಆದರೆ ಕೇವಲ ಚಿತ್ರ ಬರೆಯುವುದರಿಂದ ಏನಾಗುತ್ತದೆ ? ಮನೆಯಲ್ಲಿ ದೀಪದ ಚಿತ್ರ ಬಿಡಿಸುವುದರಿಂದ ಪ್ರಕಾಶ ಸಿಗಲು ಸಾಧ್ಯವೇ ? ಆ ಚಿತ್ರಗಳಾದರೋ ಜೀವನದಲ್ಲಿ ಆದರ್ಶಗಳನ್ನು ನಮ್ಮ ಮುಂದಿರಿಸುವುದಕ್ಕಾಗಿ ಮಾತ್ರವೇ ಇರುತ್ತವೆ. ಆಚರಣೆಗಳನ್ನು ಸುಧಾರಣೆಗೊಳಿಸಲು ಆಲಂಬನೆಯ ರೂಪದಲ್ಲಿ ಅರ್ಥಾತ್ ಆಧಾರವಾಗಿ ಚಿತ್ರಗಳನ್ನು ರಚಿಸುತ್ತಾರೆ.

ಹಿಂದೆ ನಮ್ಮಲ್ಲಿ ಶಾಸ್ತ್ರಗಳನ್ನು ಮುದ್ರಿಸುವ ಕ್ರಮವಿರಲಿಲ್ಲ. ಯಾರು 84 ಜಿನ ಮಂದಿರಗಳನ್ನು ಹಾಗೂ ಮಧುರೆಯ ರಂಗನಾಥನ ದೇವಸ್ಥಾನವನ್ನು ಕಟ್ಟಿಸಿದರೋ ಮತ್ತು ದಿಗಂಬರ ಜೈನ ಮಹಾಸಭೆಯ ಸಂಸ್ಥಾಪಕರಾಗಿರುವರೋ ಆ ರಾಜಾ ಲಕ್ಷ್ಮಣ ದಾಸರು ಶಾಸ್ತ್ರ, ಧರ್ಮಗ್ರಂಥಗಳನ್ನು ಮುದ್ರಿಸುವ ಅಭಿಪ್ರಾಯದವರಾಗಿರಲಿಲ್ಲ. ಈ ವಿಚಾರದ ಕುರಿತು ಬಹಳಷ್ಟು ವಿವಾದ ಉಂಟಾಯಿತು. ಹಾಗೇನಾದರೂ ಶಾಸ್ತ್ರಗಳನ್ನು ಮುದ್ರಿಸಿದುದಾದರೆ ಅವುಗಳನ್ನು ಎಲ್ಲರೂ ಮುಟ್ಟುವುದರಿಂದ ಕೆಟ್ಟುಹೋಗಬಹುದು, ಪ್ರೆಸ್‌ನಲ್ಲಿ

ಕೂಡಾ ಹಾಳಾಗಬಹುದು, ಅವಿನಯ ಉಂಟಾಗಬಹುದು ಮತ್ತು ಶಾಸ್ತ್ರಗಳು ಅಪವಿತ್ರವಾಗಿ ಹೋಗಬಹುದೆಂದು ಅನೇಕರು ಹೇಳುತ್ತಿದ್ದರು.

ಸಮವಸರಣದಲ್ಲಿ ಪಶು-ಪಕ್ಷಿಗಳೆಲ್ಲಾ ಕುಳಿತುಕೊಳ್ಳಬಹುದಾಗಿತ್ತು. ಉರಿಯುತ್ತಿರುವಾಗ ನಾಗ-ನಾಗಿನಿಯರಿಗೂ ಣಮೋಕಾರ ಮಂತ್ರ ಕೇಳಿಸುತ್ತಾರೆ. ನಾಯಿಗೂ ಣಮೋಕಾರ ಮಂತ್ರ ಕೇಳಿಸುತ್ತಾರೆ. ಆಗ ಧರ್ಮ ಕೆಟ್ಟುಹೋಗುವುದಿಲ್ಲ, ಅಪವಿತ್ರವಾಗುವುದಿಲ್ಲ. ಹಾಗಿದ್ದರೆ ಶಾಸ್ತ್ರಗಳನ್ನು ಮುಟ್ಟುವುದರಿಂದ ಅವು ಹಾಳಾಗುವುದಾದರೂ ಹೇಗೆ ? ನಾವು ನಮ್ಮ ಸಂಕೀರ್ಣತೆಗಳ ಕಾರಣದಿಂದಲೇ ಬಹಳ ಹಿಂದೆ ಉಳಿದಿದ್ದೇವೆ. ಇಡೀ ಪ್ರಪಂಚ ಎಚ್ಚರವಾದ ಮೇಲೆ ನಾವು ಕಣ್ಣು ತೆರೆದರೆ ನಾವು ಹಿಂದೆ ಬಿದ್ದದ್ದು ತಿಳಿಯುತ್ತದೆ. ಒಂದು ವೇಳೆ ನಮ್ಮ ಶಾಸ್ತ್ರಗಳು, ಸಾಹಿತ್ಯಗಳು ಮುದ್ರಿತವಾಗಿದ್ದರೆ ಇಡೀ ವಿಶ್ವದಲ್ಲಿ ನಮ್ಮ ಪ್ರಚಾರ ಉಂಟಾಗುತ್ತಿತ್ತು.

ಕ್ರೈಸ್ತ ಪಾದರಿಗಳು ಮತ್ತು ನರ್ಸ್‌ಗಳು ಭಿನ್ನ ಭಾಷೆಯವರಾದರೂ ಭಿನ್ನ ದೇಶದವರಾದರೂ, ಭಿನ್ನ ವಾತಾವರಣದವರಾದರೂ ನಮ್ಮ ದೇಶಕ್ಕೆ ಬರುತ್ತಾರೆ. ಯಾಕೆ ಬರುತ್ತಾರೆಂದರೆ ತಮ್ಮ ಧರ್ಮ ಪ್ರಚಾರಕ್ಕಾಗಿ ಬರುತ್ತಾರೆ. ಧರ್ಮ ಪ್ರಚಾರಕ್ಕೆ ತ್ಯಾಗದ ಆವಶ್ಯಕತೆಯಿದೆ. ಧರ್ಮದ ಬಗ್ಗೆ ವಾತ್ಸಲ್ಯವಿರಬೇಕು. ಒಂದು ಚಿಕ್ಕ ಮತಭೇದದ ಕಾರಣಕ್ಕಾಗಿ ದ್ವೇಷ-ಮತ್ಸರ ಪಡಬಾರದು. ಧರ್ಮ ಪ್ರಚಾರಕರು ಬಹಳ ಕಷ್ಟ ಸಹಿಸಬೇಕಾಗುತ್ತದೆ. ಆಚಾರ್ಯ ಶಾಂತಿಸಾಗರ ಮಹಾರಾಜರು ಧರ್ಮಕ್ಕಾಗಿ ಅನೇಕ ಕಷ್ಟಗಳನ್ನು ಅನುಭವಿಸಿದರು.

ಸಾಂಗಲಿಯಲ್ಲಿ ಒಬ್ಬ ಕಾರ್ಯಕರ್ತನಿದ್ದನು. ಅವನ ಪ್ರಭಾವ ಬಹಳ ದೊಡ್ಡದಾಗಿತ್ತು. ಅವನು ಇಂಗ್ಲೀಷ್ ಪಕ್ಷಪಾತಿಯಾಗಿದ್ದನು. ಅವನು ಆಚಾರ್ಯ ಶ್ರೀಗಳ ಕುರಿತು ಆಲೋಚಿಸುತ್ತಿದ್ದನು. ಆ ವೇಳೆಗೆ ಆಚಾರ್ಯ ಶ್ರೀಗಳು ರೋಡ್‌ವಾಲದಲ್ಲಿದ್ದರು. ಒಂದು ದಿನ ಆ ಕಾರ್ಯಕರ್ತನು ಸಾಂಗ್ಲಿಯಿಂದ ಅನೇಕ ವಿದ್ಯಾರ್ಥಿಗಳನ್ನು ಕರೆದುಕೊಂಡು ಬಂದು ಆಚಾರ್ಯರ ಮುಂದೆ ನಿಲ್ಲಿಸಿ ''ನೋಡಿ ಈತ ಸಾಧುವಲ್ಲ'' ಎನ್ನುತ್ತಾ ಅನೇಕ ವಿರುದ್ಧ ಮಾತುಗಳನ್ನಾಡಿದನು. ಆಚಾರ್ಯ ಶ್ರೀಗಳು ಏನೂ ಮಾತನಾಡಲಿಲ್ಲ, ಮೌನವಾಗಿಯೇ ಇದ್ದರು. ಆಚಾರ್ಯರನ್ನು ಈ ರೀತಿ ಅವಮಾನಿಸುವುದನ್ನು ನೋಡಿ ಸಹಿಸದ ಹಳ್ಳಿಯ ಜನರು ದೊಣ್ಣೆಗಳನ್ನು ಹಿಡಿದುಕೊಂಡು ಆತನನ್ನು ಹೊಡೆಯಲು ಮುಂದಾದಾದರು. ಆಗ ಆಚಾರ್ಯರು ''ನೀವು ದೊಣ್ಣೆ ಹಿಡಿದು ಹೊಡೆಯಲು ಸಿದ್ಧತೆ ಮಾಡಿದರೆ ಆತ ಸುಮ್ಮನಿರುವುದಿಲ್ಲ, ಆ ಮನುಷ್ಯ ಜಗಳ ಮಾಡುವುದನ್ನೇ ಬಯಸುವವನು. ನೀವು ಸುಮ್ಮನೆ ನಿಮ್ಮ ನಿಮ್ಮ ಮನೆಗಳಿಗೆ ಹೋಗಿರಿ'' ಎಂದರು. ಹಾಗೆ ಹಳ್ಳಿಗರನ್ನು ಸಮಾಧಾನಪಡಿಸಿ ಕಳುಹಿಸಿದ ಮೇಲೆ ಆಚಾರ್ಯರು ಸ್ವಯಂ ಒಳಗೆ ಕುಳಿತರು. ಆ ವ್ಯಕ್ತಿ ಅಲ್ಲಿಗೆ ಆಚಾರ್ಯರ ವಿರುದ್ಧವಾಗಿ ಭಾಷಣ ಮಾಡುವುದಕ್ಕಾಗಿಯೇ ಬಂದಿದ್ದ. ಆದರೆ ಇಷ್ಟೆಲ್ಲಾ ನಡೆದ ಮೇಲೆ ಅಲ್ಲಿ ಯಾರೊಬ್ಬರೂ ನಿಂತಿರಲಿಲ್ಲ. ಯಾರೂ ಇಲ್ಲದ ಮೇಲೆ ಮಾಡುವುದಾದರೂ ಏನು? ಕೊನೆಗೆ ಅವನು ಕೂಡಾ ಅಲ್ಲಿಂದ ಹೊರಟುಹೋದ.



ಯಾವಾಗ ಆಚಾರ್ಯ ಶ್ರೀಗಳು ಶ್ರವಣಬೆಳಗೊಳಕ್ಕೆ ಹೊರಟರೋ ಆಗ ಮೂರು ಕಿಲೋಮೀಟರ್ ದೂರದಿಂದಲೇ ಬಂದ ಹಳ್ಳಿಯ ಜನರು 'ಪೂಜ್ಯರೇ, ತಾವು ಈ ಗ್ರಾಮಕ್ಕೆ ಬರುವುದು ಬೇಡ'' ಎಂದು ಹೇಳಿದರು. ಅವರಿಗೆ ಈ ದಿಗಂಬರ ಸಾಧುಗಳು ಹೇಗಿರುವ ಜನರೆಂಬುದು ಗೊತ್ತಿರಲಿಲ್ಲ. ಅಲ್ಲಿ ಭಗವಾನ್ ಬಾಹುಬಲಿಯ ಅಷ್ಟು ದೊಡ್ಡ ಖಡ್ಗಾಸನ ದಿಗಂಬರ ಪ್ರತಿಮೆ ಇರುವಾಗ ದಿಗಂಬರ ಸಾಧುಗಳ ಬಗ್ಗೆ ಅವರು ತಿಳಿದಿರಲೇಬೇಕಿತ್ತು. ಆಚಾರ್ಯ ಶ್ರೀಗಳು ಹೇಳಿದರು- ''ಸರಿ, ನಾವು ಹಳ್ಳಿಗೆ ಬರುವುದಿಲ್ಲ, ಆದರೆ ಬೆಟ್ಟದ ಮೇಲೆ ಹೋಗಿ ದರ್ಶನ ಮಾಡಬಹುದಲ್ಲಾ!''. ಹಳ್ಳಿಗರು ಮತ್ತೆ ಹೇಳಿದರು- ''ಹಾಂ ಅಲ್ಲಿಗೆ ಹೋಗುವುದಾದರೆ ಹೋಗಬಹುದು''. ಸಾಧುಗಳ ಆಗಮನದ ವಿಚಾರ ತತ್ಕಾಲೀನ ರಾಜಾ ಕೃಷ್ಣರಾಜರಿಗೆ ಗೊತ್ತಾದೊಡನೆ ಅವರು ತಮ್ಮ ಪರಿವಾರ ಸಮೇತ ಅಲ್ಲಿಗೆ ಬಂದರು. ಅವರು ಆಚಾರ್ಯ ಶ್ರೀಗಳಿಗೆ ಪ್ರಣಾಮ ಮಾಡಿ ಶ್ರೀ ಫಲವನ್ನು ನೀಡಿದರು. ಊರಿನ ಜೈನರಿಗೆ ಸಾಧುಗಳನ್ನು ಭೇಟಿ ಮಾಡಲು ರಾಜರು ಬಂದರೆಂಬ ವರ್ತಮಾನ ಯಾವಾಗ ತಿಳಿಯಿತೋ ಆಗ ಇಡೀ ಜೈನ ಸಮಾಜವೇ ಅಲ್ಲಿ ಒಟ್ಟುಗೂಡಿತು ಮತ್ತು ಎಲ್ಲರೂ ''ಇವರೇ ಧರ್ಮಗುರುಗಳು'' ಎಂದು ಹೇಳತೊಡಗಿದರು.

ಅವರಿಗೆ ಅನೇಕ ಕಷ್ಟಗಳನ್ನನುಭವಿಸಬೇಕಾಯಿತು. ಸಾಮಾಜಿಕ ಕುನೀತಿಗಳು, ಅಂಧ ವಿಶ್ವಾಸಗಳು, ಮಿಥ್ಯಾಮಾನ್ಯತೆಗಳು ಇವುಗಳ ವಿರುದ್ಧ ಜನರಿಗೆ ತಿಳುವಳಿಕೆ ನೀಡಿದರು. ಸಮಾಜದಲ್ಲಿ ವೀತರಾಗೀ ದೇವರ ಪ್ರತಿಷ್ಠೆ ಮಾಡಿದರು. ಆ ದಿನಗಳಲ್ಲಿ ಜನರಿಗೆ ಸರಾಗೀ ದೇವರುಗಳ ಬಗ್ಗೆ ಹೆಚ್ಚು ಶ್ರದ್ಧೆಯಿತ್ತು. ಆಗ ಒಂದು ನಿಯಮ ಮಾಡಿಕೊಂಡರು, ಅದೇನೆಂದರೆ ''ಯಾವ ಮನೆಯಲ್ಲಿ ವೀತರಾಗೀ ದೇವರ ಪೂಜೆ ನಡೆಯುತ್ತದೋ ಅಲ್ಲಿ ಮಾತ್ರ ನಾವು ಆಹಾರ ತೆಗೆದುಕೊಳ್ಳುವುದು'' ಎಂದಾಗಿತ್ತು. ಅನಂತರ ಅವರು ಸರಾಗೀ ಮತ್ತು ವೀತರಾಗೀ ದೇವರುಗಳಲ್ಲಿರುವ ಅಂತರವೇನೆಂಬುದನ್ನು ತಿಳಿಸಿಕೊಟ್ಟರು.

ಕೊಲ್ಲಾಪುರದಲ್ಲಿ ಮಂತ್ರಿಗಳೊಬ್ಬರು ಆಚಾರ್ಯ ಶ್ರೀಗಳ ದರ್ಶನ ಪಡೆಯುವುದಕ್ಕಾಗಿ ಹೋದರು. ಅವರು ಪೂಜ್ಯರೊಡನೆ ''ನಮಗೆ ತಮ್ಮ ಸೇವೆ ಮಾಡುವ ಆದೇಶವೇನಾದರೂ ಇದ್ದರೆ ಕೊಡಿರಿ'' ಎಂದು ಕೇಳಿದರು. ಅದಕ್ಕೆ ಆಚಾರ್ಯ ಶ್ರೀಗಳು ''ಬಾಲವಿವಾಹವನ್ನು ಬಂದ್ ಮಾಡಿಸಿರಿ, ಇದೇ ನಮ್ಮ ಆದೇಶ'' ಎಂದರು. ಅದರಂತೆ ಆ ರಾಜ್ಯದಲ್ಲಿ ಆಚಾರ್ಯ ಶ್ರೀಗಳ ಪ್ರೇರಣೆಯಿಂದ ಬಾಲವಿವಾಹದ ವಿರುದ್ಧ ಕಾನೂನು ರಚಿಸಲಾಯಿತು ಮತ್ತು ಆ ಸಂಬಂಧವಾದ ಅಧ್ಯಾದೇಶ ಹೊರಡಿಸಲಾಯಿತು.

ಸನ್ 1923-24ರಲ್ಲಿ ರೋಡ್‌ವಾಲ್ ಗ್ರಾಮದಲ್ಲಿ ಜನರು ಅವರ ಮೇಲೆ ಕಲ್ಲುಗಳನ್ನೆಸೆದರು. ''ನಮ್ಮ ಗ್ರಾಮಕ್ಕೆ ಈ ಸಾಧು ಹೇಗೆ ಬಂದರು ?'' ಎಂಬುದು ಅವರ ನಿಲುವಾಗಿತ್ತು. ಆಚಾರ್ಯ ಶ್ರೀಗಳ ಜೊತೆಯಲ್ಲಿ ಮುನಿ ಚಂದ್ರಸಾಗರಜೀ, ಮುನಿ ವೀರಸಾಗರ್‌ಜೀ, ಮುನಿ ಪಾಯಸಾಗರ್‌ಜೀ ಮತ್ತು ಅನೇಕ ಐಲಕ-ಕ್ಷುಲ್ಲಕರೂ ಇದ್ದರು. ಆ ವೇಳೆಗೆ

ಯಾರೋ ಬಂದು ''ಸುಮಾರು ಐನೂರು ಮಂದಿ ಕೈಯಲ್ಲಿ ಲಾಠಿ ಹಿಡಿದುಕೊಂಡು ಇತ್ತ ಬರುತ್ತಿದ್ದಾರೆ' ಎಂದು ಸೂಚನೆ ಕೊಟ್ಟರು. ಆಚಾರ್ಯ ಶ್ರೀಗಳು ತಮ್ಮ ಎಲ್ಲ ಸಂಘ ಸದಸ್ಯರನ್ನು ಮಂದಿರದ ಒಳಗಡೆ ಕುಳಿತುಕೊಳ್ಳುವಂತೆ ಹೇಳಿದರು ಮತ್ತು ಬಾಗಿಲು ಹಾಕಿ ಅವರೊಬ್ಬರೇ ಹೊರಗೆ ಬಂದು ಕುಳಿತರು. ಅಷ್ಟರಲ್ಲಿ ಇದ್ದಕ್ಕಿದ್ದಂತೆ ದೊಡ್ಡ ಬಿರುಗಾಳಿಯೊಂದು ಜೋರಾಗಿ ಬಂತು. ಕತ್ತಲು ಕವಿಯಿತು. ಕತ್ತಲು ಸುತ್ತಲೂ ಆವರಿಸಿತು. ಆ ಉಪದ್ರವಿಗಳಿಗೆ ಗ್ರಾಮದೊಳಗೆ ಬರಲಾಗಲಿಲ್ಲ, ಅಷ್ಟರಲ್ಲಿ ಪೋಲೀಸರೂ ಬಂದರು. ಆ ಲಾಠಿ ಹಿಡಿದು ಬಂದ ಜನರನ್ನು ಹಿಡಿದುಕೊಂಡು ಹೋದರು. ಅವರ ಮೇಲೆ ಮೊಕದ್ದಮೆ ಹೂಡಲಾಯಿತು. ಪೋಲೀಸರು ಆಚಾರ್ಯರೊಡನೆ ''ನಿಮಗೆ ತೊಂದರೆ ಕೊಡಲು ಬಂದವರು ಇವರಲ್ಲವೇ'' ಎಂದು ಆ ಜನರನ್ನು ತೋರಿಸಿ ಹೇಳಿದರು. ಆಗ ಆಚಾರ್ಯರು ಅವರೇನೋ ತೊಂದರೆ ಕೊಡಲು ಬಂದಿರಬಹುದು, ಆದರೆ ಅವರನ್ನು ಬಿಟ್ಟುಬಿಡಿ'' ಎಂದರು ಆಗ ಮ್ಯಾಜಿಸ್ಟ್ರೇಟರು ''ಇವರನ್ನು ಬಿಡಬೇಕೆಂದು ಹೇಳುತ್ತೀರಾ ?'' ಎಂದು ಕೇಳಿದರು. ಅದಕ್ಕೆ ಶ್ರೀಗಳು ''ಕ್ಷಮಿಸುವುದೇ ಸಾಧುಗಳ ಧರ್ಮ, ಆದಕಾರಣ ಅವರನ್ನು ಕ್ಷಮಿಸಿಬಿಡಿ'' ಎಂದರು. ಕೂಡಲೇ ಮ್ಯಾಜಿಸ್ಟ್ರೇಟರು ಹೇಳಿದರು ''ತಾವು ತಮ್ಮ ಧರ್ಮವನ್ನು ಬಿಡಲಾರಿರಿ ಎಂದಾದರೆ ನಾನು ನನ್ನ ಧರ್ಮವನ್ನು ಬಿಡುವುದಾದರೂ ಹೇಗೆ ? ಅಪರಾಧಿಗಳಿಗೆ ಶಿಕ್ಷೆ ಕೊಡುವುದಕ್ಕಾಗಿಯೇ ನಾನು ನಿಯುಕ್ತನಾದವನಲ್ಲವೇ ?''

ಬಾರಾಮತಿಯಲ್ಲೂ ಗ್ರಾಮಸ್ಥರು ವಿರೋಧ ವ್ಯಕ್ತಪಡಿಸಿದರು. ಅಲ್ಲಿ ಪೋಪಟ ಲಾಲ್ ಷಾಹ ಎಂಬುವವರು ಬಹಳ ಪ್ರಭಾವಶಾಲಿಯಾದ ಕಾರ್ಯಕರ್ತರಾಗಿದ್ದರು. ಅವರು ಆಚಾರ್ಯಶ್ರೀಗಳನ್ನು ಬರಮಾಡಿಕೊಳ್ಳುವುದಕ್ಕೆ ಬೇಕಾದ ವ್ಯವಸ್ಥೆ ಮಾಡಿಸಿದರು. ಇಡೀ ಗ್ರಾಮವೇ ಅಲಂಕರಿಸಲ್ಪಟ್ಟಿತ್ತು. ಯಾವಾಗ ಸಿದ್ಧತೆಗಳೆಲ್ಲವೂ ನಡೆಯುತ್ತಲೇ ಇತ್ತೋ ಆಗ ತಹಶೀಲ್ದಾರರೊಬ್ಬರು ಆಚಾರ್ಯರ ಕುರಿತು ಸ್ವಲ್ಪ ಅಪಶಬ್ದವೆತ್ತಿ ಹಾಸ್ಯ ಮಾಡಿದರು. ಅಲ್ಲೊಬ್ಬರು ಶೇಠ್ ನಿಂತಿದ್ದರು. ಅವರು ತಹಶೀಲ್ದಾರರಿಗೆ ಒಂದು ಏಟು ಬಾರಿಸಿಯೇ ಬಿಟ್ಟರು. ತಹಶೀಲ್ದಾರರು ಇವರ ಬಗ್ಗೆ ಕಲೆಕ್ಟರರಿಗೆ ದೂರು ನೀಡಿದರು. ಕಲೆಕ್ಟರರು- ''ನೀನೇಕೆ ಗುರುಗಳ ನಿಂದೆ ಮಾಡಿದೆ ?'' ಎಂದು ಕೇಳಿದರು. ಆ ಕಲೆಕ್ಟರ್ ತಮ್ಮ ಮೇಲ್ವಿಚಾರಣೆಯಲ್ಲಿ ಆಚಾರ್ಯಶ್ರೀಗಳ ಮೆರವಣಿಗೆ ನಡೆಸಿದವರಾಗಿದ್ದರು.

ಅನುಗೌಡ್ ಎಂಬ ಗ್ರಾಮದಲ್ಲಿ ಜೈನರು ಬಲಿ ಕೊಡುವುದನ್ನು ನೋಡುವುದಕ್ಕಾಗಿ ಹೋಗುತ್ತಿದ್ದರು. ಆಚಾರ್ಯಶ್ರೀಗಳು ಈ ಕಾರ್ಯವನ್ನು ಧರ್ಮ ವಿರುದ್ಧವೆಂದು ಹೇಳಿದರು. ಬಲಿ ಕೊಡುವ ಪದ್ಧತಿಯೇ ಸರಿಯಲ್ಲವೆಂದು ಗ್ರಾಮೀಣರಿಗೆ ಆಚಾರ್ಯರು ಹೇಳಿ ಅದನ್ನು ನಿಷೇಧಿಸುವಂತೆ ಒಪ್ಪಿಸಿದರು. ಜೈನರಿಗೆ ಆ ವಿಚಾರವನ್ನು ತಿಳಿಸಿದ್ದು ಮಾತ್ರವಲ್ಲ ಅದಕ್ಕೋಸ್ಕರ ಅವರು ಮೂರು ಉಪವಾಸಗಳನ್ನು ಮಾಡಿದರು. ಅಂದಿನಿಂದ ಜೈನರು ಬಲಿ ಕೊಡುವುದನ್ನು ನೋಡಲು ಹೋಗುತ್ತಿರಲಿಲ್ಲ, ಯಾವ ಗ್ರಾಮದಲ್ಲಿ ಬಲಿ ಕೊಡುವ ಪದ್ಧತಿಯು ಜಾರಿಯಲ್ಲಿದೆಯೋ ಅಲ್ಲಿ ತಾವು ಆಹಾರ ಸ್ವೀಕಾರ ಮಾಡುವುದಿಲ್ಲವೆಂಬ



ಶರತ್ತು ಹಾಕಿ ಮೂರು ದಿನಗಳ ಉಪವಾಸವನ್ನೂ ಕೈಗೊಂಡರು. ಆಚಾರ್ಯಶ್ರೀಗಳು ಅಲ್ಲಿಂದ ವಿಹಾರ ಹೊರಟರು.

ಧರ್ಮಕ್ಕಾಗಿ, ಸಮಾಜಕ್ಕಾಗಿ ಅವರು ಬಹಳ ಕಷ್ಟ ಸಹಿಸಿದರು. ವಾತ್ಸಲ್ಯ ಮೂರ್ತಿಗಳಾಗಿದ್ದರು. ಯಾರಾದರೂ ಅವರ ಮೇಲೆ ಉಪಸರ್ಗ ಕೊಟ್ಟರೂ ಕೂಡಾ ಅವರು ಅಂಥವರನ್ನು ಕ್ಷಮಿಸುತ್ತಿದ್ದರು. ಬಾಲ್ಯದಿಂದಲೇ ದಯೆಯ ಸಂಸ್ಕಾರ ಅವರಲ್ಲಿತ್ತು. ಮುನಿ ದೀಕ್ಷಾ ಪಡೆಯುವ ಮೊದಲೇ ಅವರಿಗೆ ಗದ್ದೆ ಕೆಲಸ ಮಾಡುವುದರ ಬಗ್ಗೆ ಕಲಿಸಲಾಗಿತ್ತು. ಹಾಗೆ ಅವರು ಗದ್ದೆ ಕೆಲಸಕ್ಕೆ ಹೋಗಿದ್ದಾಗ ಅಲ್ಲಿ ಪಕ್ಷಿಗಳನ್ನು ನೋಡಿ ಅವು ಸಾಕಷ್ಟು ನೀರು ಕುಡಿಯುವಂತೆ ಅಲ್ಲಲ್ಲಿ ಪಾತ್ರೆಗಳನ್ನು ಇರಿಸುತ್ತಿದ್ದರು. ಅದರಿಂದ ಪಕ್ಷಿಗಳೆಲ್ಲಾ ಅಲ್ಲಿಗೆ ಬಂದು ನೀರು ಕುಡಿಯುವುದು ಮಾತ್ರವಲ್ಲ, ಗದ್ದೆಯ ಆಹಾರ ಪದಾರ್ಥಗಳನ್ನೂ ತಿಂದು ತುಂಬಾ ಹಾನಿ ಮಾಡುತ್ತಿದ್ದವು. ಇವರು ಯಾವಾಗ ಗದ್ದೆ ಕೆಲಸಕ್ಕೆ ಯೋಗ್ಯರಲ್ಲವೆಂದು ಮನವರಿಕೆಯಾಯಿತೋ, ಆಗ ಅವರ ಮಾವ ಹಾಗೂ ಮನೆಯ ಮಂದಿಯೆಲ್ಲಾ ಚಿನ್ನ-ಬೆಳ್ಳಿಯ ವ್ಯಾಪಾರಕ್ಕೆ ಅವರನ್ನು ಹಚ್ಚಿದರು. ಅಲ್ಲಿ ಮಾಲುಗಳ ಗುರುತು, ವ್ಯಾಪಾರದ ಅನುಭವ ಇತ್ಯಾದಿಗಳಿಲ್ಲದ ಕಾರಣ ಒಂದುದಿನ ಅವರು ಕಳ್ಳ ಮಾಲನ್ನು ಖರೀದಿಸಿದರು. ಅದಕ್ಕಾಗಿ ಪೋಲೀಸರು ಕೇಸ್ ಹಾಕಿದರು. ಆಗ ಅವರ ಮಾಮಾಜಿ ''ಈತ ಸಾಂಸಾರಿಕ ವಿಚಾರದಲ್ಲಿ ಅಸಫಲನಾಗಿದ್ದಾನೆ, ಇನ್ನು ಅಂಗಡಿ ನಡೆಸುವುದಾದರೂ ಹೇಗೆ? ಎಂದರು.

ಯಾವನು ಸಂಸಾರ ನಡೆಸಲು ಅಸಫಲನೋ, ಅವನು ಸಾಧುವಾಗಬಲ್ಲನು. ಧರ್ಮಕಾರ್ಯಕ್ಕೆ ಸಹಿಷ್ಣುತೆಯ ಆವಶ್ಯಕತೆಯಿದೆ. ಸಹಿಷ್ಣುತೆ-ಸಹನಶೀಲತೆ ಎಂಬುದು ಎಲ್ಲವನ್ನೂ ಎದುರಿಸುವ ಶಕ್ತಿಯುಳ್ಳದ್ದು, ನಾವು ದಶಲಕ್ಷಣ ಪೂಜೆಯ ಬಗ್ಗೆ ಓದುತ್ತೇವೆ. ಕ್ಷಮಾ ಮಾರ್ದವ ಧರ್ಮದ ಅರ್ಘ್ಯ ಬಿಡುತ್ತೇವೆ. ಆದರೆ ಜೀವನದಲ್ಲಿ ಅದನ್ನು ಅಳವಡಿಸಲಿಲ್ಲ ಎಂದಾದರೆ ಕೇವಲ ಓದುವುದರಿಂದ ಏನೂ ಪ್ರಯೋಜನವಿಲ್ಲ. ಮನುಷ್ಯರಾಗಿದ್ದೀರಿ, ಉತ್ತೇಜನ ಕೂಡಾ ನಿಮ್ಮಲ್ಲಿದೆ, ಅಂದಮೇಲೆ ಮನಸ್ಸಿನಲ್ಲಿ ವೈರ-ವಿರೋಧ ಭಾವ ಇಟ್ಟುಕೊಳ್ಳಲೇಬಾರದು. ಹಾಗೇನಾದರೂ ಅದನ್ನಿಟ್ಟುಕೊಂಡರೆ ಭವ-ಭವಾಂತರವು ಕೆಟ್ಟು ಹೋಗಬಹುದು. ಆಚಾರ್ಯ ಶ್ರೀಗಳ ಜೀವನದಲ್ಲಿ ಅಂತಹ ಅನೇಕ ಪ್ರಸಂಗಗಳು ಬಂದಿವೆ. ಹಾಗೇ ಅವರ ಪುಣ್ಯದಿಂದ ಅನೇಕ ಉಪಸರ್ಗಗಳು ಸ್ವಯಮೇವ ದೂರವಾದುದೂ ಇದೆ.

ಜೈನಧರ್ಮವು ಶ್ರಮಣ-ಶ್ರಮಣೀ, ಶ್ರಾವಕ-ಶ್ರಾವಿಕಾ, ಈ ನಾಲ್ಕರ ಸಹಯೋಗದಿಂದಲೇ ನಡೆಯಬಲ್ಲುದು. ಯಾರೋ ಒಬ್ಬರಿಂದಲ್ಲ, ನಾವು ಪ್ರತಿದಿನ ದೇವ-ದರ್ಶನ ಮಾಡುವಾಗ ಹೀಗೆ ಹೇಳುತ್ತೇವೆ.

ದರ್ಶನೇನ ಜಿನೇಂದ್ರಾಣಾಂ ಸಾಧೂನಾಂ ವಂದನೇನ ಚ ।
ನ ಚಿರಂ ತಿಷ್ಠತೇ ಪಾಪಂ, ಛಿದ್ರಹಸ್ತೇ ಯಥೋದಕಮ್ ॥

ಜಿನೇಂದ್ರ ಮತ್ತು ಸಾಧು ಪಾಪನಾಶನಕ್ಕೆ ಕಾರಣರಾದವರು. ಅವರ ದರ್ಶನದಿಂದ ಪಾಪವು ಕರಗುತ್ತದೆ, ನಷ್ಟವಾಗುತ್ತದೆ. ಇದು ನಮ್ಮ ಸಂಸ್ಕೃತಿಯ ಮೊದಲನೆಯ ಪಾಠ.

ಆಚಾರ್ಯ ಧರಸೇನರು ತತ್ತ್ವಜ್ಞಾನಿಗಳಾಗಿದ್ದರು. ಆಂಧ್ರಪ್ರದೇಶದ ವೇಣಾತಟದ ಮೇಲೆ ಯುಗ ಪ್ರತಿಕ್ರಮಣ ನಡೆಯುತ್ತಿದ್ದಾಗ ಅವರು ತಮ್ಮ ಒಂದು ಪತ್ರದ ಮಾಧ್ಯಮದಿಂದ ಈ ರೀತಿಯ ಸಂದೇಶ ಕಳುಹಿಸಿದರು- ''ನಾವು ವೃದ್ಧರಾಗಿದ್ದೇವೆ. ಸಲ್ಲೇಖಿನ ಸ್ವೀಕರಿಸುವ ಸಮಯ ಬಂದಿದೆ. ಇಬ್ಬರು ಯೋಗ್ಯ ಶಿಷ್ಯರನ್ನು ನಮ್ಮಲ್ಲಿಗೆ ಕಳುಹಿಸಿರಿ. ನಮ್ಮಲ್ಲಿ ಯಾವ ಸ್ವಲ್ಪ ಜ್ಞಾನವಿದೆಯೋ ಅದನ್ನು ಅವರಿಗೆ ನೀಡಲು ನಾವು ಬಯಸುತ್ತೇವೆ. ಅದರಿಂದ ಜ್ಞಾನದ ಪರಂಪರೆ ನಡೆಯುತ್ತಿರಲಿ.'' ಅವರು ವೀತರಾಗಿ ಸಾಧುಗಳಾಗಿದ್ದರು. ಜ್ಞಾನದ ಪರಂಪರೆ ನಡೆಯಲಿ, ನಡೆಯದಿರಲಿ ಅಥವಾ ಶಾಸ್ತ್ರಗಳು ರಚಿತವಾಗಲಿ, ಆಗದಿರಲಿ ಇದರಿಂದ ಅವರಿಗೇನಾಗಬೇಕಿತ್ತು ? ಹಾಗಲ್ಲ, ಅವರ ನಿಲುವು ಏನಾಗಿತ್ತೆಂದರೆ ವೀತರಾಗ ಭಗವಂತರ ವಾಣಿಯಿಂದ ಸ್ವಯಂ ಉಪಕಾರವಾಗಿದೆ. ಈಗ ಅದು ಅನ್ಯರಿಗೂ ದೊರಕುವಂತಾಗಲಿ ಎಂಬುದಾಗಿತ್ತು, ಇದು ಪರೋಪಕಾರದ ಭಾವನೆಯಾಗಿತ್ತು.

ಆಚಾರ್ಯ ಧರಸೇನರ ಸಂದೇಶವನ್ನು ಹೊಂದಿದ್ದ ಇಬ್ಬರು ಯುವಕ ಮುನಿರಾಜರ ಚಯನ ಮಾಡಲ್ಪಟ್ಟಿತ್ತು. ಹಿಂದೆ ಅವರಿಬ್ಬರಲ್ಲಿ ಒಬ್ಬರು ರಾಜ ಕುಮಾರರಾಗಿದ್ದರು ಮತ್ತು ಇನ್ನೊಬ್ಬರು ನಗರದ ಸೇಠ್‌ಜೀಯ ಪುತ್ರರಾಗಿದ್ದರು. ಈ ಚಯನದಿಂದ ಅವರಿಬ್ಬರೂ ಬಹಳ ಪ್ರಸನ್ನರಾಗಿದ್ದರು. ಆಚಾರ್ಯ ಧರಸೇನರು ನಿದ್ರೆಯಲ್ಲಿದ್ದರು ಅವರು ಸ್ವಪ್ನದಲ್ಲಿ ಎರಡು ಹೃಷ್ಟಪುಷ್ಟವಾದ ವೃಷಭಗಳು ಗುಟುರು ಹಾಕುತ್ತಾ ಅವರಿಗೆ ನಮಸ್ಕಾರ ಮಾಡುತ್ತಿರುವುದನ್ನು ನೋಡಿದರು. ಶಿಷ್ಯರ ಆಯ್ಕೆ ಆಯಿತೆಂದು ಅವರು ತಿಳಿದರು. 'ಜಯ್‌ಸುದದೇವದಾ' ಎಂದು ಹೇಳಿ ಅವರು ಸಾಮಯಿಕಕ್ಕೆ ಕುಳಿತರು.

ಪ್ರಾತಃಕಾಲ ಇಬ್ಬರು ಮುನಿರಾಜರೂ ಬಂದು ಮುಟ್ಟಿದರು. ವಿನಯ ಪೂರ್ವಕ ನಮಸ್ಕಾರ ಮಾಡಿ ಕುಳಿತುಕೊಂಡರು. ಆಚಾರ್ಯರು ಆ ಇಬ್ಬರು ಮುನಿರಾಜರ ಜ್ಞಾನ ಮತ್ತು ಯೋಗ್ಯತೆಯ ಪರೀಕ್ಷೆ ಮಾಡಿದರು. ಅನಂತರ ಅವರಿಗೆ ಐದು ವರ್ಷಗಳ ಕಾಲ ಓದಿಸಿದರು. ಓದಿಸಿ ಯೋಗ್ಯರೆನಿಸಿದ ಮೇಲೆ ಅವರು ಆ ಇಬ್ಬರು ಮುನಿರಾಜರನ್ನೂ ಕರೆದು ''ನಾವಿನ್ನು ಸಲ್ಲೇಖನಾ ಧಾರಣೆ ಮಾಡುತ್ತೇವೆ, ನೀವು ಅಂಕಲೇಶ್ವರಕ್ಕೆ ಹೋಗಿ ಚಾತುರ್ಮಾಸ ಮಾಡಿರಿ'' ಎಂದು ಹೇಳಿದರು. ಆಗ ಇಬ್ಬರೂ ಮುನಿರಾಜರಿಗೆ- ''ನೀವೇನೋ ಸಲ್ಲೇಖನಾ ಸ್ವೀಕರಿಸುತ್ತೀರಿ, ನಾವು ತಮ್ಮನ್ನು ಬಿಟ್ಟು ಹೇಗೆ ಹೋಗಬಲ್ಲೆವು?'' ಎಂದರು ಆಚಾರ್ಯರು ಹೇಳಿದರು- ''ಏನೂ ಯೋಚಿಸಬೇಡಿ, ನೀವು ಹೋಗಿರಿ'' ಗುರುಗಳ ಮಾತನ್ನು ಮೀರುವುದು ಅವಿನಯವಾಗುತ್ತದೆಂದು ಭಾವಿಸಿದ ಆ ಇಬ್ಬರು ಮುನಿ ಮಹಾರಾಜರು ಗುರುಗಳಿಗೆ ಪ್ರಣಾಮ ಮಾಡಿ ಆಷಾಢ ಶುಕ್ಲ ಏಕಾದಶಿಯಂದು 270 ಮೈಲು ದೂರವಿರುವ ಅಂಕಲೇಶ್ವರವನ್ನು ನಾಲ್ಕು ದಿನಗಳಲ್ಲಿ ತಲುಪಿ ಚತುರ್ದಶಿಯಂದು ಚಾತುರ್ಮಾಸದ ಸ್ಥಾಪನೆ ಮಾಡಿದರು. ಇದು ಗುರು ವಿನಯದ ಉತ್ತಮ ಉದಾಹರಣೆ. ಅನಂತರ ಅವರು ಗುರುಗಳಿಂದ ಏನನ್ನು ಕಲಿತರೋ ಅದನ್ನು ಗ್ರಂಥ ರೂಪದಲ್ಲಿ ರಚಿಸಿದರು.



ಪಂಡಿತ್ ರಾಹುಲ್ ಸಾಂಕೃತ್ಯಾಯನರು ''ಹಿಂದೀ ಕಾವ್ಯಧಾರಾ'' ಪುಸ್ತಕದಲ್ಲಿ 'ನಾವು ಜೈನರಿಗೆ ಋಣಿಗಳಾಗಿದ್ದೇವೆ, ಏಕೆಂದರೆ ಅವರು ಸಾಹಿತ್ಯವನ್ನು, ಗ್ರಂಥಗಳನ್ನು ಸುರಕ್ಷಿತವಾಗಿರಿಸಿದ್ದಾರೆ' ಎಂದು ಬರೆದಿದ್ದಾರೆ. ಇದರ ಶ್ರೇಯಸ್ಸು ಮಹಿಳೆಯರಿಗೆ ಸಲ್ಲುತ್ತದೆ. ಮಹಿಳೆಯರು ವ್ರತದ ಉದ್ಯಾಪನೆ ಮಾಡಿ ಹತ್ತು-ಹತ್ತು ಗ್ರಂಥಗಳನ್ನು ಕೈಯಲ್ಲಿ ಬರೆಸಿ ಮಂದಿರದಲ್ಲಿ ಏರಿಸುತ್ತಿದ್ದರು. ಯಾವ ಮಹಿಳೆಯೇ ಆಗಿರಲಿ, ಷೋಡಶಕಾರಣ ವ್ರತದ ಉದ್ಯಾಪನೆ ಮಾಡುವುದಾದರೆ ಹದಿನಾರು ಮಂದಿರಗಳಲ್ಲಿ ಹದಿನಾರು ಗ್ರಂಥಗಳನ್ನು ಹಾಜರುಪಡಿಸುತ್ತಿದ್ದಳು. ಸುಗಂಧದಶಮಿಯ ಉದ್ಯಾಪನೆ ಮಾಡುವಾಗ ಹತ್ತು ಗ್ರಂಥಗಳನ್ನು ನಿವೇದಿಸುತ್ತಿದ್ದಳು. ಅನೇಕ ಆಪತ್ತು-ವಿಪತ್ತು ಬಂದಾಗ ಕೂಡಾ ಗ್ರಂಥಗಳ ರಕ್ಷಣೆ ಮಾಡುವುದಿತ್ತು. ಪಂಡಿತ್ ಆಶಾಧರ ಸೂರಿಯವರು ಜಿನ ಪಲಿತದೊಂದಿಗೆ ತಲೆಯ ಮೇಲೆ ಗ್ರಂಥಗಳನ್ನಿಟ್ಟು ಅವುಗಳನ್ನು ರಕ್ಷಿಸುತ್ತಾ ಅಲ್ಲಲ್ಲಿ ತಿರುಗಾಡುತ್ತಿದ್ದರು. ಅವರು 720 ಮುನಿಗಳಿಗೆ ಕಲಿಸಿದರು. ಅವರು ಸಾಗಾರ ಧರ್ಮಾಮೃತದಲ್ಲಿ ಹೀಗೆ ಬರೆದಿದ್ದಾರೆ;-

**ಜಿನಧರ್ಮಂ ಜಗತಬಂಧುಮನುಬಧ್ರುಪತ್ಯಂವತ್ ।**
**ಯತೀಂಜನಯಿತುಂ ಯಸ್ಯೇತ್ತಥೋತ್ಕರ್ಷಯಿತುಂ ಗುಣಾ ॥**

ಮನೆಯಲ್ಲಿ ಯಾವುದೇ ಮಗುವಿನ ಜನನವಾಗದಿದ್ದರೆ ವಂಶಾಭಿವೃದ್ಧಿಗಾಗಿ ದತ್ತು ತೆಗೆದುಕೊಳ್ಳುತ್ತಾರೆ. ಹಾಗೆಯೇ ಧರ್ಮದ ವಂಶ ನಡೆಯುವುದಕ್ಕಾಗಿ, ಧರ್ಮದ ಪರಂಪರೆ ಮುಂದುವರೆಯುವುದಕ್ಕಾಗಿ ಮುನಿ ಸಾಧುಗಳನ್ನು ತಯಾರಿಸುವುದು ಆವಶ್ಯಕವಾಗಿದೆ. ಯಾರನ್ನು ಮುನಿಗಳಾಗಿ ಮಾಡುತ್ತೀರೊ ಅವರಿಗೆ ಕಲಿಸಲು ವಿದ್ವಾಂಸರನ್ನು ನಿಯೋಜಿಸಿರಿ, ವಿದ್ವಾಂಸರನ್ನೂ ತಯಾರಿಸಿರಿ. ಅದಕ್ಕಾಗಿ ಧನವ್ಯಯ ಮಾಡಿರಿ. ಆಗ ಧರ್ಮವಂಶ ನಡೆಯಬಹುದು, ಧರ್ಮದ ಪರಂಪರೆ ನಡೆಯಬಹುದು. ಎಲ್ಲ ಧರ್ಮ-ಮತ-ಸಮಾಜಗಳಲ್ಲೂ ಸಾಧು-ತ್ಯಾಗಿ-ವಿದ್ವಾಂಸರು ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಅವರು ದೇಶ-ವಿದೇಶಗಳಲ್ಲಿ ತಮ್ಮ ಧರ್ಮದ ಪ್ರಚಾರ ಮಾಡುತ್ತಾರೆ. ಅಂಥವರಿಗೆ ಅದಕ್ಕಾಗಿ ಪ್ರಶಿಕ್ಷಣ ನೀಡಲಾಗುತ್ತದೆ. ನಮ್ಮಲ್ಲಿ ಕೂಡಾ ಗುರುಕುಲದ ಪರಂಪರೆಯಿದೆ. ಹಿಂದೆ ಅನೇಕ ಗುರುಕುಲಗಳಿದ್ದವು. ಅಲ್ಲಿ ಲೌಕಿಕ ಮತ್ತು ಆಧ್ಯಾತ್ಮಿಕ ಅಧ್ಯಯನ ಮಾಡಿಸಲಾಗುತ್ತಿತ್ತು. ಜಯಪುರದ ಅರ್ಜುನಲಾಲ್ ಸೇಠಿಯವರ ಸಹಪಾಠಿಗಳಾಗಿದ್ದ ಆಚಾರ್ಯ ಸಮಂತಭದ್ರಜೀ ಮಹಾರಾಜರು ಕುಂಭೋಜ ಬಾಹುಬಲಿಯಲ್ಲಿ ಅನೇಕ ಗುರುಕುಲಗಳನ್ನು ಸ್ಥಾಪಿಸಿದರು.

ಅನಂತರ ಸಮಂತಭದ್ರಜೀಯವರು ಭ್ಯಾವರದಲ್ಲಿ ಆಚಾರ್ಯ ಶಾಂತಿಸಾಗರಜೀ ಮಹಾರಾಜರಿಂದ ಕ್ಷುಲ್ಲಕ ದೀಕ್ಷೆ ಪಡೆದರು. ಆಚಾರ್ಯ ಶ್ರೀಗಳು ಮೊದಲು ಗುರುಕುಲ

ತೆರೆಯಲು ಸಮ್ಮತಿ ಕೊಡಲಿಲ್ಲ. ಅವರು ಹೇಳುತ್ತಿದ್ದುದು ಹೀಗೆ ''ಒಬ್ಬ ಮಗನೂ ಬೇಡವೆಂದು ಮನೆಯನ್ನು ಬಿಟ್ಟಾಯಿತು. ಇಲ್ಲಿಯೇ ಸಾವಿರಾರು ಮಕ್ಕಳು ಒಟ್ಟುಗೂಡುತ್ತಾರೆ. ಯಾಕೆ ಇಂತಹ ಗುರುಕುಲದ ಜಗಳದಲ್ಲಿ ಬೀಳುತ್ತೀ'' ಆದರೆ ಆಚಾರ್ಯ ಸಮಂತಭದ್ರರು ಕೇವಲ ಐದು ಮಕ್ಕಳಿಂದ ಗುರುಕುಲವನ್ನು ಪ್ರಾರಂಭಿಸಿದರು.

ಅಲ್ಲಿ ಅವರು ಮಾಡುತ್ತಿದ್ದ ಕೆಲಸ ಒಂದಲ್ಲ, ಎರಡಲ್ಲ, ಮಕ್ಕಳಿಗೆ ಕಲಿಸುವುದು, ಸ್ನಾನ ಮಾಡಿಸುವುದು, ಮಕ್ಕಳ ಬಟ್ಟೆ ಒಗೆಯುವುದು, ಅಡಿಗೆ ಮಾಡುವುದು, ಊಟ ತಿನ್ನಿಸುವುದು, ಪಾತ್ರೆ ತೊಳೆಯುವುದು ಇತ್ಯಾದಿ. ಇಂದು ಅವರು 17 ಗುರುಕುಲಗಳನ್ನು ಅಲ್ಲಿ ನಡೆಸುತ್ತಿದ್ದಾರೆ. ಸಾವಿರಾರು ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡಿದರು. ಸಂಸ್ಕೃತಿ ಮತ್ತು ಸಮಾಜಕ್ಕಾಗಿ ತ್ಯಾಗದ ಹಾಗೂ ಸಮರ್ಪಣೆಯ ಅವಶ್ಯಕತೆಯಿದೆ. ನಮ್ಮ ಸಮಾಜದ ಮಾಣಿಕಚಂದ್ ಪಾನಾಚಂದ್‌ರವರು ತಮ್ಮ ಜೀವನದಲ್ಲಿ 24 ಬೋರ್ಡಿಂಗ್‌ಗಳನ್ನು ತೆರೆದರು. ಅನೇಕ ಮಕ್ಕಳಿಗೆ ಶಿಷ್ಯವೃತ್ತಿ ನೀಡಿ ಕಲಿಸಿದರು. ತೀರ್ಥಕ್ಷೇತ್ರಗಳ ರಕ್ಷಣೆಯಲ್ಲಿ ತತ್ಪರರಾಗಿದ್ದರು. ಪರೀಕ್ಷಾಲಯ ಪ್ರಾರಂಭಿಸಿದರು. ಬೊಂಬಾಯಿಯಲ್ಲಿ ಒಂದು ಮಹಿಳಾ ಆಶ್ರಮ ಸ್ಥಾಪಿಸಿದರು. ಅವರು ಲಂಡನ್ನಿನಲ್ಲಿ ಕೂಡಾ ಒಂದು ಬೋರ್ಡಿಂಗ್ ಸ್ಥಾಪಿಸಲು ಇಚ್ಛಿಸಿದ್ದರು. ಆದರೆ ಅವರು ನಿಧನಹೊಂದಿದುದರಿಂದ ಅದು ಕ್ರಿಯಾನ್ವಿತವಾಗಲಿಲ್ಲ. ಅವರು ಮಹಿಳೆಯರಿಗೆ ಕಲಿಸುವುದಕ್ಕಾಗಿ ಬ್ರ. ಶೀತಲ್ ಪ್ರಸಾದ್‌ಜೀಯವರನ್ನು ನಿಯುಕ್ತಗೊಳಿಸಿದರು. ಮಗನ್‌ಭಾಯಿ, ಕಂಕೂಭಾಯೀ ಮೊದಲಾದವರು ಅವರಿಂದ ಶಿಕ್ಷಣ ಪಡೆದರು. ಆ ಮಹಿಳೆಯರು ಶಿಖರಜೀ ಯಾತ್ರೆ ಮಾಡಿ ಲಖನೌಗೆ ಹೋದರು. ಅಲ್ಲಿ ಮಂದಿರದಲ್ಲಿ ಶ್ವೇತ ವಸ್ತ್ರಧಾರಿಗಳಾಗಿ ಪೂಜೆಗೆ ಕುಳಿತುಕೊಂಡಾಗ ಅಲ್ಲಿಯ ಅನ್ಯ ಮಹಿಳೆಯರು ಅವರ ಜ್ಞಾನದಿಂದ ಪ್ರಭಾವಿತರಾದರು. ಯಾವಾಗ ಅವರು ಮಧ್ಯಪ್ರದೇಶಕ್ಕೆ ಹೋದರೋ ಆಗ ಅಲ್ಲಿ ಮಹಿಳೆಯರು ಕಲಿಯಬೇಕೆಂದು ಹೇಳಿದಾಗ ಆ ಮಹಿಳೆಯರು ''ಓದುವುದರಿಂದ ಮಹಿಳೆಯರು ವಿಧವೆಯರಾಗುತ್ತಾರೆ, ಹಾಗೆ ನೀವು ಆಗಿಲ್ಲವೇ ?'' ಎಂದು ಕೇಳಿದರು. ಈ ಮಧ್ಯೆ ಸ್ವಲ್ಪ ಕಾಲ ಬಾಹ್ಯ ಪ್ರಭಾವದಿಂದ ಇಲ್ಲಿಯೂ ಕೂಡಾ ಸ್ತ್ರೀ ಶಿಕ್ಷಣದಲ್ಲಿ ಅನೇಕ ಬಾಧೆಗಳುಂಟಾಗಿವೆ.

ಧರ್ಮದ ವಿಚಾರದಲ್ಲಿ ಸ್ವಲ್ಪ ಕಠಿಣತೆಯಿರಬೇಕು. ಕಠಿಣತೆಯ ಅರ್ಥ ಆಚರಣೆಯಲ್ಲಿ ದೃಢತೆ. ಅದು ಇತರರನ್ನು ತಿರಸ್ಕರಿಸುವುದಲ್ಲ. ವಿಪತ್ತು ಉಂಟಾದಾಗ ಕೂಡಾ ದೃಢವಾದ ಶ್ರದ್ಧೆಯಿಂದ ಆಚರಣೆಯಿಂದ ವಿಚಲಿತನಾಗದಿರುವುದು. ಶ್ರದ್ಧೆ ಎಂದರೆ ನೀರಿನಲ್ಲಿ ಏನನ್ನೋ ಹಾಕಿ ಕರಗಿಸಿದಂತಲ್ಲ. ಸ್ವಯಂ ಧರ್ಮವನ್ನು ಪಾಲಿಸಬೇಕು. ಸ್ವಯಂ ಧರ್ಮವನ್ನು ಪಾಲಿಸಿದರೆ ಸಾಲದು, ನೆರೆಹೊರೆಯವರಿಗೂ ಅದನ್ನು ಕಲಿಸಿರಿ. ಒಂದು ದೀಪದಿಂದ ಸಾವಿರಾರು ದೀಪಗಳನ್ನು ಉರಿಸಲು ಸಾಧ್ಯವಾಗುತ್ತದೆ. ಒಬ್ಬ ವ್ಯಕ್ತಿ ಒಂದು ಬಾವಿ ತೋಡಿದರೆ ಸಾಕು, ಅದರಿಂದ ಸಾವಿರಾರು ಮಂದಿ ನೀರು ಕುಡಿದು ತೃಪ್ತರಾಗುತ್ತಾರೆ. ಒಬ್ಬ ವ್ಯಕ್ತಿ ದೇವಸ್ಥಾನ ಕಟ್ಟಿಸಿದರೆ ಸಾವಿರಾರು ಜನರು ಅದರಿಂದ ಲಾಭಾನ್ವಿತ



ರಾಗುತ್ತಾರೆ. ಒಬ್ಬ ವ್ಯಕ್ತಿ ಶಾಸ್ತ್ರವನ್ನು ಮುದ್ರಿಸಿದನೆಂದಾದರೆ ಅದರಿಂದ ಸಹಸ್ರಾರು ಮಂದಿ ಸ್ವಾಧ್ಯಾಯ ಮಾಡುತ್ತಾರೆ. ಯಾವುದು ಸಾವಿರಾರು ಮಂದಿಯ ಉದ್ಧಾರ ಮಾಡುತ್ತದೋ, ಅದೇ ಧರ್ಮವಾಗುತ್ತದೆ.

ಪೂನಾದಲ್ಲಿ ಮಹಿಳೆಯರ ಒಂದು ಸಂಘಟನೆಯು ಅಪರಾಹ್ನದ ಖಾಲಿ ಸಮಯವನ್ನು ಉಪಯೋಗಿಸಿ ಧರ್ಮವನ್ನು ಓದುವ-ಓದಿಸುವ-ಕಲಿಸುವ ಪ್ರಶಿಕ್ಷಣವನ್ನು ಪ್ರಾರಂಭಿಸಿತು. ಕ್ರಮೇಣ ಮುನ್ನೂರಕ್ಕಿಂತಲೂ ಹೆಚ್ಚು ಮಂದಿ ಮಹಿಳೆಯರು ಪ್ರಶಿಕ್ಷಿತರಾದರು. ನೀವು ಕೂಡಾ ಐದೋ ಹತ್ತೋ ಮಹಿಳೆಯರ ಜೊತೆಗೆ ಅಂತಹ ಸಂಘಟನೆಯನ್ನು ಮಾಡಿರಿ, ಒಂದೆರಡು ಗಾಥೆಗಳ ಸ್ವಾಧ್ಯಾಯ ಮಾಡಿರಿ, ಅಧಿಕ ಓದಬೇಕಾದ ಆವಶ್ಯಕತೆಯಿಲ್ಲ. ಜೈನ ಧರ್ಮಕ್ಕಾಗಿ ಅನೇಕ ಜನರು ಕೆಲಸ ಮಾಡಿದರು. ಜಯಪುರವು ಜೈನ ನಗರವಾಗಿದೆ. ಜ್ಞಾನ-ವಿಜ್ಞಾನದ ಈ ಯುಗದಲ್ಲಿ ಶಿಕ್ಷಿತ ಜನರೂ ಬೇಕಾದಷ್ಟಿದ್ದಾರೆ. ತಮ್ಮ ಮಕ್ಕಳಿಗೆ ಉಚ್ಚ ಶಿಕ್ಷಣದ ಜೊತೆಗೆ ಎರಡು ವಿಚಾರಗಳ ಬಗ್ಗೆ ಸಂಸ್ಕಾರವನ್ನು ಆವಶ್ಯವಾಗಿ ಕೊಡಿರಿ. ಒಂದು **ಆಹಾರ ಪಾನೀಯದ ಶುದ್ಧತೆಯಲ್ಲಿ ಧ್ಯಾನವಿರಿಸುವುದು ಮತ್ತು ಇನ್ನೊಂದು ಅರಿಹಂತ ಭಗವಂತರ ಮೇಲೆ ಶ್ರದ್ಧೆಯಿರಿಸುವುದು, ಇವೆರಡನ್ನು ಎಂದಿಗೂ ಬಿಡಬಾರದು.** ನಮ್ಮ ಮಕ್ಕಳು ಈಗ ಸರ್ವಭಕ್ಷಿಗಳಾಗಿರುವುದನ್ನು ನಾವು ನೋಡುತ್ತಲೇ ಇದ್ದೇವೆ. ಅವರನ್ನು ನಾವು ಉಳಿಸಬೇಕು.

ಭಾರತದ ರಾಷ್ಟ್ರಪತಿಗಳಾಗಿದ್ದ ಶಂಕರ್‌ದಯಾಳ್ ಶರ್ಮರು ''ಬಾವನ್‌ಗಜಾ ಮಹೋತ್ಸವ್'ದಲ್ಲಿ ಹೀಗೆ ಹೇಳಿದ್ದರು- ''ನಮ್ಮ ತಂದೆ ಭಕ್ತಾಮರ ಸ್ತೋತ್ರವನ್ನು ಓದುತ್ತಿದ್ದರು. ಅನೇಕ ಜೈನರು ಅವರ ಭಕ್ತಾಮರ ಸ್ತೋತ್ರವನ್ನು ಅವರಿಂದ ಕೇಳಲು ಮತ್ತು ಕಲಿಯಲು ಬರುತ್ತಿದ್ದರು. ಬಾವನ್‌ಗಜಾ ಮಹೋತ್ಸವಕ್ಕೆ ಅವರು ಬಂದರೆ ಅವರ ಅನ್ನ-ಪಾನೀಯದ ವ್ಯವಸ್ಥೆಯೇ ಬೇರೆಯಾಗಿತ್ತು. ಅದು ನೀರುಳ್ಳಿ-ಬೆಳ್ಳುಳ್ಳಿ ಹಾಗೂ ಮಸಾಲೆ ರಹಿತವಾಗಿರಬೇಕೆಂಬ ನಿರ್ದೇಶನವಿತ್ತು. ಅವರ ಅಡುಗೆಯ ಜನರು ತಮ್ಮ ಸೇವಾವೃತ್ತಿಯ ಬಳಿಕ ನಮಗೆ ಮಸಾಲೆರಹಿತವಾದ ಅಡುಗೆಯನ್ನು ಚೆನ್ನಾಗಿ ಮಾಡುವ ಸಾಮರ್ಥ್ಯ ಬಂದಿದೆ ಎಂದು ಹೇಳಿದರು.''

ನಮ್ಮ ಮಕ್ಕಳು ಎಂದಿಗೂ ಸರ್ವಭಕ್ಷಿಗಳಾಗಬಾರದೆಂಬ ವಿಚಾರವಾಗಿ ನಾವು ಎಚ್ಚರ ವಹಿಸಬೇಕು. ಕಾಡಿನ ರಾಜನಾದ ಸಿಂಹವು ತನಗೆ ಎಷ್ಟೇ ಹಸಿವೆಯಾಗಿರಲಿ, ತನ್ನ ಭೋಜನ ದೊರಕಲಿಲ್ಲವೆಂದಾದರೆ ಉಪವಾಸವಿದ್ದೀತೇ ಹೊರತು ಹುಲ್ಲು ತಿನ್ನಲಾರದು. ಅಂತೆಯೇ ಕುಲೀನ ಸಂಸ್ಕಾರ ಸಂಪನ್ನ, ಅಹಿಂಸಕ ಸಂಸ್ಕೃತಿಯ ಉಪಾಸಕರು ವಿಪತ್ತು ಬಂದರೂ ಕೂಡಾ ಶಾಕಾಹಾರ ದೊರಕಲಿಲ್ಲವಾದರೆ ಅಭಕ್ಷ್ಯ ಭಕ್ಷಣವನ್ನು ಎಂದೂ ಮಾಡಲಾರರು. ತಮ್ಮ ನೀತಿ ಮಾರ್ಗದಿಂದ ಎಂದಿಗೂ ಚ್ಯುತರಾಗಲಾರರು. ನಮ್ಮ ಮುಖ ಪವಿತ್ರವಾದುದು. ಅದರಿಂದ ನಾವು ಭಗವಂತನ ನಾಮಸ್ಮರಣೆ ಮಾಡುತ್ತೇವೆ. ಈ

ಮುಖವೂ ಏನನ್ನಾದರೂ ತುಂಬಿಸುವ ಮುನಿಸಿಪಾಲಿಟಿ ಡಬ್ಬಿಯಲ್ಲ, ಆ ಡಬ್ಬಿಯಾದರೋ ಏನನ್ನು ಹಾಕಿದರೂ ಬೇಡವೆನ್ನುವುದಿಲ್ಲ, ಆದರೆ ಮುಖ ಹಾಗಲ್ಲ ಅದು ಪವಿತ್ರ. ಅದನ್ನು ತಂಬಾಕು ಇತ್ಯಾದಿಗಳಿಂದ ತುಂಬಿಸಿ ಅಪವಿತ್ರಗೊಳಿಸಬೇಡಿ.

---

## ವಿದ್ಯಾನಂದ ವಚನಾಮೃತ

*ಶಾಸ್ತ್ರವನ್ನು ಕಿವಿಯಿಂದ ಕೇಳಿದರೆ ಸಾಲದು. ತಾವು ಪ್ರತಿಜ್ಞೆ ಮಾಡಿ ಹತ್ತೋ, ಇಪ್ಪತ್ತೋ ನಿಮಿಷಗಳಷ್ಟಾದರೂ ಸ್ವಾಧ್ಯಾಯ ಮಾಡುವ ಸಂಕಲ್ಪ ಮಾಡಿದರೆ ನಾವು ಹೇಳಿದ್ದು ಸಾರ್ಥಕವಾಗುತ್ತದೆ. ಶುದ್ಧೋಪಯೋಗದಿಂದಲೂ ಕರ್ಮಕ್ಷಯವಾಗುವುದು ಎಂದು ಜಯಧವಳದಲ್ಲೂ ಹೇಳಿದೆ. ಶುದ್ಧೋಪಯೋಗದಿಂದ ಮುಕ್ತಿ ಸಿಗುವುದು. ಶುಭ ಪರಿಣಾಮದಿಂದಲೂ ಕೆಲವು ಕರ್ಮಗಳು ನಾಶವಾಗುವುದು. ಪ್ರತಿನಿತ್ಯ ಪಾತ್ರೆ ತಿಕ್ಕಿ ಫಳಫಳ ಮಾಡುವಿರಿ. ಬಟ್ಟೆ ಒಗೆಯುತ್ತೀರಿ. ಸ್ನಾನ ಮಾಡಿ ಮೈ ಸ್ವಚ್ಛವಾಗಿಡುತ್ತೀರಿ. ಹಾಗೆಯೇ ಮನಸ್ಸಿನಲ್ಲಿ ಕೆಟ್ಟ ವಿಚಾರಗಳಿದ್ದರೆ ಅದು ಕೆಟ್ಟ ವಿಚಾರಗಳ ಕಸದ ರಾಶಿಯಾಗುವುದು. ಮನಸ್ಸು ಆಗಾಗ ಸ್ವಚ್ಛ ಮಾಡಿಕೊಳ್ಳಿ. ಅದನ್ನು ಮಾಡದೆ ಹೊರಗಡೆ ಎಷ್ಟು ಸ್ವಚ್ಛ ಮಾಡಿದರೂ ಏನೂ ಪ್ರಯೋಜನವಿಲ್ಲ. ಐದು ನಿಮಿಷ ಧ್ಯಾನ ಮಾಡಿದರೂ ಸಾಕು, ಕರ್ಮಗಳು ದಹಿಸಿ ಹೋಗುವುವು. "**ಜ್ಞಾನಾಗ್ನಿ ಸರ್ವ ಕರ್ಮಾಣಿ ಭಸ್ಮ**"*

*ಒಂದು ನಿಮಿಷ ಏಕಾಗ್ರತೆಯಿಂದ ಧ್ಯಾನ ಮಾಡಿದರೂ ಸಾಕು. ಅಸಂಖ್ಯಾತ ಕರ್ಮಗಳು ನಿರ್ಜರೆಯಾಗುವುವೆಂದು ಜೈನಾಚಾರ್ಯರು ಹೇಳಿದ್ದಾರೆ. ಹತ್ತಿಯ ರಾಶಿ ಪರ್ವತದಷ್ಟು ಎತ್ತರವಿದ್ದರೂ ಒಂದು ಬೆಂಕಿ ಕಿಡಿ ಬಿದ್ದರೂ ಸಾಕು ಹತ್ತಿಯ ರಾಶಿಯೆಲ್ಲ ಸುಟ್ಟು ಭಸ್ಮವಾಗುವುದು. ಧ್ಯಾನದಲ್ಲಿ ಭಾರಿ ಸಾಮರ್ಥ್ಯವಿದೆ. ದೇವರ ಗುಣಗಳನ್ನು ಚಿಂತನೆ ಮಾಡುವುದೂ ಧ್ಯಾನವೇ. ಶಾಸ್ತ್ರವನ್ನು ಸ್ವಾಧ್ಯಾಯ ಮಾಡುವಾಗ ತತ್ತ್ವ ಚಿಂತನೆ ಮಾಡುವುದೂ ಧ್ಯಾನವೇ.*

---

*ಶಾಸ್ತ್ರದ ನಾಲ್ಕು ವಚನಗಳನ್ನು ಮನಸಾರೆ ಕೇಳುವಂಥವನು ಭವ್ಯನೆನಿಸುವನು. ಇಂಥವನು ಭವಿಷ್ಯದಲ್ಲಿ ಸಂಸಾರದಿಂದ ಮುಕ್ತನಾಗುವ ಪಾತ್ರತೆ ಪಡೆಯುವನು. ಥರ್ಮಾಮೀಟರ್ ಹಚ್ಚಿದಾಗ ಜ್ವರ ಎಷ್ಟಿದೆಯೆಂದು ಹೇಗೆ ತಿಳಿಯಬಹುದೋ ಹಾಗೆಯೇ ವೀತರಾಗ ಭಗವಂತನ ವಾಣಿಯಲ್ಲಿ ಎಷ್ಟು ಶ್ರದ್ಧೆಯುಳ್ಳವನು ಎಂಬುದರಿಂದ ಭವ್ಯತೆ ನಿರ್ಣಯವಾಗುತ್ತದೆ. ಭವ್ಯತೆಗೆ ಅನುಗುಣವಾಗಿ ಮೋಕ್ಷವೂ ಹತ್ತಿರವಾಗುತ್ತದೆ.*



-೧೦-

## ದರ್ಪಣವು ಭೇದಜ್ಞಾನ ಮಾಡಿಸುತ್ತದೆ

ಮಹಾನುಭಾವರೇ ! ಈಗ ತಾವೆಲ್ಲರೂ ಭಜನೆ ಕೇಳಿದಿರಿ. ಅದರಲ್ಲಿ ದರ್ಪಣದ ದೃಷ್ಟಾಂತ ಕೊಡಲಾಗಿದೆ. ಪ್ರಾಯಶಃ ಪ್ರತಿಯೊಂದು ಧರ್ಮಗ್ರಂಥದಲ್ಲಿ, ಶಾಸ್ತ್ರದಲ್ಲಿ ದರ್ಪಣದ ದೃಷ್ಟಾಂತಗಳನ್ನು ಕೊಡಲಾಗುತ್ತದೆ. ದರ್ಪಣದ ದೃಷ್ಟಾಂತ ಕೊಡಲ್ಪಡದ ಯಾವುದೇ ಶಾಸ್ತ್ರವಿರಲಿಕ್ಕಿಲ್ಲ. ಅಷ್ಟಪ್ರಾತಿಹಾರ್ಯಗಳಲ್ಲಿ ಕೂಡಾ ದರ್ಪಣವು ಸಮ್ಮಿಲಿತವಾಗಿದೆ. ದರ್ಪಣವು ಬೋಧ/ಪ್ರಬೋಧ ಚಿಹ್ನೆಯಾಗಿದೆ. ಇದರಲ್ಲಿ ಅನೇಕ ವಿಷಯಗಳ ತಿಳುವಳಿಕೆ ಸಿಗುತ್ತದೆ. ದರ್ಪಣವು ನಿರ್ಮಲವಾದುದು. ಹಾಗೆ ನಿರ್ಮಲವಾಗಿದ್ದಾಗಲೇ ಅದರಲ್ಲಿ ಪದಾರ್ಥಗಳು ಪ್ರತಿಬಿಂಬಿಸುತ್ತವೆ. ಒಂದು ವೇಳೆ ದರ್ಪಣವು ಮಲಿನವಾಯಿತೆಂದಾದರೆ ಅಥವಾ ಅದರ ಮೇಲೆ ಧೂಳು ಕೂತಿದೆಯೆಂದಾದರೆ, ಅದರಲ್ಲಿ ವಸ್ತು ಸ್ವರೂಪ ಕಾಣಿಸಲಾರದು ಹಾಗೂ ಬೇರೆ ಯಾವ ಪದಾರ್ಥವೂ ಕಾಣಿಸಲಾರದು. ಇದೇ ರೀತಿ ನಮ್ಮ ಮನಸ್ಸು ಮಲಿನವಾಯಿತೆಂದಾದರೆ ಆತ್ಮದರ್ಶನ ಆಗುವಂತಿಲ್ಲ.

ದರ್ಪಣವನ್ನು 'ಆದರ್ಶ' ಎಂದು ಕೂಡಾ ಕರೆಯುತ್ತಾರೆ. ದರ್ಪಣದ ಶಾಬ್ದಿಕ ಅರ್ಥವಾದರೋ ಹೀಗಿದೆ;- ದರ್ಪ+ಣ, ಎಂದರೆ ಯಾವುದನ್ನು ನೋಡಿ ದರ್ಪ ಅರ್ಥಾತ್ ಮಾನಕಷಾಯ ಜಾಗೃತವಾಗುವುದಿಲ್ಲವೋ ಅಂತಹ ದರ್ಪಣವೇ ತೀರ್ಥಂಕರರು. ಸಂಸಾರಿ ಆತ್ಮನು ಅರ್ಥಾತ್ ಸಾಮಾನ್ಯ ಮಾನವನು ದರ್ಪಣ ಹಿಡಿದಾಗ ಅವನಲ್ಲಿ ಮಾನಕಷಾಯ ಉತ್ಪನ್ನವಾಗುತ್ತದೆ. ಅವನು ದರ್ಪಣದಲ್ಲಿ (ಕನ್ನಡಿಯಲ್ಲಿ) ತನ್ನನ್ನು ನೋಡಿಕೊಂಡು "ಆಹಾ ನಾನು ಎಷ್ಟೊಂದು ಸುಂದರನಾಗಿದ್ದೇನೆ !" ಎಂದು ಹೇಳುತ್ತಾನೆ. ಅವನು ತನ್ನ ಬಾಹ್ಯ ಸೌಂದರ್ಯದಲ್ಲಿ ಮಗ್ನನಾಗುತ್ತಾನೆ. ಅವನು ನೋಡುವುದು ಬೇರೆ ಏನನ್ನೂ ಅಲ್ಲ, ಕೇವಲ ತನ್ನ ಚರ್ಮ, ಎಲುಬು ಮಾತ್ರ. ಅದರಲ್ಲಿ ಅವನು ಮಗ್ನನಾಗಿ 'ಆಹಾ! ನನ್ನ ಚರ್ಮ ಎಷ್ಟೊಂದು ಸುಂದರ ! ನನ್ನ ಕೂದಲು ಎಷ್ಟೊಂದು ಆಕರ್ಷಕ' ಎಂದು ತನ್ನ ಶರೀರವನ್ನು ಹೊಗಳಿಕೊಳ್ಳುತ್ತಾನೆ. ವಾಸ್ತವವಾಗಿ ಅವನ ಮನೋವೃತ್ತಿ ಹೇಗಿರಬಹುದೆಂದು ತರ್ಕಿಸಿದಾಗ ಅವನೊಬ್ಬ ಸಮಗಾರ ವೃತ್ತಿಗೆ ಯೋಗ್ಯನಾಗಿರಬಹುದೆಂದು ಊಹಿಸಬಹುದಾಗಿದೆ. ಆಚಾರ್ಯ ಸಮಂತಭದ್ರರು ಒಂದು ಕಡೆ ವೀತರಾಗ ಭಗವಾನ್ ದರ್ಪಣದಂತಿದ್ದಾರೆಂದು ಬರೆದಿದ್ದಾರೆ. ಅದು ಹೀಗಿದೆ;-

**ನ ಪೂಜಯಾರ್ಥಸ್ತ್ವಯಿ ವೀತರಾಗೇ, ನ ನಿಂದಯಾ ನಾಥ ವಿವಾಂತವೈರೇ ।**
**ತಥಾಪಿ ತೇ ಪುಣ್ಯಗುಣ ಸ್ಮೃತಿನಃ ಪುನಾತಿ ಚಿತ್ತಂ ದುರಿತಾಂಜನೇಭ್ಯಃ ॥**

ದರ್ಪಣದ ಮುಂದೆ ಯಾವುದೇ ವಸ್ತುವಿದ್ದರೂ ಅದು ಆ ದರ್ಪಣದಲ್ಲಿ ಹಾಗೆಯೇ ಕಾಣುತ್ತದೆ. ಮುಂದುಗಡೆ ಪರ್ವತವೇ ಇದ್ದರೂ ಕೂಡಾ ಅದರಲ್ಲಿ ಪರ್ವತವನ್ನು ಕಾಣ

ಬಹುದು, ಅಗ್ನಿ ಇದ್ದರೆ ದರ್ಪಣದಲ್ಲೂ ಅಗ್ನಿಯೇ ಕಾಣಿಸುವುದು. ಪರ್ವತದ ಭಾರ ದರ್ಪಣಕ್ಕೆ ತಾಗುವುದಿಲ್ಲ, ಆ ಭಾರದಿಂದ ದರ್ಪಣವೇನೂ ತುಂಡಾಗುವುದಿಲ್ಲ. ಹಾಗೆಯೇ ಅಗ್ನಿ ಕನ್ನಡಿಯೊಳಗೆ ಕಾಣಿಸಿಕೊಂಡರೂ ಕನ್ನಡಿಯೇನೂ ಬೆಂಕಿಯಿಂದ ಉರಿದು ಹೋಗುವುದಿಲ್ಲ. ಅಂತೆಯೇ ಸರೋವರದ ಪ್ರತಿಬಿಂಬ ಕನ್ನಡಿಯಲ್ಲಿ ಕಾಣಿಸಿಕೊಂಡರೂ ಕನ್ನಡಿಯೇನೂ ಒದ್ದೆಯಾಗಲಾರದು. ಇದೇ ರೀತಿ ಸಿದ್ಧಾಲಯದಲ್ಲಿ ವಿರಾಜಮಾನರಾದ ಸಿದ್ಧ ಭಗವಾನರ ಜ್ಞಾನದಲ್ಲಿ ಮೂರು ಲೋಕದ ಸಮಸ್ತ ಪದಾರ್ಥಗಳು/ದ್ರವ್ಯಗಳು ತಮ್ಮ ಗುಣಗಾನ ಪರ್ಯಾಯಗಳ ಸಹಿತ ಬೆಳಗುತ್ತವೆ. ಆದರೆ ಅವುಗಳಲ್ಲಿ ಯಾವುದೇ ವಿಕಾರ ಉತ್ಪನ್ನವಾಗುವುದಿಲ್ಲ.

ನೀವು ದರ್ಪಣದ ಮುಂದೆ ನಿಂತು ನಿಮ್ಮ ಮುಖವನ್ನು ವಕ್ರ ಮಾಡಿದರೆ, ವಿಕೃತಗೊಳಿಸಿದರೆ ದರ್ಪಣದಲ್ಲೂ ಅದೇ ವಕ್ರತೆ, ಅದೇ ವಿಕೃತಿ ಕಾಣಿಸುವುದಿಲ್ಲವೇ ? ಆದರೆ ಅದರಿಂದಾಗಿ ದರ್ಪಣ ವಕ್ರವಾಗದು, ವಿಕೃತವಾಗದು. ಹಾಗೆಯೇ ನೀವು ನಕ್ಕರೂ ದರ್ಪಣದಲ್ಲಿ ಅದು ಕಾಣಿಸುತ್ತದೆಯೇ ಹೊರತು ದರ್ಪಣ ನಗುವುದಿಲ್ಲ. ಇದೇ ರೀತಿ ನೀವು ಭಗವಾನರ ನಿಂದೆ ಮಾಡಿದರೆ ಭಗವಂತನಿಗೆ ಏನೇನೂ ತೊಂದರೆಯಾಗದು. ಅವರ ಮೇಲೆ ಅದು ಯಾವುದೇ ಪ್ರಭಾವವನ್ನೂ ಬೀರದು. ಬದಲಾಗಿ ಅದರ ಪ್ರಭಾವ ನಿಮ್ಮ ಆತ್ಮನ ಮೇಲೆಯೇ ಬೀಳುತ್ತದೆ. ಅದರಿಂದ ನಿಮ್ಮ ಆತ್ಮವೇ ಮಲಿನವಾಗುತ್ತದೆ. ನೀವು ಭಗವಂತನ ಪ್ರಶಂಸೆ ಮಾಡಿದರೆ, ಸ್ತುತಿ ಮಾಡಿದರೆ ಅವರು ಪ್ರಸನ್ನವಾಗುವುದಿಲ್ಲ. ದೇವರು ಸ್ತುತಿಯಿಂದ ಪ್ರಸನ್ನರಾಗುವುದೂ ಇಲ್ಲ, ನಿಂದೆಯಿಂದ ಬಾಧಿತರಾಗುವುದೂ ಇಲ್ಲ. ಆದುದರಿಂದಲೇ ಅವರನ್ನು ವೀತರಾಗಿ ಎಂದು ಹೇಳಲಾಗಿದೆ. ಅವರ ವೀತರಾಗ ಗುಣಗಳ ಸ್ತುತಿ ಮಾಡುವುದರಿಂದ ನಮ್ಮ ಮನಸ್ಸು ಮಾತ್ರ ನಿಶ್ಚಯವಾಗಿಯೂ ಶುದ್ಧವಾಗುತ್ತದೆ.

ನಮ್ಮಲ್ಲಿ ಬಹಳ ಜನರು ದೇವರ ಹತ್ತಿರ ''ನಮಗೆ ಮಕ್ಕಳನ್ನು ಕೊಡು'' ಎಂದು ಬೇಡುತ್ತಾರೆ. ಹಾಗೆ ಮಕ್ಕಳಾದ ಮೇಲೆ 'ಭಗವಂತನು ನನಗೆ ಮಗನನ್ನು ಕೊಟ್ಟ' ಎಂದು ಹೇಳುವುದುಂಟು. ಇನ್ನು ಕೆಲವರು ಒಂದು ವೇಳೆ ಆ ಮಗ ಸತ್ತುಹೋದರೆ 'ದೇವರು ನಮ್ಮಿಂದ ಮಗನನ್ನು ಕಿತ್ತುಕೊಂಡ' ಎಂದು ಹೇಳುತ್ತಾರೆ. ಭಗವಂತನನ್ನು ಬೇಡಿಕೊಳ್ಳುವುದರಿಂದಲೇ ಮಕ್ಕಳಾಗುವುದಾದರೆ ಈ ಪಶು-ಪಕ್ಷಿ, ನಾಯಿ-ಬೆಕ್ಕು, ಮಂಗ ಮುಂತಾದವು ಎಲ್ಲಿ ಯಾವಾಗ ಭಗವಂತನಲ್ಲಿ ಮಕ್ಕಳನ್ನು ಬೇಡಲು ಹೋಗಿದ್ದವು ? ತಾವು ಜೈನ ಧರ್ಮವನ್ನು ಅರ್ಥ ಮಾಡಿಕೊಳ್ಳಲೇ ಇಲ್ಲ. ಅಷ್ಟರಲ್ಲೇ ದೇವರೊಡನೆ ಬೇಡುವ ಮಾತನ್ನಾಡುತ್ತೀರಿ. ನಿಮಗೆ ಏನು ಸಿಗುವುದಾದರೂ ಅದು ನಿಮ್ಮ ಪುಣ್ಯ-ಪಾಪದ ಫಲದಿಂದ ಮಾತ್ರವೇ ದೊರಕಬಲ್ಲುದು. ದೀಪಾವಳಿ ದಿನಗಳಲ್ಲಿ ನೀವು ಲಕ್ಷ್ಮೀ ಪೂಜೆ ಮಾಡುತ್ತೀರಿ. ತಿಲಕವಿಡುತ್ತೀರಿ. ಕಬ್ಬಿಣದ ದುಡ್ಡಿನ ಪೆಟ್ಟಿಗೆ ತೆರೆಯುತ್ತೀರಿ. ಆದರೆ ಧನ-ಸಂಪತ್ತು ಕೇವಲ ಪುರುಷಾರ್ಥ ಮತ್ತು ಪುಣ್ಯದಿಂದ ಸಿಗುತ್ತದೆ, ಲಕ್ಷ್ಮೀ ಪೂಜೆಯಿಂದಲ್ಲ ಎಂಬುದನ್ನು ನೀವು



ತಿಳಿದಿರುವುದಿಲ್ಲ. ಒಂದು ವೇಳೆ ಲಕ್ಷ್ಮೀ ಪೂಜೆಯಿಂದಲೇ ಹಣ ಸಿಗುವುದೆಂದಾದರೆ ಲಕ್ಷ್ಮೀ ಪೂಜೆ ಮಾಡದ ಡಾಲರ್, ಯೆನ್, ಪೌಂಡ್ ಇತ್ಯಾದಿ ಹಣಗಳ ಚಲಾವಣೆಯನ್ನು ಹೊಂದಿದ ವಿದೇಶೀಯರು ಯಾರ ಪೂಜೆ ಮಾಡಲು ಹೋಗಿದ್ದರು ? ಧನ- ಸಂಪತ್ತು ಸಿಗುವುದು ಕೇವಲ ಪುಣ್ಯ ಮತ್ತು ಪುರುಷಾರ್ಥದಿಂದ. ಕತ್ತಲೆಯನ್ನು ನೋಡಲು ಯಾವುದಾದರೂ ದೀಪದ ಅವಶ್ಯಕತೆಯಿದೆಯೇ ? ಕತ್ತಲೆ ಸ್ವಯಂ ಕಾಣುವುದಾಗಿದೆ. ನಾವು ಎಂದಿಗೂ ಅಜ್ಞಾನ ಅಂಧಕಾರದಲ್ಲಿರಬಾರದು. ಆದ ಕಾರಣ ಧನಪ್ರಾಪ್ತಿಗಾಗಿ ಭಗವಂತನಲ್ಲಿ ಯಾಚನೆ ಮಾಡುವುದು, ಲಕ್ಷ್ಮಿಯ ಪೂಜೆ ಮಾಡುವುದು, ಇವೆಲ್ಲ ಕಾರ್ಯಕಾರಿಯಲ್ಲ ಎಂದು ಹೇಳಬೇಕಾಗಿದೆ. ಪುರುಷಾರ್ಥವೇ ಕಾರ್ಯಕಾರಿ.

ರೈತನು ಬಗ್ಗಿ ಭೂಮಿಯ ಮೇಲೆ ಬೀಜ ಬಿತ್ತುತ್ತಾನೆ. ಮೂರು-ನಾಲ್ಕು ತಿಂಗಳುಗಳಲ್ಲಿ ಆ ಬೀಜವು ತೆನೆಯನ್ನು ತುಂಬಿಕೊಂಡು ಪುರಸ್ಕಾರರೂಪದಲ್ಲಿ ಎದ್ದು ನಿಲ್ಲುತ್ತದೆ. ನೀವು ಬಗ್ಗಿ ಸ್ವಲ್ಪ ಬೀಜವನ್ನು ಭೂಮಿಯ ಮೇಲೆ ಬಿತ್ತಿದ್ದಿರಲ್ಲವೇ ? ಅದರ ಪುರಸ್ಕಾರ ರೂಪವಾಗಿಯೇ ಆ ಫಸಲು ಸಿದ್ಧವಾಗಿದೆ. ಒಬ್ಬ ವ್ಯಕ್ತಿ ಬಗ್ಗಿ ತೆಂಗಿನ ಸಸಿಯನ್ನು ನೆಡುತ್ತಾನೆಂದಾದರೆ ತೊಂಬತ್ತು ವರ್ಷಗಳ ತನಕ ಆ ಮರವು ತನ್ನ ತಲೆಯಮೇಲೆ ಸಿಯಾಳವನ್ನು ಹೇರಿಕೊಂಡು ಎದ್ದು ನಿಲ್ಲುತ್ತದೆ ಮತ್ತು ಅದು ಹೇಳುತ್ತದೆ- ''ನೀವು ಬಗ್ಗಿ ನಮಗೆ ನೀರು ಕುಡಿಸಿರಿ, ನಾನು ಇಡೀ ಜೀವಮಾನ ಪರ್ಯಂತ ನಿಮಗೆ ಜಲಪಾನ ಮಾಡಿಸುತ್ತೇನೆ.'' ಆದುದರಿಂದಲೇ ಅದನ್ನು ಕಲ್ಪವೃಕ್ಷ ಎಂದು ಹೇಳಲಾಗಿದೆ.

ಒಬ್ಬ ರಾಜ ಮುಖಂಡನಿಗೆ ಯಾವುದೋ ಕಾರಣಕ್ಕಾಗಿ ಆರು ತಿಂಗಳ ಜೈಲು ಶಿಕ್ಷೆ ವಿಧಿಸಲಾಯಿತು. ಜೈಲಿನಲ್ಲಿ ಅವನಿದ್ದ ಕೋಣೆಯ ಎದುರುಗಡೆಯ ಕೋಣೆಯಲ್ಲಿ ಒಬ್ಬ ಕೊಲೆಗಾರನಿದ್ದ, ಇವರಿಬ್ಬರಲ್ಲೂ ಪರಿಚಯ ಬೆಳೆಯಿತು. ರಾಜ ಮುಖಂಡನಿಗೆ ಜೈಲಿನಲ್ಲಿ ಕೂಡಾ ಅನೇಕ ಹೆಚ್ಚಿನ ಸವಲತ್ತು ಸಿಗುತ್ತಿತ್ತು. ಅವನು ಏನಾದರೂ ಹಣ್ಣುಗಳನ್ನೋ, ತಿಂಡಿ-ತಿನುಸುಗಳನ್ನೋ ತಾನು ತಿನ್ನುವಾಗ ಆ ಕೊಲೆಗಾರನಿಗೂ ಕೊಡುತ್ತಿದ್ದ. ಈ ರೀತಿಯಾಗಿ ಆರು ತಿಂಗಳು ಕಳೆದುಹೋಯಿತು. ರಾಜಮುಖಂಡನ ಸೆರೆಮನೆಯ ಅವಧಿ ಮುಗಿಯುತ್ತ ಬಂತು. ಆಗ ಈ ಕೊಲೆಗಾರ ಖೈದಿ ದುಃಖಿಕ್ಕೊಳಗಾದ. ಅವನು ಈ ರಾಜ ಮುಖಂಡನೊಡನೆ ಹೇಳಿದ. ''ಅಯ್ಯಾ, ನಮ್ಮಿಬ್ಬರಿಗೂ ಪರಿಚಯವಾದಂದಿನಿಂದ ಇಷ್ಟರ ತನಕ ತುಂಬಾ ಚೆನ್ನಾಗಿ ದಿನ ಕಳೆದೆವು. ಈಗ ನೀವು ನನ್ನನ್ನು ಬಿಟ್ಟು ಹೋಗುತ್ತಿದ್ದೀರಿ. ಹೋಗುವಾಗ ನೀವು ನಮ್ಮ ಸ್ನೇಹದ ದ್ಯೋತಕವಾಗಿ ಏನಾದರೂ ಕೊಟ್ಟು ಹೋಗಿ.'' ಅದಕ್ಕೆ ರಾಜ ಮುಖಂಡನು ''ನೀವು ಅದಕ್ಕಾಗಿ ನನ್ನಿಂದ ಯಾವ ವಸ್ತುವನ್ನು ಬಯಸುತ್ತೀರಿ ?'' ಎಂದು ಕೇಳಿದ. ಆಗ ಕೊಲೆಗಾರ ''ಸ್ವಾಮೀ, ನೀವು ನಿಮ್ಮ ರೂಪವನ್ನು ಪ್ರತಿದಿನವೂ ಯಾವುದರಲ್ಲಿ ನೋಡುತ್ತಿದ್ದಿರೋ ಆ ದರ್ಪಣವನ್ನು ಕೊಡಿ'' ಎಂದನು. ಕೊಲೆ ಅಪರಾಧಿಯಾದ ಕಾರಣ ಅಂತಹ ಖೈದಿಗಳಿಗೆ ಯಾವುದೇ ಸವಲತ್ತು ನೀಡುವ ಅವಕಾಶ ಅಲ್ಲಿ ಇಲ್ಲದುದರಿಂದ ಇವನು ಕೆಲವು ವರ್ಷಗಳಿಂದ ತನ್ನ ರೂಪವನ್ನು ದರ್ಪಣ

ದಲ್ಲಿ ನೋಡಿರಲಿಲ್ಲ, ಕೂಡಲೇ ರಾಜಮುಖಂಡ ಖೈದಿಯು ತನ್ನಲ್ಲಿದ್ದ ದರ್ಪಣವನ್ನು ಅವನಿಗೆ ಕೊಟ್ಟುಬಿಟ್ಟನು.

ಫ್ರೇಮ್(ಚೌಕಟ್ಟು) ಇಲ್ಲದ ದರ್ಪಣವು ಕೇವಲ ದರ್ಪಣದ ಒಂದು ತುಂಡಾಗಿತ್ತು. ರಾಜ ಮುಖಂಡನು ಹೋದಮೇಲೆ ಕೊಲೆಗಾರ ಏಕಾಂತದಲ್ಲಿ ದರ್ಪಣವನ್ನು ನೋಡಿದ. ಇದೇನು ಈ ದರ್ಪಣದಲ್ಲಿ ಏನೂ ಕಾಣಿಸುವುದಿಲ್ಲವಲ್ಲಾ! ದರ್ಪಣದ ಒಂದು ಭಾಗದಲ್ಲಿ ಕೆಂಪು ಬಣ್ಣ ಸವರಿತ್ತು. ಆದರ ಮೂಲಕ ನೋಡಿದರೆ ಮುಖ ಕಾಣಿಸುವುದು ಹೇಗೆ ? ಖೈದಿಗೆ ಸಿಟ್ಟು ಬಂತು. ಕೊಡಲು ಇಷ್ಟವಿಲ್ಲವೆಂದಾದರೆ ಕೊಡದೆ ಇರಬಹುದಾಗಿತ್ತು. ದರ್ಪಣವನ್ನು ಕೊಡುವಾಗಲಾದರೂ ಹಾಗೆಯೇ ಕೊಡಬಹುದಿತ್ತಲ್ಲಾ? ಈ ಬಣ್ಣ ಹಚ್ಚಿ ಹಾಳು ಮಾಡಿ ಏಕೆ ಕೊಡಬೇಕಾಗಿತ್ತು ?' ಎಂದು ಗುಡುಗಿದನು. ಹೀಗೆ ಯೋಚಿಸಿದ ಅವನು ಒಂದು ಚಿಂದಿ ಬಟ್ಟೆಯಿಂದ ಬಣ್ಣವನ್ನು ಅಳಿಸಿ ಹಾಕಿದ ಈಗ ಅದೇನೋ ನಿರ್ಮಲವಾಯಿತು. ಅದು ಬಣ್ಣವಿಹೀನವಾಯಿತೇ ಹೊರತು ಅದರಲ್ಲಿ ನೋಡಿದಾಗ ರೂಪ ಕಾಣಲಿಲ್ಲ. ಮೂರು-ನಾಲ್ಕು ದಿನಗಳ ಬಳಿಕ ಅಲ್ಲಿಗೆ ಹಿಂದೊಮ್ಮೆ ಜೈಲು ವಾಸವನ್ನು ಮುಗಿಸಿ ಹೋಗಿದ್ದ ರಾಜಮುಖಂಡನು ತನ್ನ ಉಳಿದ ಸಾಮಾನುಗಳನ್ನು ತೆಗೆದುಕೊಂಡು ಹೋಗಲು ಅದೇ ಜೈಲಿಗೆ ಬಂದಿದ್ದ. ಅವನಿಗೆ ಆ ಖೈದಿಯನ್ನು ನೋಡಬೇಕೆಂಬ ಮನಸ್ಸುಂಟಾಗಿ ಅವನು ಜೈಲರ್‌ನಿಂದ ಪರವಾನಗಿ ಪಡೆದು ಸ್ನೇಹಿತನಾಗಿದ್ದ ಖೈದಿಯ ಬಳಿಗೆ ಬಂದು ಕ್ಷೇಮ ವಿಚಾರಿಸಿದ. ಇವನಿಗಾದರೂ ರಾಜ ಮುಖಂಡನ ಮೇಲೆ ತುಂಬಾ ಕೋಪ ಬಂದಿತ್ತು. ಹೇಳಿದ ''ನೀನು ನನಗೆ ಬಣ್ಣಹಚ್ಚಿ ಕನ್ನಡಿ ಕೊಟ್ಟೆ, ಹಾಗೆ ಮಾಡಬಹುದೇ?'' ರಾಜ ಮುಖಂಡನಿಗೆ ಇದು ಸರಿಯಾಗಿ ಅರ್ಥವಾಗಲಿಲ್ಲ, ಅಯ್ಯಾ, ನಾನು ಬಣ್ಣ ಹಚ್ಚಿಕೊಟ್ಟೆನೇ? ನಿನ್ನ ಮಾತು ಅರ್ಥವಾಗಲಿಲ್ಲ. ನೋಡೋಣ, ಆ ದರ್ಪಣವನ್ನು ಇಲ್ಲಿ ತಂದು ಕೊಂಡು ನಾನು ನೋಡುತ್ತೇನೆ' ಎಂದ. ಖೈದಿ ದರ್ಪಣವನ್ನು ತಂದು ಕೊಟ್ಟ. ಅದನ್ನು ನೋಡಿ ರಾಜಮುಖಂಡನಿಗೆ ಆಶ್ಚರ್ಯವೇ ಆಶ್ಚರ್ಯ. ಅವನ ಯೋಚನೆಯ ದಿಕ್ಕೇ ಬದಲಾಯಿತು. ಅವನು ಮನಸ್ಸಿನಲ್ಲಿಯೇ ಹೀಗೆಂದುಕೊಂಡ - ಇದೊಂದು ದೊಡ್ಡ ಚಮತ್ಕಾರ, ಬಣ್ಣ ಹಚ್ಚಿದಾಗ ಏನೂ ಕಾಣಿಸಲಿಲ್ಲ, ಬಣ್ಣವನ್ನು ಅಳಿಸಿ ತೆಗೆದಾಗ ಸುತ್ತಲೂ ಕಾಣಿಸುತ್ತದೆ. ಏನಾಶ್ಚರ್ಯವಿದು ?'' ಹೀಗೆ ಹೇಳಿಕೊಳ್ಳುತ್ತಿದ್ದ ಅವನಿಗೆ ಆಧ್ಯಾತ್ಮಿಕ ಜ್ಞಾನ ಲಭಿಸಿತು. ಅವನ ಅಂತರಂಗ ಹೀಗೆ ಹೇಳಿತು- ಆತ್ಮನ ಮೇಲೆ ಕರ್ಮಗಳ ಕತ್ತಲಿನಿಂದ ಆವರಣ ಉಂಟಾಗುತ್ತದೆ. ಈ ಕಾರಣದಿಂದ ನಮಗೆ ಜ್ಞಾನ ಸಿಗಲಿಲ್ಲ. ಕರ್ಮಗಳ ಆವರಣ, ಕತ್ತಲು ಅಳಿದುಹೋಗುವುದರಿಂದ ಆಚೆ ಈಚೆ ದಡಗಳು ಸ್ಪಷ್ಟವಾಗಿ ಕಾಣಿಸುತ್ತವೆ. ಆಗಲೇ ಜ್ಞಾನದ ಪ್ರಕಾಶ ಉಂಟಾಗುತ್ತದೆ. ಭಗವಂತನು ತಪಶ್ಚರ್ಯೆಯ ಮೂಲಕ ಆ ಕರ್ಮಗಳ ಆವರಣವನ್ನು ಕಳಚಿಹಾಕಿದನು. ಅವನ ಚಿತ್ತವು ಕಂಚಿನಂತೆ ನಿರ್ಮಲವಾಯಿತು, ಸ್ವಚ್ಛವಾಯಿತು. ಆದರಿಂದ ಮೂರು ಲೋಕಗಳ ಸಮಸ್ತ ಪದಾರ್ಥಗಳು, ಸಮಸ್ತ ದ್ರವ್ಯಗಳು ತಮ್ಮ ಗುಣ ಪರ್ಯಾಯಗಳ ಸಹಿತ ಆದರಲ್ಲಿ ಹೊಳೆಯಲು ತೊಡಗಿವೆ. ಇಂದು ನನಗೆ



ನಿಜವಾದ ಬೋಧೆಯುಂಟಾಯಿತು.''

ತಜ್ಜಯತಿ ಪರಂ ಜ್ಯೋತಿಃ ಸಮಂ ಸಮಸ್ತೈರನಂತಪರ್ಯಾಯೈಃ ।
ದರ್ಪಣಾತಲ ಇವ ಸಕಲಾ ಪ್ರತಿಫಲತಿ ಪದಾರ್ಥಮಾಲಿಕಾ ಯತ್ರ ॥

ಹೇಗೆ ದರ್ಪಣದ ಮುಂದೆ ಇಟ್ಟ ಎಲ್ಲಾ ವಸ್ತುಗಳೂ ಕಾಣಿಸುತ್ತವೋ ಹಾಗೆಯೇ ಭಗವಂತನ ಜ್ಞಾನದಲ್ಲಿ ಮೂರು ಲೋಕಗಳೂ, ಸರ್ವದ್ರವ್ಯಗಳೂ ತಮ್ಮ ಗುಣ ಪರ್ಯಾಯಗಳೊಂದಿಗೆ ಕಾಣಿಸಲ್ಪಡುತ್ತವೆ. ಆಚಾರ್ಯ ಸಮಂತಭದ್ರರು ಕೂಡಾ 'ಯದ್‌ವಿದ್ಯಾ ದರ್ಪಣಾಯತೇ' ಅರ್ಥಾತ್ ಭಗವಂತನ ಜ್ಞಾನವು ದರ್ಪಣದಂತಿರುತ್ತದೆ ಎಂದು ಹೇಳಿದ್ದಾರೆ. ಪ್ರಾಯಃ ಎಲ್ಲ ಆಚಾರ್ಯರೂ ದರ್ಪಣವನ್ನು ಮಾಂಗಲಿಕ ದ್ರವ್ಯವೆಂದು ಮನ್ನಿಸಿದ್ದಾರೆ. ಪ್ರಾತಃಕಾಲ ಎದ್ದು ಎಲ್ಲಕ್ಕಿಂತ ಮೊದಲು ಕನ್ನಡಿಯಲ್ಲಿ ನೋಡಿ ಣಮೋಕಾರ ಮಂತ್ರವನ್ನು ಉಚ್ಚರಿಸುವುದಾದರೆ ಯಾವ ಶರೀರವು ದರ್ಪಣದಲ್ಲಿ ಕಾಣಿಸಿಕೊಳ್ಳುತ್ತದೋ ಅದು ಶಾಶ್ವತವಲ್ಲ, ಯಾವ ಆತ್ಮ ಅದನ್ನು ನೋಡುತ್ತದೋ ಹಾಗೂ ತಿಳಿಯುತ್ತದೋ ಅದು ಮಾತ್ರ ಶಾಶ್ವತ ಎಂಬ ಬೋಧೆಯುಂಟಾಗುತ್ತದೆ. ಯಾವ ಕೂದಲು ಮೊದಲು ಕಪ್ಪಾಗಿತ್ತೋ ಅದು ಈಗ ಬಿಳಿಯಾಗಿದೆ ಎಂಬುದನ್ನು ದರ್ಪಣ ತೋರಿಸುತ್ತದೆ. ದರ್ಪಣದ ದರ್ಶನವು ಭೇದಜ್ಞಾನವನ್ನು ಮಾಡಿಸಬಲ್ಲುದು. ದರ್ಪಣದಲ್ಲಿ ಕಾಣಿಸಲ್ಪಡುವ ಎಲುಬು, ಚರ್ಮ, ಕೂದಲು ಇತ್ಯಾದಿಗಳೆಲ್ಲ ಅಶಾಶ್ವತ. ಅವೆಲ್ಲ ನಮ್ಮ ಜೊತೆ ಬರುವವುಗಳಲ್ಲ, ಇವೆಲ್ಲವನ್ನೂ ನೋಡುವವನೂ, ತಿಳಿಯುವವನೂ, ಆತ್ಮನಾಗಿದ್ದಾನೆ. ಅವನು ಶಾಶ್ವತ. ದರ್ಪಣವೂ ಶಾಶ್ವತವಲ್ಲ, ಈ ಶರೀರವೂ ಶಾಶ್ವತವಲ್ಲ, ಈ ಒಂದು ಆತ್ಮ ಮಾತ್ರವೇ ಶಾಶ್ವತ-ಅಜರ-ಅಮರ. ಈ ಮಾತನ್ನೇ ಸಮಯಸಾರದಲ್ಲಿ ತಿಳಿಸಲಾಗಿದೆ.

ಆಚಾರ್ಯ ಅಮೃತಚಂದ್ರರು ಸಮಯಸಾರ ಕಲಶಗಳ ಮಾಧ್ಯಮದಿಂದ ಅಮೃತ ಧಾರೆಯನ್ನು ಸುರಿಸಿದ್ದಾರೆ. ಅದರ ಬಗ್ಗೆ ಹೀಗೊಂದು ಉಲ್ಲೇಖವಿದೆ. ಅಮೃತಚಂದ್ರರು ಯಾವಾಗ 'ಅಮೃತಕಲಶ ರಚನೆ ಮಾಡಲು ತೊಡಗಿದರೋ ಆಗ ಕೆಲವರು 'ತಾವು ಆತ್ಮ ಧ್ಯಾನವನ್ನು ತ್ಯಜಿಸಿ ಶಾಸ್ತ್ರ ರಚನೆ ಮಾಡಲು ಹೇಗೆ ತೊಡಗಿದಿರಿ ?'' ಎಂದು ಕೇಳಿದರಂತೆ. ಆಗ ಅವರು ಕೊಟ್ಟ ಉತ್ತರ ಹೀಗಿತ್ತು,

ಪರ ಪರಿಣತಿ ಹೇತೋರ್ಮೋಹನಾಮ್ನೋऽನುಭಾವಾ-
ದವಿರತಮನುಭಾವ್ಯವ್ಯಾಪ್ತಿ ಕಲ್ಮಾಷಿ ತಾಯಾಃ ।
ಮಮ ಪರಮವಿಶುದ್ಧಿಃ ಶುದ್ಧ ಚಿನ್ಮಾತ್ರ ಮೂರ್ತೇ-
ರ್ಭವತು ಸಮಯಸಾರ ವ್ಯಾಖ್ಯಾಯೈವಾನುಭೂತೇಃ ॥

ಈ ಶಾಸ್ತ್ರದಲ್ಲಿ ತಮ್ಮ ಶುದ್ಧಿಗಾಗಿ, ತಮ್ಮ ಕಲ್ಯಾಣಕ್ಕಾಗಿ ಏನು ಮಾಡಬೇಕೆಂಬುದನ್ನು ಬರೆಯುತ್ತಿದ್ದೇವೆ. ಕೇವಲ ನಮ್ಮ ಕಲ್ಯಾಣಕ್ಕಾಗಿ ಯೋಚನೆ ಮಾಡುವುದು ಸ್ವಾರ್ಥ ಪ್ರವೃತ್ತಿಯಾಗಬಹುದು. ಜೈನ ಧರ್ಮದಲ್ಲಿ ಸ್ವಯಂ ಕಲ್ಯಾಣ ಮಾಡಿಕೊಳ್ಳುವುದಕ್ಕೆ ಪ್ರಮುಖತೆ

ಕೊಡಲಾಗಿದೆ. ಯಾವನು ತನ್ನ ಕಲ್ಯಾಣವನ್ನು ಮಾಡಿಕೊಳ್ಳಲು ಅಶಕ್ತನೋ ಅವನು ಇತರರ ಕಲ್ಯಾಣಕ್ಕೆ ನಿಮಿತ್ತನಾಗಲು, ಆಧಾರಭೂತನಾಗಲು ಅಥವಾ ಸಹಾಯಕನಾಗಲು ಕೂಡಾ ಸಾಧ್ಯವಾಗಲಾರದು. ಸ್ವಯಂ ಈಜು ತಿಳಿಯದವನು ಇತರರಿಗೆ ಈಜು ಕಲಿಸುವುದಾದರೂ ಹೇಗೆ ? ಸ್ವಯಂ ಈಜಲು ತಿಳಿಯದವನು ನೀರಿಗಿಳಿದಾಗ ಮೊದಲು ತಾನೇ ಮುಳುಗಿಹೋಗುತ್ತಾನೆ ಮತ್ತು ಇತರರನ್ನೂ ಮುಳುಗಿಸುತ್ತಾನೆ. ಸ್ವತಃ ಓದದವನು ಬೇರೆಯವರಿಗೆ ಏನನ್ನು ಕಲಿಸಲು ಸಾಧ್ಯ ? ಆದ ಕಾರಣ ಮೊಟ್ಟಮೊದಲು ಸ್ವಯಂ ಕಲ್ಯಾಣ ಮಾಡಿಕೊಳ್ಳಿ, ಇದು ಜೈನಧರ್ಮದ ಆಧಾರಭೂತವಾಗಿದೆ. ಯಾವನು ಸ್ವಯಂ ಧರ್ಮವನ್ನು ಪಾಲಿಸುತ್ತಾನೋ ಅವನು ಮಾತ್ರವೇ ಇತರರಿಗೆ ಆದರ್ಶನಾಗಬಲ್ಲ. ಯಾವನು ಸ್ವತಃ ಧರ್ಮಪಾಲನೆ ಮಾಡಲಾರನೋ ಅವನು ಇತರರಿಗೆ ಧರ್ಮವನ್ನು ಕಲಿಸುವುದಾದರೂ ಹೇಗೆ ? ಅಂಥವನು ಬೇರೆಯವರಿಗೆ ಆದರ್ಶ ವ್ಯಕ್ತಿಯಾಗಲು ಹೇಗೆ ಸಾಧ್ಯ ?

ಒಬ್ಬ ಹುಡುಗನಿದ್ದ. ಅವನು ತುಂಬಾ ಬೆಲ್ಲ ತಿನ್ನುತ್ತಿದ್ದ. ಅವನಿಗೆ ಅದು ಹಾನಿಕಾರಕವಾಗಿತ್ತು. ಬೆಲ್ಲ ಹೆಚ್ಚು ತಿಂದುದರಿಂದ ಅವನಿಗೆ ಆಗಾಗ ಅಸೌಖ್ಯತೆ ಉಂಟಾಗುತ್ತಿತ್ತು. ಚಿಕಿತ್ಸಕರು ಅವನು ಬೆಲ್ಲ ತಿನ್ನಬಾರದೆಂದು ನಿಷೇಧ ಮಾಡಿದ್ದರು. ಆದರೆ ಅವನಂತೂ ಬೆಲ್ಲ ತಿನ್ನುವುದನ್ನು ನಿಲ್ಲಿಸಲೇ ಇಲ್ಲ. ಅವನ ತಾಯಿ-ತಂದೆಗೆ ಇದರಿಂದ ಬಹಳ ದುಃಖವಾಯಿತು. ಒಂದು ದಿನ ಆ ಹುಡುಗನನ್ನು ಕರೆದುಕೊಂಡು ಒಬ್ಬರು ಮಹಾತ್ಮರ ಬಳಿಗೆ ಹೋದರು ''ಮಹಾರಾಜ್, ಈ ಹುಡುಗ ತುಂಬಾ ಬೆಲ್ಲ ತಿನ್ನುತ್ತಾನೆ. ಅದರಿಂದ ಪ್ರತಿನಿತ್ಯ ಅವನು ಅಸೌಖ್ಯತೆಯಿಂದ ಬಳಲುತ್ತಿದ್ದಾನೆ. ತಾವು ಮಂತ್ರ ಮಾಡಿಯೋ ಅಥವಾ ಬೇರೆ ಯಾವುದೇ ಸೂತ್ರದಿಂದಾದರೂ ಅವನು ಬೆಲ್ಲ ತಿನ್ನದಂತೆ ಮಾಡಿ ನಮ್ಮನ್ನು ಉದ್ಧರಿಸಿ'' ಎಂದು ಬೇಡಿಕೊಂಡರು. ಆಗ ಆ ಮಹಾತ್ಮರು ''ಹದಿನೈದು ದಿನಗಳ ಬಳಿಕ ಈ ಬಾಲಕನನ್ನು ಕರೆದುಕೊಂಡು ಬನ್ನಿ'' ಎಂದು ಕಳುಹಿಸಿದರು. ಈ ಆಶ್ವಾಸನೆಯನ್ನು ಪಡೆದ ತಂದೆ-ತಾಯಿ ಬಾಲಕನನ್ನು ಕರೆದುಕೊಂಡು ಹೋಗಿ ಮತ್ತೆ ಹದಿನೈದು ದಿನಗಳ ಬಳಿಕ ಆ ಬಾಲಕನೊಂದಿಗೆ ಅಲ್ಲಿಗೆ ಬಂದರು. ಆಗ ಮಹಾತ್ಮಾಜೀ ಈ ಬಾಲಕನನ್ನು ಹತ್ತಿರ ಕರೆದು ಅವನ ಕಿವಿಯಲ್ಲಿ ಏನೋ ಹೇಳಿದರು. ಅನಂತರ ಈ ದಂಪತಿಗಳೊಡನೆ ''ನೀವು ಹೋಗಿ ಇನ್ನು ಮುಂದೆ ಅವನು ಬೆಲ್ಲ ತಿನ್ನಲಾರ'' ಎಂದರು. ಎಲ್ಲರೂ ಸಂತೋಷದಿಂದ ಹೊರಟು ಹೋದರು. ಮಹಾತ್ಮಾಜೀ ಹೇಳಿದಂತೆ ಅಂದಿನಿಂದ ಆ ಬಾಲಕ ಬೆಲ್ಲ ತಿನ್ನಲೇ ಇಲ್ಲ. ಅವನ ಆರೋಗ್ಯವೂ ಉತ್ತಮವಾಯಿತು. ತಂದೆ-ತಾಯಿಗೆ ಆದ ಆನಂದಕ್ಕೆ ಪಾರವೇ ಇಲ್ಲ. ಅವರು ಈ ಸಂತೋಷವನ್ನು ಮಹಾತ್ಮರಿಗೆ ತಿಳಿಸಲು ಅವರಿದ್ದಲ್ಲಿಗೆ ಹೋದರು. ಅಲ್ಲಿ ಅವರೊಡನೆ 'ಪೂಜ್ಯರೇ, ಈಗ ನಮ್ಮ ಮಗ ಬೆಲ್ಲ ತಿನ್ನುವುದೇ ಇಲ್ಲ. ಅವನ ಆರೋಗ್ಯವೂ ಸುಧಾರಿಸಿದೆ. ಅದಕ್ಕಾಗಿ ನಿಮಗೆ ನಾವು ತುಂಬಾ ಕೃತಜ್ಞರಾಗಿದ್ದೇವೆ. ಆದರೆ ತಾವು ಅವನಿಗೆ ಎಂತಹ ಮಂತ್ರವನ್ನು ಹೇಳಿದಿರಿ' ಎಂದರು. ಕೂಡಲೇ ಮಹಾತ್ಮಾಜೀ ''ನಾವು ಯಾವುದೇ ಮಂತ್ರವನ್ನೂ ಹೇಳಿಕೊಟ್ಟಿಲ್ಲ. ಆದರೆ ಹಿಂದೆ ನೀವು ಆ ಬಾಲಕ



ನೊಂದಿಗೆ ಬಂದಿದ್ದಾಗ ನಾವು ಸ್ವಯಂ ಬೆಲ್ಲ ತಿನ್ನುತ್ತಿದ್ದೆವು. ಆದ ಕಾರಣ ಉಪದೇಶ ಮಾಡಲಿಲ್ಲ. ಅನಂತರ ನಾವು ಬೆಲ್ಲ ತಿನ್ನುವುದನ್ನು ಬಿಟ್ಟುಬಿಟ್ಟೆವು. ಅನಂತರ ನೀವು ಮತ್ತೊಮ್ಮೆ ಬಂದಾಗ ಆ ಹುಡುಗನಿಗೆ ಬೆಲ್ಲ ತಿನ್ನಬಾರದು ಎಂದಷ್ಟೇ ಹೇಳಿದೆವು. ಆಗ ಅದು ಅವನ ಮೇಲೆ ಬಹಳ ಪ್ರಭಾವ ಬೀರಿತು'' ಎಂದರು.

ಯಾವನು ಸ್ವಂಯ ಪಾಲನೆ ಮಾಡುತ್ತಾನೋ ಆಗ ಅವನಿಗೆ ಹೇಳುವ ನೈತಿಕ ಹಕ್ಕು ಬರುತ್ತದೆ. ಹಾಗೆ ಆಚರಿಸಲು ಹೇಳಿದಾಗ ಅದರ ಪ್ರಭಾವ ಇತರರ ಮೇಲೆ ಬಲವಾಗಿ ಬೀಳುತ್ತದೆ. ಸಿಗರೇಟು ಸೇದುವ ತಂದೆಯು ಮಗನಿಗೆ 'ನೀನು ಸಿಗರೇಟು ಸೇದಬೇಡ' ಎಂದು ಹೇಳಿದಾಗ ಹೇಗಾದೀತು ? ಹುಡುಗ ಸ್ವಲ್ಪ ಧೈರ್ಯಶಾಲಿಯಾಗಿದ್ದರೆ ತಾವು ಸ್ವತಃ ಸಿಗರೇಟು ಸೇದುವುದಿಲ್ಲವೇ ? ಆದೇಕೆ?'' ಎಂದು ಪ್ರಶ್ನಿಸಬಹುದು. ಅದರಿಂದ ಏನನ್ನು ತಿಳಿಯಬಹುದೆಂದರೆ ಯಾವನು ಸ್ವಯಂ ಧರ್ಮವನ್ನು ಆಚರಿಸುತ್ತಾನೋ ಅವನು ಮಾತ್ರವೇ ಇತರರಿಗೆ ಉಪದೇಶ ಕೊಡಲು ಅರ್ಹನಾಗುತ್ತಾನೆ. ಮಾತ್ರವಲ್ಲ ಅದು ಪ್ರಭಾವಶಾಲಿಯೂ ಆಗಿರುತ್ತದೆ.

ನಮ್ಮ ಮನಸ್ಸು ಹಗಲು-ರಾತ್ರಿ ಆರ್ತ-ರೌದ್ರ ಧ್ಯಾನದಿಂದ ಮಲಿನವಾಗಿರುತ್ತದೆ. ಇದರಿಂದ ನಾವು ಹೇಗೆ ಪಾರಾಗಬಹುದೆಂದು ಎಂದಾದರೂ ಯೋಚಿಸಿದ್ದೀರೇನು ? ಇದರಿಂದ ಪಾರಾಗುವ ಉಪಾಯವಾದರೂ ಏನು ? ಅದಕ್ಕೆ ಉಪಾಯ ನಾವು ಹೇಳುತ್ತೇವೆ. ಆಧ್ಯಾತ್ಮಿಕ ಉಪದೇಶ, ತತ್ತ್ವಜ್ಞಾನ, ಸ್ವಾಧ್ಯಾಯ, ಸತ್ಸಂಗ, ದೇವದರ್ಶನ ಇವುಗಳಲ್ಲಿ ಎಷ್ಟು ದೀರ್ಘಕಾಲ ನೀವು ಮನಸ್ಸನ್ನು ತೊಡಗಿಸಿಕೊಳ್ಳುತ್ತೀರಿ ? ಕನಿಷ್ಠಪಕ್ಷ ಅಷ್ಟು ಕಾಲವಾದರೂ ನಿಮ್ಮ ಮನಸ್ಸನ್ನು ಮಲಿನವಾಗುವುದರಿಂದ ರಕ್ಷಣೆ ಪಡೆಯಬಹುದು. ಕಣ್ಣು ಮುಚ್ಚಿ ರೆಪ್ಪೆ ತೆರೆಯುವಷ್ಟರ ಮಟ್ಟಿನ ಕ್ಷಣಕಾಲವಾದರೂ ಒಬ್ಬನು ಧ್ಯಾನ ಮಾಡುತ್ತಾನೆಂದಾದರೆ ಆದರಿಂದ ಅಸಂಖ್ಯಾತ ಕರ್ಮಗಳ ನಿರ್ಜರೆಯುಂಟಾಗುತ್ತದೆ. ಒಬ್ಬ ವ್ಯಕ್ತಿ ಹತ್ತಿಯ ವ್ಯಾಪಾರ ಮಾಡುತ್ತಾನೆಂದು ಇಟ್ಟುಕೊಳ್ಳಿ. ಅವನು ವರ್ಷವಿಡೀ ಹತ್ತಿ ಸಂಗ್ರಹ ಮಾಡಿಡುತ್ತಾನೆ. ಅಕಸ್ಮಾತ್ ಒಂದು ಬೆಂಕಿ ಕಿಡಿ ಅದಕ್ಕೆ ಬಿತ್ತು ಎಂದಾದರೆ ಏನಾಗುತ್ತದೆ ? ಅಷ್ಟೊಂದು ದೀರ್ಘಕಾಲದಿಂದ ಶ್ರಮವಹಿಸಿ ಕೂಡಿಟ್ಟ ಆ ಹತ್ತಿ ಒಂದು ಕ್ಷಣದಲ್ಲಿ ಉರಿದು ಬೂದಿಯಾಗುತ್ತದೆ. ಅದೇ ರೀತಿ ಜೀವನವಿಡೀ ಏಕತ್ರಗೊಳಿಸಿದ ಕರ್ಮವು ಕೂಡಾ ಸ್ವಲ್ಪ ಹೊತ್ತಿನ ಧ್ಯಾನದಿಂದ, ಅಲ್ಪ ಕಾಲದ ಏಕಾಗ್ರತೆಯಿಂದ ಭಸ್ಮವಾಗಿ ಬಿಡುತ್ತದೆ, ನಷ್ಟವಾಗಿ ಬಿಡುತ್ತದೆ.

'ಧ್ಯಾನಾಗ್ನಿ ಸರ್ವ ಕರ್ಮಾಣಿ ಭಸ್ಮಸಾತ್ ಕುರುತೇ ಕ್ಷಣಾತ್''

ಕರ್ಮಗಳು ಎರಡು ಪ್ರಕಾರವಾಗಿರುತ್ತವೆ. ನಿಕಾಚಿತ ಮತ್ತು ಅನಿಕಾಚಿತ. ಯಾವ ಕರ್ಮಗಳನ್ನು ಭೋಗಿಸಲೇ ಬೇಕಾಗುತ್ತದೋ ಮತ್ತು ಯಾವ ಕರ್ಮಗಳು ಫಲವನ್ನು ಕೊಡದೆ ನಷ್ಟವಾಗುತ್ತವೋ, ಅವುಗಳನ್ನು ನಿಕಾಚಿತ ಕರ್ಮಗಳೆನ್ನುತ್ತಾರೆ. ಯಾವ ಕರ್ಮಗಳು

ಫಲಗಳನ್ನು ಕೊಡದೆ ತಪಸ್ಯಾ ಇತ್ಯಾದಿಗಳಿಂದ ನಷ್ಟವಾಗುತ್ತವೋ ಅವುಗಳು ಅನಿಕಾಚಿತ ಕರ್ಮಗಳೆಂದು ಕರೆಯಲ್ಪಡುತ್ತದೆ. ಇದಕ್ಕೊಂದು ಉದಾಹರಣೆ ಕೊಡುವುದಾದರೆ- ಒಂದು ಬಟ್ಟೆ ಇದೆ. ಅದಕ್ಕೆ ಆಕಸ್ಮಾತ್ ಬೆಂಕಿ ತಗಲಿತು ಎಂದಾದರೆ ಅದು ಬೇಗನೆ ನಂದುವುದಿಲ್ಲ, ಬೆಂಕಿಯು ಬಟ್ಟೆಯನ್ನು ಬಿಟ್ಟು ಹೋಗುವುದಿಲ್ಲ, ಆದರೆ ಬಟ್ಟೆಗೆ ಧೂಳು ತಗುಲಿದರೆ ಸ್ವಲ್ಪ ಹೊಡೆದರೆ ಸಾಕು ಆ ಧೂಳು ಹೋಗಿಬಿಡುತ್ತದೆ. ಒಂದು ಮರದ ಮೇಲೆ ಸಾವಿರಾರು ಪಕ್ಷಿಗಳು ಕುಳಿತಿರಬಹುದು, ಅವುಗಳಿಗೆ ಒಂದು ಕಲ್ಲು ಎಸೆದರೆ ಸಾಕು, ಅಲ್ಲಿ ಕುಳಿತಿರುವ ಎಲ್ಲ ಪಕ್ಷಿಗಳೂ ಒಮ್ಮೆಲ್ಲೇ ಓಡಿಬಿಡುತ್ತವೆ. ಇದೇ ರೀತಿ ಒಮ್ಮೆ ಮನ-ವಚನ-ಕಾಯದ ಏಕಾಗ್ರತೆಯಿಂದ ಣಮೋಕಾರ ಮಂತ್ರವನ್ನು ಹೇಳುವುದರಿಂದ ಸಾವಿರಾರು ಕರ್ಮಗಳು ನಷ್ಟ ಹೊಂದುತ್ತವೆ.

ಮರದ ಮೇಲೆ ಕುಳಿತ ಮಂಗನಿಗೆ ಒಂದು ಕಲ್ಲನ್ನೆಸೆದು ಓಡಿಸಲು ನೋಡಿದರೆ ಆ ಮಂಗವು ಓಡುವುದಿಲ್ಲ, ಅದು ಏನು ಮಾಡುತ್ತದೆ ? ಹಲ್ಲು ಕಿರಿದು ತೋರಿಸುತ್ತಾ ಘುರ್ ಘುರ್ ಎಂದು ಶಬ್ದ ಮಾಡುತ್ತಾ ನಿಮ್ಮನ್ನೇ ಹೆದರಿಸಿ ಓಡಿಸುವುದು. ಸ್ವಯಂ ಓಡುವುದೇ ಇಲ್ಲ, ಇದೇ ರೀತಿ ನಿಕಾಚಿತ ಕರ್ಮವು ದಾನ, ತೀರ್ಥಯಾತ್ರೆ, ಜಪ-ತಪ, ಪೂಜೆ ಇತ್ಯಾದಿ ಏನನ್ನೂ ಮಾಡಲು ಬಿಡುವುದಿಲ್ಲ, ಜಪ ಮಾಡಲು ಕುಳಿತಾಗ ಮನಸ್ಸು ಹೇಳುತ್ತದೆ 'ಏಳು-ನಡೆ-ಓಡು' ಎಂದು. ಈ ಮನಸ್ಸೆಂಬುದು ಬಹಳ ಚಂಚಲವಾದುದು, ಅಸ್ಥಿರವಾದುದು. ಜಪ-ತಪ-ಪೂಜೆಗಳಲ್ಲಿ ಮನಸ್ಸು ತೊಡಗಿಸಿಕೊಳ್ಳದೆ ಇದ್ದಾಗ ಈ ನಿಕಾಚಿತ ಕರ್ಮವೇ ಬಾಧಕವಾಗುತ್ತದೆ. ಮಂಗವು ಬಹಳ ಚಂಚಲ ಸ್ವಭಾವದ್ದಾಗಿರುತ್ತದೆ. ಹಾಗೆಯೇ ಈ ಮನಸ್ಸು ಕೂಡಾ ಬಹಳ ಚಂಚಲವಾದುದು. ಅನಿಕಾಚಿತ ಕರ್ಮವಾದರೋ ಪಕ್ಷಿಗಳಂತೆ ಓಡಿಹೋಗಿಬಿಡುತ್ತದೆ, ಹಾರಿಹೋಗಿಬಿಡುತ್ತದೆ.

ಪುರಾ ಗರ್ಭಾದಿಂದ್ರೋ ಮುಕುಲಿತಕರಃ ಕಿಂಕರ ಇವ ।
ಸ್ವಯಂ ಸ್ರಷ್ಟಾಸ್ರಷ್ಟೇಃ ಪತಿರಥ ನಿಧೀನಾಂ ನಿಜಸುತಃ ।
ಕ್ಷುಧಿತ್ವಾ ಷಣ್ಮಾಸಾನ್ ಸ ಕಿಲ ಪುರುರಪ್ಯಾಟ ಜಗತೀಂ ।
ಮಹೋ ಕೇನಾಪ್ಯಸ್ಮಿನ್ ವಿಲಸಿತಮಲಂಘ್ಯಂ ಹತವಿಧೇಃ ॥

ಕರ್ಮದ ಗತಿ ವಿಚಿತ್ರವಾದುದು. ಯಾರ ಜನನಕ್ಕಿಂತ ಮೊದಲೇ ರತ್ನಗಳ ಮಳೆ ಸುರಿಯಿತೋ ಯಾರ ಜನ್ಮದ ಸಮಯದಲ್ಲಿ ಮೊಟ್ಟಮೊದಲು ಆ ಮಹಾತ್ಮನ ದರ್ಶನ ಮಾಡುವವನು ನಾನು ಮಾತ್ರ ಎಂದು ಇಂದ್ರನು ಬಾಗಿಲಲ್ಲಿ ಚೌಕೀದಾರನಾಗಿ ನಿಂತಿದ್ದನೋ, ಜನ್ಮ ತಾಳಿದ ಮೇಲೆ ದೇವತೆಗಳೆಲ್ಲಾ ಸೇರಿ ಯಾರ ಅಭಿಷೇಕ ಮಾಡಿದರೋ, ದೊಡ್ಡವರಾದ ಮೇಲೆ ಪ್ರಜೆಗಳಿಗೆ ಬದುಕಲು ಬೇಕಾದ ಸಾಧನೆ ಹಾಗೂ ಜೀವನೋಪಾಯವನ್ನು ಯಾರು ಹೇಳಿದರೋ, ಅಸಿ-ಮಸಿ-ಕೃಷಿ-ಶಿಲ್ಪ-ವಾಣಿಜ್ಯ ಮತ್ತು ವ್ಯಾಪಾರದ ಶಿಕ್ಷಣವನ್ನು ಯಾರು ನೀಡಿದರೋ ಅವರನ್ನು ಪ್ರಜೆಗಳು 'ವಿಧಾತಾ' ಎಂದರು.



ಅಂಥವರು ದೀಕ್ಷಾಗ್ರಹಣ ಮಾಡಿದ ಬಳಿಕ ನಿಕಾಚಿತ ಕರ್ಮಗಳ ಕಾರಣದಿಂದ ಅವರಿಗೆ ರೊಟ್ಟಿ (ಆಹಾರ) ಸಿಗಲಿಲ್ಲ, ಯಾರ ಪುತ್ರನು ಚಕ್ರವರ್ತಿಯೂ, ನವನಿಧಿಗಳ ಅಧಿಪತಿಯೂ, ಷಟ್ಖಂಡಗಳ ವಿಜೇತನೂ ಆಗಿರುವನೋ, ಯಾವನು ಸ್ವಯಂ ತೀರ್ಥಂಕರನಾಗಿರುವನೋ ಅಂತಹ ಪುಣ್ಯಶಾಲಿ ತೀರ್ಥಂಕರ ಪ್ರಕೃತಿಗಿಂತ ದೊಡ್ಡ ಪುಣ್ಯ ಯಾವುದಿದೆ ? ಅಂತಹ ತೀರ್ಥಂಕರರನ್ನು ಕೂಡಾ ಆರು ತಿಂಗಳವರೆಗೆ ಅಂತರಾಯ ಕರ್ಮವು ಸತಾಯಿಸಿತು, ಆರು ತಿಂಗಳು ಆಹಾರವೇ ಸಿಗಲಿಲ್ಲ, ಇಂತಹ ಪರಿಸ್ಥಿತಿಯಲ್ಲಿ ನೀವಾದರೋ ಹೇಗಿರಬಲ್ಲಿರಿ ? ನಿಮಗೆ ಅರ್ಧ ಗಂಟೆ ಆಹಾರ ಸಿಗುವುದು ತಡವಾದರೆ ಸಾಕು ಪತ್ನಿಯ ಮೇಲೆ ಮನೆಯವರ ಮೇಲೆ ಸಿಟ್ಟಿಗೇಳುತ್ತೀರಿ. ಆದರೆ ತೀರ್ಥಂಕರರನ್ನು ಕೂಡಾ ಈ ಕರ್ಮವು ದಂಗುಬಡಿಸಿದೆ ಎಂದಮೇಲೆ ನಮ್ಮದೇನು ಬಂತು ?

ಯಾರಿಗೆ ತೀರ್ಥಂಕರ ಪ್ರಕೃತಿಯ ಬಂಧ ಉಂಟಾಗುತ್ತದೋ ಅವರು ಬೇಗನೆ ನಮ್ಮ ಕರ್ಮಗಳು ಸಮಾಪ್ತವಾಗಲಿ, ಬೇಗನೆ ಮುಕ್ತಿ ಸಿಗಲಿ ಎಂದು ಬಯಸುತ್ತಾರೆ. ಆದರೆ ಆಯುಕರ್ಮ, ನಿಕಾಚಿ ಕರ್ಮಗಳ ಬಂಧವು ಮೊದಲೇ ಆಗಿರುತ್ತದೋ ಅವರಾದರೋ ಅದನ್ನು ಭೋಗಿಸಲೇ ಬೇಕಾಗುತ್ತದೆ. ಹಾಗೆ ಭೋಗಿಸುವುದಕ್ಕಾಗಿ ಅವರು ಸಂಸಾರದಲ್ಲಿ ಇರಬೇಕಾದುದೂ ಅಗತ್ಯವೇ. ಕರ್ಮಗಳಿರುವಾಗ ಅಲ್ಲಿಯ ವರೆಗೆ ಸಂಸಾರದಿಂದ ಮುಕ್ತನಾಗುವುದಾದರೂ ಹೇಗೆ ?

ನಮ್ಮ ಮನಸ್ಸು ರಾತ್ರಿ-ಹಗಲು ಮಲಿನವಾಗುತ್ತಾ ಇರುತ್ತದೆ. ಬೆಳಗ್ಗಿನಿಂದ ಸಂಜೆಯತನಕ ವಸ್ತ್ರ ಧರಿಸುತ್ತೀರಿ. ಅವೆಲ್ಲಾ ಕೊಳೆಯಾಗಿರುತ್ತವೆ. ಸಂಜೆಯಾದ ಮೇಲೆ ಸ್ನಾನ ಮಾಡುತ್ತೀರಿ, ಬಟ್ಟೆಗಳನ್ನು ಒಗೆಯುತ್ತೀರಿ, ಮತ್ತೆ ಬಟ್ಟೆಗಳನ್ನು ಬದಲಾಯಿಸುತ್ತೀರಿ. ಶುದ್ಧಗೊಳಿಸುತ್ತೀರಿ. ಶುದ್ಧಗೊಳಿಸುವುದು ಅವಶ್ಯವೇ ಆಗಿರುತ್ತದೆ. ಮನೆಯಲ್ಲಿ ಕೂಡಾ ಒಳಗೂ ಹೊರಗೂ ಸ್ವಚ್ಛ ಮಾಡುತ್ತೀರಿ. ಮನೆಯ ಸ್ವಚ್ಛತೆಗೆ ಪೊರಕೆಯಿಂದ ಗುಡಿಸುತ್ತೀರಿ. ಕಟ್ಟಡಕ್ಕೆ ಸುಣ್ಣ-ಬಣ್ಣ ಹಾಕುತ್ತೀರಿ. ಹೊರಗೆ ಮಾತ್ರ ಸ್ವಚ್ಛತೆ ಮಾಡಿದರೆ ಒಳಗೆ ಬೆಳಕಾಗುವುದು ಹೇಗೆ ? ಒಳಗೆ ಬೆಳಕು ಹರಡಬೇಕಾದರೆ ಒಳಗಿನ ಸ್ವಚ್ಛತೆಯೂ ಅಗತ್ಯವಾಗಿ ಬೇಕು. ಇದು ನಮ್ಮ ಅಂತರಂಗಕ್ಕೆ ಸಂಬಂಧಿಸಿದ ವಿಚಾರ. ಒಳಗಿನ ಬೆಳಕು ಉರಿಯಬೇಕಾದರೆ ಅಂತಃಕರಣದಲ್ಲಿ ಧರ್ಮಧ್ಯಾನ ನಡೆಯಬೇಕು. ಆಗಲೇ ಭೇದವಿಜ್ಞಾನವಾಗುವುದು, ಪ್ರಕಾಶ ಬರುವುದು. ಹೊರಗಿನಿಂದ ಕಟ್ಟಡವೇನೊ ಸುಂದರವಾಗಿದೆ. ಆದರಲ್ಲಿ ಒಳಗಡೆ ಬೆಳಕು ಹರಡಬೇಕಾದರೆ ಅಂತರಂಗದ ಸ್ವಚ್ಛತೆಯೂ ಅಷ್ಟೇ ಅಗತ್ಯ. ಶರೀರವನ್ನು ಶೃಂಗರಿಸುವುದಕ್ಕಾಗಿ ಪೌಡರ್ ಇತ್ಯಾದಿಗಳನ್ನು ಹೊರಗಿನಿಂದ ಹಾಕುತ್ತಾರೆ. ಹಾಗೆಯೇ ಒಳಗಿನ ಶೃಂಗಾರಕ್ಕೆ ಧರ್ಮಧ್ಯಾನದ ಆವಶ್ಯಕತೆಯಿದೆ. ಎಲುಬು ಚರ್ಮಗಳಿಗೆ ಮಾಡುವ ಶೃಂಗಾರದಿಂದ ಒಳಗಡೆ ಇರುವ ಆತ್ಮನಿಗೆ ಏನೇನೂ ಲಾಭದಾಯಕವಿಲ್ಲ, ಇಪ್ಪತ್ತನಾಲ್ಕು ಗಂಟೆಯೂ ಪರ-ಪರಿಣತಿಯಲ್ಲಿಯೇ ಮುಳುಗುತ್ತಿರುವುದರಿಂದ ಆತ್ಮನು ಮಲಿನವಾಗುತ್ತಲೇ ಇರುವನು.

ಅದ ಕಾರಣವೇ ಆಚಾರ್ಯ ಅಮೃತಚಂದ್ರರು ''ನಾನು ನನ್ನ ಆತ್ಮನ ಶುದ್ಧಿಗಾಗಿಯೇ ಈ ಶಾಸ್ತ್ರ ರಚನೆ ಮಾಡುತ್ತಿದ್ದೇನೆ. ದ್ರವ್ಯದೃಷ್ಟಿಯಿಂದ ಈ ನನ್ನ ಆತ್ಮನು ಶುದ್ಧನಾಗಿರುವನು, ಆದರೆ ಪರ್ಯಾಯದಲ್ಲಿ ಮಲಿನವಾಗಿರುತ್ತಾನೆ'' ಎಂದರು. ಯಾವನು ತನ್ನ ಕಲ್ಯಾಣವನ್ನು ಮಾಡುತ್ತಾನೋ, ಅವನು ಇತರರಿಗಾಗಿಯೂ ಕಲ್ಯಾಣಕಾರಕನು, ಉಪಕಾರಕನೂ ಆಗಿರುತ್ತಾನೆ. ಜೈನ ಧರ್ಮಕ್ಕನುಸಾರವಾಗಿ ಹೇಳುವುದಾದರೆ ಯಾವನು ತನ್ನ ಕಲ್ಯಾಣವನ್ನು ಮಾಡಲಾರನೋ, ಅವನು ಇತರರ ಕಲ್ಯಾಣಕ್ಕೆ ನಿಮಿತ್ತನೂ ಆಗಲಾರ. ಯಾವನು ಸ್ವಯಂ ಬಲಶಾಲಿಯಲ್ಲವೋ ಅವನು ಇತರರಿಗೆ ಸಹಾಯ ಕೊಡಲು ಹೇಗೆ ಸಾಧ್ಯ ? ದುರ್ಬಲ ವ್ಯಕ್ತಿಯಿಂದ ಬೇರೆಯವರಿಗೆ ಸಹಾಯ ಸಿಗುವುದಾದರೂ ಹೇಗೆ ? ತಪಸ್ವಿಗಳು, ಮುಕ್ತಿಗಾಮಿಗಳು, ತೀರ್ಥಂಕರರು ಇವರೆಲ್ಲಾ ಪರ್ವತಗಳ ಮೇಲೆ ತಪಸ್ಸು ಮಾಡಿ ತಮ್ಮ ಜೀವನವನ್ನು ಎತ್ತರಕ್ಕೇರಿಸಿ ಮೋಕ್ಷ ಪಡೆದರು. ನಾವು ಕೂಡಾ ನಮ್ಮ ಜೀವನವನ್ನು ಎತ್ತರಕ್ಕೇರಿಸೋಣ.

**ಉನ್ನತಂ ಮಾನಸಂ ಯಸ್ಯ ಭಾಗ್ಯಂ ತಸ್ಯ ಸಮುನ್ನತಂ ।**

ಯಾವನ ಮನಸ್ಸು ಪರ್ವತದಂತೆ ಎತ್ತರಕ್ಕೇರಿದೆಯೋ ಅವನ ಭಾಗ್ಯವು ಕೂಡಾ ಉನ್ನತಕ್ಕೇರುವುದು. ಯಾವನ ಮನಸ್ಸು ಮಣ್ಣಿನ ಹೊಂಡದಂತಿದೆಯೋ ಅವನ ಭಾಗ್ಯವು ಕೂಡಾ ಅದರಂತೆಯೇ ಆಗಿರುತ್ತದೆ. ನಾವು ನಮ್ಮ ಪರಿಣಾಮಗಳ ವಿಶುದ್ಧಿಗಾಗಿ ನಮ್ಮ ಶಕ್ತಿಗನುಸಾರವಾಗಿ ಧರ್ಮಧ್ಯಾನ, ಸಮ್ಯಗ್ದರ್ಶನ-ಜ್ಞಾನ-ಚಾರಿತ್ರವನ್ನು ಅವಶ್ಯ ಮಾಡಬೇಕು. ಎಷ್ಟು ಸಾಧ್ಯವೋ ಅಷ್ಟನ್ನು ಮಾಡಿರಿ. ಯಾವುದನ್ನು ಮಾಡಲು ಅಸಾಧ್ಯವೋ ಅದರ ಬಗ್ಗೆ ಶ್ರದ್ಧೆಯಾದರೂ ಇರಲಿ. ಆದರೆ ಅದನ್ನು ಬಿಡಬೇಡಿ. ಜೀವನದಲ್ಲಿ ಏನು ಭರವಸೆಯಿದೆ ? ನಮಗಾದರೋ ಯಾವಾಗ ಅನಾರೋಗ್ಯ ಉಂಟಾಗುತ್ತದೋ ಆಗ ಮಾತ್ರ ಧರ್ಮಧ್ಯಾನದ ನೆನಪಾಗುತ್ತದೆ. ಆದಾಗಲೇ ಮಂತ್ರವೂ ನೆನಪಿಗೆ ಬರುವುದು.

ಶ್ರೀಮದ್ ರಾಯಚಂದ್ರಜೀಯವರು ಒಂದು ರೂಪಕ ಹೀಗೆ ಕೊಟ್ಟಿದ್ದಾರೆ:- ಒಬ್ಬ ಸೇಠ್ ಇದ್ದ. ಬಹಳ ಧನ ಸಂಪಾದಿಸಿದ. ಪರಿವಾರಕ್ಕಾಗಿ ಸಾಕಷ್ಟು ವೈಭವ, ಸಾಕಷ್ಟು ಧನ-ದೌಲತ್ ಒಟ್ಟುಗೂಡಿಸಿದ. ಆದರೆ ಪೂರ್ವ ಕರ್ಮದ ಉದಯದಿಂದ ಅವನಿಗೆ ಕುಷ್ಠ ರೋಗ ಬಂತು. ಮನೆಯಲ್ಲಿ ಯಾರೊಬ್ಬರೂ ಅವನನ್ನು ಮುಟ್ಟುವವರಿಲ್ಲ. ಕೇವಲ ಪತ್ನಿ ಮಾತ್ರ ಅವನ ಸೇವೆ ಮಾಡುತ್ತಿದ್ದಳು. ಒಮ್ಮೆ ಅವನ ಮಕ್ಕಳು ತಾಯಿಯೊಡನೆ ಹೇಳಿದರು- ''ಅಮ್ಮ ನೀವು ಪಿತಾಜಿಯ ಸೇವೆ ಮಾಡುತ್ತೀರಿ, ಅವರನ್ನು ಮುಟ್ಟುತ್ತೀರಿ. ನೀವು ನಮ್ಮನ್ನು ಮುಟ್ಟಬೇಡಿರಿ.'' ಈ ಮಾತುಗಳನ್ನು ತಂದೆಯೂ ಕೇಳಿಸಿಕೊಂಡ. ಅವನಿಗೆ ಬಹಳ ಗ್ಲಾನಿಯಾಯಿತು. ಅವನು ಮನೆಯನ್ನು ಬಿಟ್ಟು ಎಲ್ಲಿಗೋ ಹೊರಟುಹೋದ. ನಡೆಯುತ್ತಾ-ನಡೆಯುತ್ತಾ ಕಾಡನ್ನು ಸೇರಿದ. ಇಲ್ಲಿ ಈ ಶರೀರವನ್ನು ತ್ಯಜಿಸಿಬಿಡುತ್ತೇನೆಂದು ಯೋಚಿಸಿದ. ಅವನಲ್ಲಿ ಆತ್ಮಹತ್ಯೆಯ ವಿಚಾರ ಬಂದಿತು. ಅಷ್ಟರಲ್ಲಿ ಅಲ್ಲೊಬ್ಬರು ಮುನಿರಾಜರು



ಕಾಣಿಸಿದರು. ಅವರು ತಪಸ್ಸು ಮಾಡುತ್ತಿದ್ದರು. ಸೇಠ್‌ಜೀ ಮುನಿರಾಜರ ಬಳಿಗೆ ಹೋಗಿ- ''ಮುನಿರಾಜ್, ಈ ರೋಗ ಬರುವಂತಹ ಯಾವ ಕೆಟ್ಟ ಕೆಲಸವನ್ನೂ ನಾನು ಮಾಡಿಲ್ಲ, ಮತ್ತೆ ಹೀಗೇಕಾಯಿತು ?'' ಎಂದನು. ಆಗ ಮುನಿರಾಜರು ''ಇದು ನಿನ್ನ ಪೂರ್ವಜನ್ಮದ ಕರ್ಮಫಲ. ನೀನು ನಿನ್ನ ಹಿಂದಿನ ಜನ್ಮದಲ್ಲಿ ಕುಷ್ಠರೋಗಿಯನ್ನು ತಿರಸ್ಕಾರದಿಂದ ನೋಡಿದ್ದೆ'' ಎಂದರು. ''ಈಗೇನು ಮಾಡಲಿ ಮಹಾರಾಜ್'' ಎಂದು ಸೇಠ್‌ಜೀ ಕೇಳಲು ''ನೀನು ಸನ್ಯಾಸಿಯಾಗು, ತಪಸ್ಸು ಮಾಡು'' ಎಂದು ಹೇಳಿ, ಮುನಿದೀಕ್ಷೆ ಕೊಟ್ಟರು. ಕಾಡಿನ ಶುದ್ಧ ಹವೆ, ಪರಿಣಾಮಗಳ ನಿರ್ಮಲತೆ, ಸತ್ಸಂಗ, ಶುದ್ಧ ಆಹಾರ-ಪಾನೀಯ, ಇವೆಲ್ಲವುಗಳ ಪ್ರಭಾವದಿಂದ ಮೂರು-ನಾಲ್ಕು ವರ್ಷಗಳಲ್ಲಿ ರೋಗ ವಾಸಿಯಾಗಿ ಶರೀರವು ಹಿಂದಿನಂತೆ ಸ್ವಚ್ಛವಾಯಿತು. ಸೌಂದರ್ಯ ಮತ್ತೆ ಕಾಣಿಸಿಕೊಂಡಿತು. ಮುನಿರಾಜರು ಅವನಿಗೆ ಅಧ್ಯಯನ ಮಾಡಿಸಿದರು. ಅವನು ಕ್ರಮೇಣ ಜ್ಞಾನಿಯಾದನು. ಮತ್ತೆ ಪ್ರವಚನವನ್ನು ಮಾಡಲು ತೊಡಗಿದನು. ಅವನ ಪ್ರವಚನಗಳ ಬಗ್ಗೆ ಬಹುದೂರದ ತನಕ ಪ್ರಶಂಸೆ ಚರ್ಚೆ ನಡೆಯಿತು. ರಾಜರು, ಪ್ರಜೆಗಳು ಎಲ್ಲರೂ ಅವನ ಪ್ರವಚನ ಕೇಳಲು ಬರತೊಡಗಿದರು.

ರಾಜಾ ಶ್ರೇಣಿಕನು ಒಂದು ವರ್ಷದಲ್ಲಿ ನೂರ ಒಂದು ಮುನಿಗಳ ದರ್ಶನ ಮಾಡುತ್ತೇನೆಂದು ನಿಯಮ ಮಾಡಿಕೊಂಡಿದ್ದ. ಒಮ್ಮೆ ಅವನು ನೂರು ಮುನಿಗಳ ದರ್ಶನ ಮಾಡಿ ಮುಗಿಸಿದ್ದನು. ಒಬ್ಬ ಮುನಿಯ ದರ್ಶನ ಮಾತ್ರ ಬಾಕಿ ಉಳಿದಿತ್ತು. ಹಾಗೆ ಮುನಿದರ್ಶನಾಪೇಕ್ಷೆಯಾಗಿ ಬರುತ್ತಿರುವಾಗ ದಾರಿಯಲ್ಲಿ ಒಬ್ಬ ಸೌದೆ ಸೀಳುವವನು ಸಿಕ್ಕಿದ. ಶ್ರೇಣಿಕ ಅವನೊಡನೆ ''ಇಲ್ಲಿ ಯಾರಾದರೂ ಮುನಿರಾಜರು ಇದ್ದಾರೆಯೇ ?'' ಎಂದು ಕೇಳಿದ. ಅದಕ್ಕೆ ಸೌದೆ ಒಡೆಯುವವನು ''ಹೌದು, ಇಲ್ಲೊಬ್ಬರು ಅನಾಥ ಮುನಿಗಳಿದ್ದಾರೆ'' ಎಂದನು. ಶ್ರೇಣಿಕನಿಗೆ 'ಅನಾಥ ಮುನಿ' ಎಂಬ ಸಂಬೋಧನೆ ಕೇಳಿ ದಿಗಿಲಾಯಿತು. ಆದರೂ ಅವನು ಆ ಮುನಿಯಿದ್ದಲ್ಲಿಗೆ ಹೋಗಿ ''ಮಹಾರಾಜ್, ನಿಮ್ಮನ್ನು ಜನರು ಅನಾಥ ಮುನಿ ಎಂದು ಏಕೆ ಕರೆಯುತ್ತಾರೆ'' ಎಂದು ಕೇಳಿದನು. ಅದಕ್ಕೆ ಅವರು ನನ್ನನ್ನು ಪರಿವಾರದವರು ತ್ಯಜಿಸಿದರು, ಆದ ಕಾರಣ ಅನಾಥ ಮುನಿ ಎಂದು ಕರೆಯುತ್ತಾರೆ'' ಎಂದರು.

ಹೀಗೆ ಮನೆಯವರಿಂದ ತ್ಯಜಿಸಲ್ಪಟ್ಟ ಅನಾಥ ಮುನಿಗಳು ದೀಕ್ಷೆ ಪಡೆದು ಮಹಾಮುನಿಗಳಾಗಿ ಪ್ರವಚನ ನೀಡುತ್ತಿರುವ ವಿಚಾರವನ್ನು ತಿಳಿದ ಮನೆಯವರೇ ಅಂದಿನ ಪ್ರವಚನಕ್ಕೆ ಪರಿವಾರ ಸಹಿತ ಬಂದಿದ್ದರು. ಅವರು ಎಲ್ಲಕ್ಕಿಂತ ಮುಂದೆ ಪ್ರವಚನ ಕೇಳಲು ಕುಳಿತಿದ್ದರು. ಪ್ರವಚನವನ್ನು ಕೇಳಿ ಗದ್ಗದಿತರಾದರು. ಪ್ರವಚನದ ಬಳಿಕ ಹೀಗೆ ಹೇಳತೊಡಗಿದರು. ''ಇವರು ನಮ್ಮ ತಂದೆ, ಇವರು ನನ್ನ ಪತಿ, ಇವರು ನನ್ನ ಮಾವ'' ಇತ್ಯಾದಿ ಆಗ ಮುನಿ ಮಹಾರಾಜರು ''ಇವರು ನಮಗೆ ಯಾರೂ ಅಲ್ಲವೆಂಬಂತೆ ಕಾಣಿಸುತ್ತಾರೆ'' ಎಂದರು.

ಧರ್ಮವು ಮನಸ್ಸಿನಲ್ಲಿರಬೇಕು, ಆಗಲೇ ಆತ್ಮನು ಪವಿತ್ರನಾಗುತ್ತಾನೆ. ಧರ್ಮಾನುರಾಗಿಗಳಾದರೆ ಸ್ವಲ್ಪ ಸಮಯದಲ್ಲೇ ಧರ್ಮಾತ್ಮರಾಗಬಲ್ಲಿರಿ. ಪರಮಾತ್ಮನ ಶಕ್ತಿಯನ್ನು ಗಳಿಸಬಲ್ಲಿರಿ. ಧರ್ಮದಲ್ಲಿ ಮಹಾನ್ ಶಕ್ತಿಯಿದೆ. ಆದ ಕಾರಣ ಆಚಾರ್ಯ ಅಮೃತಚಂದ್ರರು''ಮಮ ಪರಮ ವಿಶುದ್ಧಿ'' ಎಂದರು. ಆಚಾರ್ಯ ಅಮೃತಚಂದ್ರರು ನಮಗೆ ಅಮೃತವನ್ನು ಉಣಿಸಿದರು. ಅವರ ವಾಣಿಯೇ ಅ-ಮೃತ ಅರ್ಥಾತ್ ಮರಣವಿಲ್ಲದುದು. ಅವರು ತಮ್ಮ ವಿಶುದ್ಧಿಗಾಗಿ ಗ್ರಂಥ ರಚನೆ ಮಾಡಿದರು. ನೀವು ಕೂಡಾ ನಿಮ್ಮ ಸುಖಕ್ಕಾಗಿ ಧರ್ಮಧ್ಯಾನ ಮಾಡಿರಿ. ಹೂವಿನ ಸುಗಂಧವು ಗಾಳಿಯೊಂದಿಗೆ ಸೇರಿ ಮೂಗಿಗೆ ಸೇರಿತೆಂದಾದರೆ ಮನಸ್ಸು ಪ್ರಸನ್ನವಾಗುತ್ತದೆ. ನಾವು ಹೂವಿನಂತೆ ಪರಿಮಳಯುಕ್ತರಾಗೋಣ. ಆಸುಪಾಸಿನಲ್ಲಿ ಪರಿಮಳವನ್ನು ಹರಡೋಣ, ವಾಸನೆಯನ್ನಲ್ಲ, ಸುವಾಸನೆಯನ್ನು. ಮುನಿರಾಜರು ಧರ್ಮಾತ್ಮರು, ಯಾವುದೇ ಉದ್ಯಾನಕ್ಕೆ ಬಂದರೆಂದಾದರೆ ಆ ಉದ್ಯಾನದಲ್ಲಿ ಋತುಮಾನವನ್ನು ಮೀರಿ ಫಲ-ಪುಷ್ಪಗಳು ತುಂಬಿ ತುಳುಕುತ್ತವೆಂದು ನಾವು ಪುರಾಣಗಳಲ್ಲಿ ಓದುತ್ತೇವೆ. ಈ ಕಲಿಯುಗದಲ್ಲಿ ಆ ರೀತಿಯ ಫಲ-ಪುಷ್ಪಗಳು ಗಿಡ-ಮರಗಳಲ್ಲಿ ಕಾಣಿಸದೆ ಇರಬಹುದು. ಆದರೆ ನಮ್ಮ ಪ್ರವಚನವನ್ನು ಕೇಳಿದ ನಿಮ್ಮಲ್ಲಿ ಯಾರಿಗಾದರೂ ಧರ್ಮಧ್ಯಾನದ ಫಲ ಲಭಿಸಿದೆ ಎಂದಾದರೆ ನಮ್ಮ ಈ ಚಾತುರ್ಮಾಸ ಸಾರ್ಥಕವೆಂದು ಭಾವಿಸುತ್ತೇವೆ.

---

## ವಿದ್ಯಾನಂದ ವಚನಾಮೃತ

*ಒಬ್ಬ ವಕೀಲ ಸುಪ್ರೀಮ್ ಕೋರ್ಟಿನಲ್ಲಿ ಈ ಮೊಕದ್ದಮೆಯನ್ನು ಹೀಗೆ ಗೆಲ್ಲಬಹುದು ಎಂದು ಸಲಹೆ ಕೊಟ್ಟರೆ ಸಾಕು, ಅವನಿಗೆ ಇಪ್ಪತ್ತೈದು ಸಾವಿರ ರೂಪಾಯಿ ಶುಲ್ಕ ಕೊಡುತ್ತಾರೆ. ಹಾಗಾದರೆ ನಮಗೆ ಎಂದರೆ ಮೋಕ್ಷಮಾರ್ಗ ತಿಳಿಸಿಕೊಡುವವರಿಗೆ ಎಷ್ಟು ಶುಲ್ಕ ಕೊಡಬೇಕಾಗಬಹುದು ಹೇಳಿ. ನಾವು ನಿಮ್ಮ ಹತ್ತಿರ ಬೇಡುವುದಿಲ್ಲ ಬೇಡಿದರೆ ನಾಳೆಯಿಂದ ನೀವುಗಳು ಬರುವುದೇ ನಿಂತು ಹೋಗಬಹುದು. ನಾವು ರಾತ್ರಿ-ಹಗಲು ಓದಿ ಅದರ ಸಾರವನ್ನು ನಿಮ್ಮ ಮುಂದಿಡುವೆವು. ಈ ಸತ್ಸಂಗತಿ ಅತ್ಯಂತ ಬೆಲೆಯುಳ್ಳದ್ದು. ಧರ್ಮದ ನಾಲ್ಕು ಮಾತುಗಳನ್ನು ಕೇಳಲು ಕೂಡಾ ಪುಣ್ಯವಿರಬೇಕು. ನೀವು ಒಂದು ಗಂಟೆ ಅಥವಾ ಸಿಕ್ಕಿದಷ್ಟು ಸಮಯ ದೇವಸ್ಥಾನಕ್ಕೆ ಹೋಗಿ ಅಥವಾ ಮನೆಯಲ್ಲೇ ಕುಳಿತಾದರೂ ಜಪ ಮಾಡಿ, ಸ್ವಾಧ್ಯಾಯ ಮಾಡಿ. ಇದರಿಂದ ನಿಮ್ಮ ಆತ್ಮ ಕಲ್ಯಾಣವಾಗುವುದು.*